ಸೋಮವಾರ, ಡಿಸೆಂಬರ್ 5, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 335 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಆಳ-ಅಗಲ
ಏಕತೆಯತ್ತ ದಲಿತರ ನಡೆ

ಭಗವದ್ಗೀತೆ ಕಡ್ಡಾಯವಾಗಿ ಕಲಿಸಬೇಕು: ಕಾಗೇರಿ 5

ಮಿದುಳು ಜ್ವರ: ಲಸಿಕೆ ಇಂದಿನಿಂದ 6

ಇಂದು ಶಿಕ್ಷಣ 7

ನೇಮಕಾತಿ ಅಕ್ರಮ, ಹಣ ದುರ್ಬಳಕೆ ಕುರಿತು ಸಿಂಡಿಕೇಟ್ ಸದಸ್ಯರ ದೂರು
ದಾವಣಗೆರೆ ವಿ.ವಿ: ಅಕ್ರಮ ತನಿಖೆಗೆ ಸಮಿತಿ 5

ಕಾಂಗ್ರೆಸ್ ಚಾಲನಾ ಸಮಿತಿ ಸಭೆಯಲ್ಲಿ ಪಕ್ಷದ ಅಧ್ಯಕ್ಷ ಖರ್ಗೆ ಎಚ್ಚರಿಕೆ

‘ಹೊಣೆ ನಿರ್ವಹಿಸಿ, ಇಲ್ಲ ದಾರಿ ಬಿಡಿ’

ಪ್ರಜಾವಾಣಿ ವಾರ್ತೆ

ದೆಹಲಿಯಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಪಕ್ಷದ ಚಾಲನಾ ಸಮಿತಿ ಸಭೆಯಲ್ಲಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಮಾತುಕತೆಯಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ನವದೆಹಲಿ: ‘ಪಕ್ಷದ ಕೆಲಸ ನಿರ್ಲಕ್ಷಿಸುವವರು ಅಥವಾ ವಹಿಸಿದ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾದವರು ಹುದ್ದೆ ತ್ಯಜಿಸಿ ಹೊಸಬರಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಎಚ್ಚರಿಕೆ ನೀಡಿದರು.

ಪಕ್ಷದ ಅಧ್ಯಕ್ಷರಾದ ನಂತರ, ಭಾನುವಾರ ಇಲ್ಲಿ ನಡೆದ ಕಾಂಗ್ರೆಸ್ ಚಾಲನಾ ಸಮಿತಿಯ ಮೊದಲ ಸಭೆಯಲ್ಲಿ ಮಾತನಾಡಿದ ಅವರು, ‘ಪಕ್ಷ ಸಂಘಟನೆ ಬಲಪಡಿಸುವ ಸಲುವಾಗಿ ಉನ್ನತ ಮಟ್ಟದಿಂದ ಕೆಳಹಂತದವರೆಗೂ ಉತ್ತರದಾಯಿತ್ವ ಅಗತ್ಯ’ ಎಂದು ಪ್ರತಿಪಾದಿಸಿದರು.

‘ಪಕ್ಷ ಸಂಘಟನೆ ಮಾಡಿದರೂ ಬಂತು, ಮಾಡದಿದ್ದರೂ ಆಯಿತು. ವರಿಷ್ಠರು ಇದನ್ನೆಲ್ಲಾ ಗಮನಿಸುವುದಿಲ್ಲ ಎಂಬ ಮನೋಭಾವ ಕೆಲವರಲ್ಲಿದೆ. ಇಂಥ ಜಾಯಮಾನ ಸರಿ ಅಲ್ಲ ಹಾಗೂ ಒಪ್ಪವಂಥದ್ದೂ ಅಲ್ಲ. ಕೊಟ್ಟ ಕೆಲಸವನ್ನು ಮಾಡಲಾಗದವರು ಹೊಸಬರಿಗೆ ದಾರಿ ಮಾಡಿಕೊಡಬೇಕು’ ಎಂದು ಅವರು ತೀಕ್ಷ್ಣವಾಗಿ ಹೇಳಿದರು.

‘ಕಾಂಗ್ರೆಸ್ ಪಕ್ಷದ ಸಂಘಟನೆ ಪ್ರಬಲವಾಗಿ, ಉತ್ತರದಾಯಿತ್ವ ಹೊಂದಿದಾಗ ಮಾತ್ರ ಮುಂಬರುವ ಚುನಾವಣೆಗಳಲ್ಲಿ ಗೆದ್ದು, ಜನರ ಹಾಗೂ ದೇಶದ ಸೇವೆ ಮಾಡಲು ಸಾಧ್ಯವಾಗುತ್ತದೆ. ಜನಪರ ವಿಷಯಗಳನ್ನು ಮುಂದಿಟ್ಟುಕೊಂಡು 30 ರಿಂದ 90 ದಿನಗಳ ಕಾಲ ಹೋರಾಟ ನಡೆಸಬೇಕು. ಈ ಸಂಬಂಧ ರೂಪುರೇಷೆಗಳನ್ನು ಸಿದ್ಧಪಡಿಸಬೇಕು’ ಎಂದು ಅವರು ರಾಜ್ಯಗಳ ಉಸ್ತುವಾರಿಗಳಿಗೆ ಸೂಚಿಸಿದರು.

‘ನೀಲನಕ್ಷೆ ಸಿದ್ಧಪಡಿಸಿ’: ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಉಸ್ತುವಾರಿಗಳು ಹೆಚ್ಚು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕು. 2024ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ನೀಲನಕ್ಷೆಯನ್ನು ಸಿದ್ಧಪಡಿಸಬೇಕು ಎಂದು ಖರ್ಗೆ ಸೂಚಿಸಿದರು.

‘ಪ್ರಧಾನ ಕಾರ್ಯದರ್ಶಿಗಳು ಹಾಗೂ ಉಸ್ತುವಾರಿಗಳು ಸಂಬಂಧಪಟ್ಟ ರಾಜ್ಯಗಳಿಗೆ ತಿಂಗಳಲ್ಲಿ ಕನಿಷ್ಠ 10 ದಿನಗಳ ಮಟ್ಟಿಗಾದರೂ ಭೇಟಿ ನೀಡಿದ್ದೀರಾ? ಪ್ರತಿ ಜಿಲ್ಲೆ ಮತ್ತು ಇತರ ಘಟಕಗಳೊಂದಿಗೆ ಸಂಪರ್ಕದಲ್ಲಿದ್ದು, ಕ್ಷೇತ್ರಗಳಿಗೆ ಸಂಬಂಧಿಸಿ ವಸ್ತುಸ್ಥಿತಿ ತಿಳಿಯಲು ಪ್ರಯತ್ನಿಸಿದ್ದೀರಾ’ ಎಂದು ಪ್ರಶ್ನಿಸಿದರು.

‘ಮುಂದಿನ ವರ್ಷ ಹಾಗೂ 2024ರಲ್ಲಿ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಸಂಬಂಧಪಟ್ಟ ಘಟಕಗಳು ಮಾಡಿಕೊಂಡಿರುವ ಸಿದ್ಧತೆಗಳೇನು’ ಎಂದು ಅವರು ಕೇಳಿದರು.

‘ರಾಜ್ಯ ಘಟಕಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪಕ್ಷದ ಶಾಸಕರು ಮತ್ತು ಸಂಸದರು ಈ ಎಲ್ಲ ಸಂಗತಿಗಳಿಗೆ ಸಂಬಂಧಿಸಿ ನೀಲನಕ್ಷೆಯೊಂದನ್ನು ಸಿದ್ಧಪಡಿಸದಿದ್ದರೆ, ಅವುಗಳನ್ನು ತಳಮಟ್ಟದಲ್ಲಿ ಅನುಷ್ಠಾನಕ್ಕೆ ತರದಿದ್ದಲ್ಲಿ ವಹಿಸಿರುವ ಜವಾಬ್ದಾರಿಯನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ’ ಎಂದೂ ಎಚ್ಚರಿಸಿದರು.

‘ದೇಶದಲ್ಲಿ ದಲಿತರು, ಬುಡಕಟ್ಟು ಜನರು, ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ತುಳಿತಕ್ಕೆ ಒಳಗಾದವರಲ್ಲಿ ಅಭದ್ರತೆ ಮನೆ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಜನರ ಹಕ್ಕುಗಳನ್ನು ದಮನ ಮಾಡುತ್ತಿದೆ. ಅವುಗಳ ರಕ್ಷಣೆಗಾಗಿ ಹೋರಾಟ ನಡೆಸುವುದು ಕಾಂಗ್ರೆಸ್‌ನ ಜವಾಬ್ದಾರಿ’ ಎಂದರು.

‘ಚೀನಾ ನಮ್ಮ ಭೂಪ್ರದೇಶವನ್ನು ಆಕ್ರಮಿಸಲು ಯತ್ನಿಸುತ್ತಿದೆ. ಆಕ್ರಮಿತ ಪ್ರದೇಶಗಳಲ್ಲಿ ನಿತ್ಯವೂ ಸೇನೆಯ ಹೊಸ ನೆಲೆಗಳನ್ನು ಸ್ಥಾಪಿಸುತ್ತಿದೆ. ಆದರೆ, ಈ ಬೆಳವಣಿಗೆಗಳ ಬಗ್ಗೆ ಕೇಂದ್ರ ಸರ್ಕಾರ ಮಾತ್ರ ಮೌನವಾಗಿದೆ. ಇದು ದೇಶದ ಸಮಗ್ರತೆಯ ಮೇಲಿನ ದಾಳಿ’ ಎಂದು ಖರ್ಗೆ ಹೇಳಿದರು.

ಎಐಸಿಸಿ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಹಿರಿಯ ನಾಯಕರು ಪಾಲ್ಗೊಂಡಿದ್ದರು.

‘ಜ.26ರಿಂದ ಅಭಿಯಾನ’: ‘ಭಾರತ್ ಜೋಡೊ ಯಾತ್ರೆಯ ಮುಂದುವರಿದ ಭಾಗವಾಗಿ ಜನವರಿ 26ರಿಂದ ಎರಡು ತಿಂಗಳ ಕಾಲ ‘ಹಾಥ್ ಸೆ ಹಾಥ್ ಜೋಡೊ ಅಭಿಯಾನ್’ ನಡೆಸಲು ಚಾಲನಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಅಭಿಯಾನದ ಅಂಗವಾಗಿ ಎಲ್ಲ ರಾಜ್ಯಗಳಲ್ಲಿ ಪಕ್ಷದ ವತಿಯಿಂದ ‘ಮಹಿಳೆಯರ ನಡಿಗೆ’ಯನ್ನು ಸಹ ಹಮ್ಮಿಕೊಳ್ಳಲು ಸಭೆ ನಿರ್ಧರಿಸಿತು.

ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಈ ‘ಮಹಿಳೆಯರ ನಡಿಗೆ’ಯಲ್ಲಿ ಪಾಲ್ಗೊಳ್ಳುವರು.

ಫೆಬ್ರುವರಿಯಲ್ಲಿ ಸರ್ವಸದಸ್ಯರ ಅಧಿವೇಶನ

ಛತ್ತೀಸಗಡ ರಾಜಧಾನಿ ರಾಯಪುರದಲ್ಲಿ ಫೆಬ್ರುವರಿ ಮೂರನೇ ವಾರದಲ್ಲಿ ಕಾಂಗ್ರೆಸ್‌ನ 85ನೇ ಸರ್ವಸದಸ್ಯರ ಅಧಿವೇಶನವನ್ನು ಆಯೋಜಿಸಲು ಚಾಲನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ‘ಈ ಅಧಿವೇಶನದಲ್ಲಿ ಹಲವಾರು ವಿಷಯಗಳ ಬಗ್ಗೆ ಚರ್ಚಿಸಲಾಗುವುದು. ನಂತರ ಬೃಹತ್ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗುವುದು’ ಎಂದರು.

ಈ ಅಧಿವೇಶನವು ಫೆಬ್ರುವರಿ 20ರಿಂದ 25ರ ನಡುವೆ ನಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

‘ಕನ್ಯಾಕುಮಾರಿಯಿಂದ ಆರಂಭವಾಗಿರುವ ಭಾರತ್ ಜೋಡೊ ಯಾತ್ರೆಯನ್ನು ಜನವರಿ 26ರಂದು ಶ್ರೀನಗರದಲ್ಲಿ ಮುಕ್ತಾಯಗೊಳಿಸುವ ಗುರಿ ಹೊಂದಲಾಗಿದೆ. ಯಾತ್ರೆಯು ಡಿ. 24ರಂದು ದೆಹಲಿ ಪ್ರವೇಶಿಸಲಿದೆ’ ಎಂದು ಪಕ್ಷದ ಸಂವಹನ ವಿಭಾಗದ ಮುಖ್ಯಸ್ಥ ಜೈರಾಮ್ ರಮೇಶ್ ಹೇಳಿದರು.



ಅಲ್ ರಯಾನ್, ಕತಾರ್: ಲಯೊನೆಲ್ ಮೆಸ್ಸಿ ಅವರ ಕಾಲ್ಚಳಕದ ನೆರವಿನಿಂದ ಅರ್ಜೆಂಟೀನಾ ತಂಡ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಶನಿವಾರ ತಡರಾತ್ರಿ ನಡೆದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಅರ್ಜೆಂಟೀನಾ 2–1 ಗೋಲುಗಳಿಂದ ಆಸ್ಟ್ರೇಲಿಯಾ ವಿರುದ್ಧ ಗೆದ್ದಿತು. ಮೆಸ್ಸಿ ವೃತ್ತಿಜೀವನದಲ್ಲಿ ಒಟ್ಟು ಒಂದು ಸಾವಿರ ಪಂದ್ಯಗಳನ್ನು (ಕ್ಲಬ್ ಮತ್ತು ಅಂತರರಾಷ್ಟ್ರೀಯ ಪಂದ್ಯ ಸೇರಿ) ಆಡಿದ ಸಾಧನೆ ಮಾಡಿದರು.

- **9** ವಿಶ್ವಕಪ್ ಟೂರ್ನಿಗಳಲ್ಲಿ ಮೆಸ್ಸಿ ಗಳಿಸಿರುವ ಗೋಲು
- ಡಿಯೆಗೊ ಮರಡೋನಾ (8 ಗೋಲು) ಸಾಧನೆ ಹಿಂದಿಕ್ಕಿದ ಮೆಸ್ಸಿ
- ವಿಶ್ವಕಪ್ ಟೂರ್ನಿಯ ನಾಕೌಟ್ ಹಂತದಲ್ಲಿ ಮೆಸ್ಸಿ ಗೋಲು ಗಳಿಸಿದ್ದು ಇದೇ ಮೊದಲು

789 ವೃತ್ತಿಜೀವನದ ಒಟ್ಟು ಗೋಲು

94 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಗೋಲು

ಗೋಲು ವಿವರ

ಅರ್ಜೆಂಟೀನಾ–2
ಲಯೊನೆಲ್ ಮೆಸ್ಸಿ (35ನೇ ನಿ.)
ಜೂಲಿಯನ್ ಅಲ್ವರೇಜ್ (57ನೇ ನಿ.)
ಆಸ್ಟ್ರೇಲಿಯಾ–1
ಎಂಜೊ ಫರ್ನಾಂಡೆಜ್ (77ನೇ ನಿ., ಉಡುಗೊರೆ ಗೋಲು)

ವಿವರ ಪುಟ 11

ಬೈಕ್‌ಗೆ ರವಿಕುಮಾರ್ ಕಾರು ಡಿಕ್ಕಿ: ಜನರ ತರಾಟೆ

‘ನೀನು ಯಾವ ಸೀಮೆ ಎಂಎಲ್‌ಸಿ?’

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್ ಸದಸ್ಯ ಎನ್‌.ರವಿಕುಮಾರ್ ಅವರಿಗೆ ಜನರು ಮುತ್ತಿಗೆ ಹಾಕಿದ್ದರು

ಕೋಲಾರ: ‘ನೀವು ಯಾವ ಸೀಮೆ ಎಂಎಲ್‌ಸಿ? ಎಂಎಲ್‌ಸಿ, ಎಂಎಲ್‌ಎ ಆದ್ರೆ ಏನು ಬೇಕಾದರೂ ಮಾಡಬಹುದಾ? ಮಾನ ಮರ್ಯಾದೆ ಇದೆಯಾ? ಮಾನವೀಯತೆ ಬೇಡವೇ?’ – ವಿಧಾನಪರಿಷತ್ ಸದಸ್ಯ, ಬಿಜೆಪಿಯ ಎನ್‌.ರವಿಕುಮಾರ್ ಅವರಿಗೆ ಜನರು ತರಾಟೆಗೆ ತೆಗೆದುಕೊಂಡ ಪರಿ ಇದು.

ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ರವಿಕುಮಾರ್ ಅವರು ಪ್ರಯಾಣಿಸುತ್ತಿದ್ದ ಕಾರು ಭಾನುವಾರ ತಾಲ್ಲೂಕಿನ ಲಕ್ಷ್ಮಿಸಾಗರ ಗೇಟ್ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಗಾಯಗೊಂಡ ಸವಾರನನ್ನು ಆಸ್ಪತ್ರೆಗೆ ಸೇರಿಸದೇ ಸ್ಥಳದಿಂದ ಹೊರಟಿದ್ದ ರವಿಕುಮಾರ್ ಅವರನ್ನು ತಡೆದ ಜನರು ತರಾಟೆಗೆ ತೆಗೆದುಕೊಂಡರು.

‘ಅಪಘಾತ ನಡೆದ ಸಂದರ್ಭಗಳಲ್ಲಿ ಕೆಲ ಸಚಿವರು ತಮ್ಮ ಕಾರಿನಲ್ಲೇ ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಕೇಳಿಲ್ಲವೇ’ ಎಂದು ಪ್ರಶ್ನಿಸಿದರು. ಜನರ ಆಕ್ರೋಶ ಎದುರಿಸಲಾಗದೆ ತಬ್ಬಿಬ್ಬಾಗಿ ಕಾರು ಹತ್ತಿ ಕುಳಿತ ರವಿಕುಮಾರ್ ಅವರನ್ನು ‘ಇಳಿಯಯ್ಯಾ ಕೆಳಗೆ, ಪೊಲೀಸರೇನು ನಿನ್ನ ಜೇಬಿನಲ್ಲಿದ್ದಾರಾ?’ ಎಂದು ಏರಿದ ದನಿಯಲ್ಲಿ ಹೇಳುವ ಮೂಲಕ ಕಾರಿನಿಂದ ಕೆಳಗಿಳಿಸಿದರು.

‘ಕಾರನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ದೂರು ದಾಖಲಿಸಿ’ ಎಂದು ಕಾರಿಗೆ ಮುತ್ತಿಗೆ ಹಾಕಿದರು. ಅಷ್ಟರಲ್ಲಿ ಸ್ಥಳಕ್ಕೆ ಬಂದ ವೇಮಗಲ್ ಠಾಣೆಯ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು. ಬೈಕ್ ಸವಾರ ಹೊಸಕೋಟೆ ತಾಲ್ಲೂಕಿನ ಶಿವನಾಪುರ ಗ್ರಾಮದ ಗೋಪಾಲ್ ಅವರ ಕೈ ಮತ್ತು ಕಾಲಿಗೆ ಗಾಯಗಳಾಗಿದ್ದು, ಚಿಕಿತ್ಸೆ ಪಡೆದಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

> ಸವಾರ ಇದ್ದಕ್ಕಿದ್ದಂತೆ ಎಡಬದಿಯಿಂದ ಬಲಬದಿಗೆ ಬಂದಿದ್ದರಿಂದ ಬೈಕ್‌ಗೆ ಕಾರು ತಾಗಿತು. ಕೆಳಗೆ ಬಿದ್ದ ಆತನನ್ನು ನಾನೇ ಮೇಲೆತ್ತಿದೆ. ಸುತ್ತಲಿನವರು ವಿಚಾರ ಗೊತ್ತಾಗದೆ ಗಲಾಟೆ ಮಾಡಿದರು. ಕೊನೆಗೆ ಬೈಕ್ ಸವಾರನ ತಪ್ಪು ಅವರಿಗೆ ಅರಿವಾಯಿತು. ತನ್ನ ತಪ್ಪಿದ್ದರಿಂದ ಸವಾರ ಕೂಡ ಪ್ರತಿರೋಧ ತೋರಲಿಲ್ಲ
>
> **ಎನ್‌. ರವಿಕುಮಾರ್**

ಗುಜರಾತ್: 93 ಕ್ಷೇತ್ರಗಳಿಗೆ ಚುನಾವಣೆ • ಹಕ್ಕು ಚಲಾಯಿಸಲಿದ್ದಾರೆ ಮೋದಿ, ಶಾ

ಅಂತಿಮ ಹಂತದ ಮತದಾನ ಇಂದು

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಯ 93 ಕ್ಷೇತ್ರಗಳಿಗೆ ಸೋಮವಾರ ಎರಡನೇ ಹಂತದಲ್ಲಿ ಮತದಾನ ನಡೆಯಲಿದೆ. ಗುಜರಾತ್‌ನ ಮಧ್ಯ ಹಾಗೂ ಉತ್ತರ ಭಾಗಗಳ 14 ಜಿಲ್ಲೆಗಳಲ್ಲಿ ಮತದಾನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಡಿ.1ರಂದು 89 ಕ್ಷೇತ್ರಗಳಿಗೆ ನಡೆದಿದ್ದ ಮೊದಲ ಹಂತದ ಚುನಾವಣೆಯಲ್ಲಿ ಶೇ 63.31ರಷ್ಟು ಮತದಾನವಾಗಿತ್ತು.

2017ರ ಚುನಾವಣೆಯಲ್ಲಿ, 93 ಕ್ಷೇತ್ರಗಳ ಪೈಕಿ ಬಿಜೆಪಿ 51, ಕಾಂಗ್ರೆಸ್ 39 ಕಡೆ ಜಯಿಸಿದ್ದವು. ಗುಜರಾತ್‌ನ ಮಧ್ಯ ಭಾಗದಲ್ಲಿ ಹಿಡಿತ ಸಾಧಿಸಿದ್ದ ಬಿಜೆಪಿ 37 ಕ್ಷೇತ್ರಗಳಲ್ಲಿ ಗೆದ್ದಿತ್ತು. ಕಾಂಗ್ರೆಸ್‌ನ 22 ಶಾಸಕರು ಆಯ್ಕೆಯಾಗಿದ್ದರು. ಆದರೆ, ಉತ್ತರ ಭಾಗದಲ್ಲಿ ಮೇಲುಗೈ ಸಾಧಿಸಿದ್ದ ಕಾಂಗ್ರೆಸ್, 17 ಕಡೆ ಜಯ ದಾಖಲಿಸಿತ್ತು. ಈ ಭಾಗದಲ್ಲಿ ಬಿಜೆಪಿ 14 ಕ್ಷೇತ್ರಗಳಲ್ಲಿ ಗೆದ್ದಿತ್ತು.

ಈ ಬಾರಿ 61 ರಾಜಕೀಯ ಪಕ್ಷಗಳ 833 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 285 ಪಕ್ಷೇತರರೂ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ. ಬಿಜೆಪಿ ಹಾಗೂ ಎಎಪಿ ಎಲ್ಲ ಕ್ಷೇತ್ರಗಳಲ್ಲಿ ಹಾಗೂ ಕಾಂಗ್ರೆಸ್ 90 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ.

ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಅಹಮದಾಬಾದ್ ಜಿಲ್ಲೆಯ ಘಾಟಲೋಡಿಯಾ ಕ್ಷೇತ್ರದಿಂದ, ಪಾಟೀದಾರ್ ನಾಯಕ ಹಾರ್ದಿಕ್ ಪಟೇಲ್ ಅವರು ಅಹಮದಾಬಾದ್‌ನ ವೀರಮ್‌ಗಾಮ್ ಕ್ಷೇತ್ರದಿಂದ, ಅಲ್ಪೇಶ್ ಠಾಕೂರ್ ಅವರು ಗಾಂಧಿನಗರ ದಕ್ಷಿಣ ಕ್ಷೇತ್ರದಿಂದ, ದಲಿತ ನಾಯಕ ಜಿಗ್ನೇಶ್ ಮೇವಾನಿ ಅವರು ವಡಗಾಮ್‌ನಿಂದ ಕಣಕ್ಕಿಳಿದಿದ್ದಾರೆ.

ಎರಡನೇ ಹಂತದ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಪ್ರಮುಖರಿಂದ ಭಾರಿ ಚುನಾವಣಾ ಪ್ರಚಾರ ನಡೆದಿತ್ತು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ರ್‍ಯಾಲಿ ನಡೆಸಿದ್ದರು.

ಮತದಾನ ಮಾಡಲಿದ್ದಾರೆ ಮೋದಿ, ಶಾ: ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಸೋಮವಾರ ಮತ ಚಲಾಯಿಸಲಿದ್ದಾರೆ. ಮೋದಿ ಅವರು ಅಹಮದಾಬಾದ್‌ನ ರಾಣಿಪ್ ಪ್ರದೇಶದ ಪ್ರೌಢಶಾಲೆಯಲ್ಲಿ ಸೋಮವಾರ ಬೆಳಿಗ್ಗೆ ಮತ ಚಲಾಯಿಸಲಿದ್ದಾರೆ. ಶಾ ಅವರು ಅಹಮದಾಬಾದ್ ನಗರ ವ್ಯಾಪ್ತಿಯ ನಾರಣ್‌ಪುರ ಪ್ರದೇಶದ ಪುರಸಭೆ ಉಪವಲಯ ಕಚೇರಿಯಲ್ಲಿ ಹಕ್ಕು ಚಲಾಯಿಸಲಿದ್ದಾರೆ. ಭಾನುವಾರ ಗಾಂಧಿನಗರಕ್ಕೆ ಬಂದಿಳಿದ ಪ್ರಧಾನಿ, ತಮ್ಮ ತಾಯಿ ಹಿರಾ ಬೆನ್ ಅವರನ್ನು ಭೇಟಿ ಮಾಡಿ 45 ನಿಮಿಷ ಮಾತನಾಡಿದರು.

ಉಪಚುನಾವಣೆ: ಉತ್ತರ ಪ್ರದೇಶದ ಮೈನ್‌ಪುರಿ ಲೋಕಸಭಾ ಕ್ಷೇತ್ರ ಹಾಗೂ ಐದು ರಾಜ್ಯಗಳ 6 ವಿಧಾನಸಭಾ ಕ್ಷೇತ್ರಗಳಿಗೆ ಸೋಮವಾರ ಉಪಚುನಾವಣೆ ನಡೆಯಲಿದೆ. ಎಸ್‌ಪಿ ನಾಯಕ ಮುಲಾಯಂ ಸಿಂಗ್ ನಿಧನದಿಂದ ಮೈನ್‌ಪುರಿ ಕ್ಷೇತ್ರ ತೆರವಾಗಿತ್ತು. ಉತ್ತರ ಪ್ರದೇಶದ ಎರಡು ಹಾಗೂ ಒಡಿಶಾ, ರಾಜಸ್ಥಾನ, ಬಿಹಾರ, ಛತ್ತೀಸಗಡ ತಲಾ ಒಂದು ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ದೆಹಲಿ ಪಾಲಿಕೆ: ಶೇ 50ರಷ್ಟು ಮತದಾನ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಗೆ ಭಾನುವಾರ ನಡೆದ ಮತದಾನದಲ್ಲಿ ಶೇ 50ರಷ್ಟು ಜನರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಮತದಾನವು ಬಹುತೇಕ ಶಾಂತಿಯುತವಾಗಿ ನಡೆದಿದೆ. ತಮಗೆ ಗೆಲುವು ಖಾತರಿ ಎಂದು ಬಿಜೆಪಿ ಮತ್ತು ಎಎಪಿ ಹೇಳಿಕೊಂಡಿವೆ. 250 ವಾರ್ಡ್‌ಗಳಿಗೆ ನಡೆದ ಚುನಾವಣೆಯಲ್ಲಿ ಒಟ್ಟು 1,349 ಅಭ್ಯರ್ಥಿಗಳು ಕಣದಲ್ಲಿದ್ದರು. ದೆಹಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 1.45 ಕೋಟಿ ಅರ್ಹ ಮತದಾರರು ಇದ್ದಾರೆ. ಭಾನುವಾರ ಸಂಜೆ 5.30ಕ್ಕೆ ಮತದಾನ ಅಂತ್ಯವಾದಾಗ ಶೇ 50ರಷ್ಟು ಜನರು ಮತ ಚಲಾಯಿಸಿದ್ದರು. ಇನ್ನೂ ಕೆಲವು ಮಂದಿ ಸರತಿಯಲ್ಲಿ ನಿಂತಿದ್ದರಿಂದ ಮತದಾನದ ಅಂತಿಮ ಪ್ರಮಾಣ ಇನ್ನಷ್ಟು ಹೆಚ್ಚಾಗಬಹುದು ಎಂದು ಚುನಾವಣಾ ಆಯೋಗವು ಹೇಳಿದೆ. ಇದೇ 7ರಂದು ಮತಎಣಿಕೆ ನಡೆಯಲಿದೆ.

ಇನ್ನೊಂದು ಸುದ್ದಿ 10

‘ಮಸೀದಿ ಸ್ಥಳದಲ್ಲೇ ಮಂದಿರ ನಿರ್ಮಾಣ’

ಶ್ರೀರಂಗಪಟ್ಟಣ (ಮಂಡ್ಯ): ‘ಪಟ್ಟಣದಲ್ಲಿದ್ದ ಹನುಮಾನ್ ದೇಗುಲವನ್ನು ಒಡೆದು ಟಿಪ್ಪು ಸುಲ್ತಾನ್ ಮಸೀದಿ ಕಟ್ಟಿಸಿದ್ದು, ಅದೇ ಸ್ಥಳದಲ್ಲಿಯೇ ಮತ್ತೆ ಹನುಮ ಮಂದಿರ ಕಟ್ಟುತ್ತೇವೆ’ ಎಂದು ಹಿಂದೂ ಜಾಗರಣಾ ವೇದಿಕೆಯ ದಕ್ಷಿಣ ಪ್ರಾಂತ ಕಾರ್ಯಕಾರಣಿ ಸದಸ್ಯ ಕೆ.ಟಿ. ಉಲ್ಲಾಸ್ ವಿಶ್ವಾಸ ವ್ಯಕ್ತಪಡಿಸಿದರು. 5

‘ಮೀಸಲಾತಿ ಸಿಗುವವರೆಗೆ ಹೋರಾಟ ನಿಲ್ಲದು’

ಲಕ್ಷ್ಮೇಶ್ವರ (ಗದಗ ಜಿಲ್ಲೆ): ‘ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಮತ್ತು ಕೇಂದ್ರದ ಒಬಿಸಿ ಸೌಲಭ್ಯ ಸಿಗುವವರೆಗೆ ಹೋರಾಟ ನಿಲ್ಲದು. ಬೆಳಗಾವಿ ಅಧಿವೇಶನದ ಒಳಗಾಗಿ ಸರ್ಕಾರ ನಿರ್ಧಾರ ಪ್ರಕಟಿಸಲೇಬೇಕು’ ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಒತ್ತಾಯಿಸಿದರು. 5

‘2047ರ ಹೊತ್ತಿಗೆ ಭಾರತ ವಿಶ್ವಗುರು’

ವಿಶಾಖಪಟ್ಟಣ (ಪಿಟಿಐ): ‘2047ರಲ್ಲಿ ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸುತ್ತಿರುವ ವೇಳೆಗೆ ದೇಶವು ವಿಶ್ವ ಗುರುವಾಗಿ ಹೊರಹೊಮ್ಮಿರುತ್ತದೆ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಭಾನುವಾರ ವಿಶ್ವಾಸ ವ್ಯಕ್ತಪಡಿಸಿದರು. 10

ಮುಗಿಬಿದ್ದ ಅಭಿಮಾನಿಗಳು

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಭಾನುವಾರ ಸುಧಾ ಮೂರ್ತಿ ಅವರ ‘ದಿ ಮ್ಯಾಜಿಕ್ ಆಫ್ ದಿ ಲಾಸ್ಟ್ ಸ್ಟೋರಿ’ ಪುಸ್ತಕ ಕೊಂಡುಕೊಂಡ ಅಭಿಮಾನಿಗಳು ಹಸ್ತಾಕ್ಷರ ಹಾಕಿಸಿಕೊಳ್ಳಲು ಮುಗಿಬಿದ್ದರು
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಸುದ್ದಿಗಳು 4, 6

ಒಳ ಪುಟಗಳು

‘ಭಾರತ್ ಜೋಡೊ ಯಶಸ್ಸಿಗೆ ಪಕ್ಷ ಸಜ್ಜು’ 6
ವೃದ್ಧೆ ಕೊಲೆ: ಕಪಾಟಿನಲ್ಲಿ ಶವ 5
ಜಿ20 ಶೃಂಗಸಭೆ ಹಿನ್ನೆಲೆ: ಇಂದು ಸರ್ವಪಕ್ಷ ಸಭೆ 10

ಹಿಜಾಬ್ ಕಡ್ಡಾಯ ವಿರೋಧಿಸಿ ತೀವ್ರಗೊಂಡಿರುವ ಪ್ರತಿಭಟನೆ

‘ನೈತಿಕ ಪೊಲೀಸ್ ಪಡೆ’ ರದ್ದುಪಡಿಸಿದ ಇರಾನ್

ಟೆಹರಾನ್ (ಎಎಫ್‌ಪಿ): ಇರಾನ್‌ನಲ್ಲಿ ವಸ್ತ್ರಸಂಹಿತೆ ಉಲ್ಲಂಘಿಸಿದ ಆರೋಪದ ಮೇರೆಗೆ ಕುರ್ದಿಷ್ ಯುವತಿ ಮಹ್ಸಾ ಅಮಿನಿ ಬಂಧನ ಹಾಗೂ ಸಾವಿನ ಬಳಿಕ ನಡೆದ ಎರಡು ತಿಂಗಳ ತೀವ್ರ ಪ್ರತಿಭಟನೆಯ ನಂತರ ಇಲ್ಲಿನ ಸರ್ಕಾರವು ತನ್ನ ‘ನೈತಿಕ ಪೊಲೀಸ್ ಪಡೆ’ (morality police) ರದ್ದುಗೊಳಿಸಿದೆ ಎಂದು ಸ್ಥಳೀಯ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

‘ನ್ಯಾಯಾಂಗಕ್ಕೂ ‘ನೈತಿಕ ಪೊಲೀಸ್ ಪಡೆ’ಗೂ ಯಾವುದೇ ಸಂಬಂಧ ಇಲ್ಲ. ಹಾಗಾಗಿ, ಅದನ್ನು ರದ್ದುಪಡಿಸಲಾಗಿದೆ’ ಎಂದು ಇರಾನ್‌ನ ಅಟಾರ್ನಿ ಜನರಲ್ ಮೊಹಮ್ಮದ್ ಜಾಫರ್ ಮೊಂಟಜೆರಿ ಹೇಳಿದ್ದಾರೆ’ ಎಂದು ಐಎಸ್‌ಎನ್‌ಎ ಸುದ್ದಿಸಂಸ್ಥೆ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಕೇಳಲಾದ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಮೊಹಮ್ಮದ್ ‘ನೈತಿಕ ಪೊಲೀಸ್ ಪಡೆ’ಯನ್ನು ರದ್ದುಪಡಿಸಲಾಗಿದೆ ಎಂದು ಹೇಳಿದ್ದಾರೆ.

ಮಹಿಳೆಯರು ಕಡ್ಡಾಯವಾಗಿ ಹಿಜಾಬ್ ಧರಿಸಬೇಕೆಂಬ ಕಾನೂನನ್ನು ಬದಲಾಯಿಸುವ ಅಗತ್ಯವಿದೆಯೇ ಎಂಬುದರ ಪರಿಶೀಲನೆ ನಡೆಸಲು ಸಂಸತ್ತು ಮತ್ತು ನ್ಯಾಯಾಂಗ ಎರಡೂ ಜತೆಗೂಡಿ ಕೆಲಸ ಮಾಡುತ್ತಿವೆ ಎಂದು ಅಟಾರ್ನಿ ಜನರಲ್ ಹೇಳಿಕೆ ನೀಡಿದ ಮರುದಿನವೇ ಈ ಪಡೆಯನ್ನು ರದ್ದುಪಡಿಸಿರುವ ಹೇಳಿಕೆಯು ಹೊರಬಿದ್ದಿದೆ.

ಹಿಜಾಬ್ ವಸ್ತ್ರಸಂಹಿತೆಯ ಪ್ರಕಾರ ಕ್ರಮಬದ್ಧವಾಗಿ ಧರಿಸಿಲ್ಲ ಎಂಬ ಕಾರಣ ನೀಡಿ ನೈತಿಕ ಪೊಲೀಸ್ ಸಿಬ್ಬಂದಿ, ಮಹ್ಸಾ ಅಮಿನಿ (22) ಅವರನ್ನು ಟೆಹರಾನ್‌ನಲ್ಲಿ ಸೆ. 13ರಂದು ಬಂಧಿಸಿದ್ದರು. ಮೂರು ದಿನಗಳ ನಂತರ ಅವರು ಪೊಲೀಸ್ ವಶದಲ್ಲಿರುವಾಗಲೇ ಸಾವಿಗೀಡಾಗಿದ್ದರು. ಇದಾದ ಬಳಿಕ ಇರಾನ್‌ನಾದ್ಯಂತ ಮಹಿಳೆಯರು ಹಿಜಾಬ್ ವಿರುದ್ಧದ ಪ್ರತಿಭಟನೆಯನ್ನು ತೀವ್ರಗೊಳಿಸಿದ್ದರು.

1979ರ ಇಸ್ಲಾಮಿಕ್ ಕ್ರಾಂತಿಯ ಬಳಿಕ ಇರಾನ್‌ನಲ್ಲಿ ಮಹಿಳೆ ಮತ್ತು ಪುರುಷ ಇಬ್ಬರಿಗೂ ವಸ್ತ್ರಸಂಹಿತೆ ರೂಪಿಸಲಾಗಿತ್ತು. ಆಗಿನ ಅಧ್ಯಕ್ಷ ಮಹಮೂದ್ ಅಹ್ಮದಿನೆಜಾದ್ ನೇತೃತ್ವದಲ್ಲಿ ಹಿಜಾಬ್ ಸಂಸ್ಕೃತಿಯನ್ನು ಹರಡುವ ಸಲುವಾಗಿ ಔಪಚಾರಿಕವಾಗಿ ‘ನೈತಿಕ ಪೊಲೀಸ್ ಪಡೆ’ (ಗಶ್ತ್ – ಎ-ಇರ್ಷಾದ್) ಅನ್ನು ಜಾರಿಗೊಳಿಸಲಾಗಿತ್ತು. 1983ರಲ್ಲಿ ಹಿಜಾಬ್ ಅನ್ನು ಮಹಿಳೆಯರಿಗೆ ಕಡ್ಡಾಯಗೊಳಿಸಲಾಯಿತು. 2006ರಲ್ಲಿ ವಸ್ತ್ರಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಪೊಲೀಸ್ ಪಡೆಗಳನ್ನೂ ಪ್ರಾರಂಭಿಸಲಾಯಿತು.

ಮುಷ್ಕರಕ್ಕೆ ಕರೆ: ಈ ನಡುವೆ ಟೆಹರಾನ್ ವಿಶ್ವವಿದ್ಯಾಲಯಕ್ಕೆ ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಭೇಟಿ ನೀಡುತ್ತಿದ್ದು, ಮಹ್ಸಾ ಅಮಿನಿ ಸಾವು ವಿರೋಧಿಸಿ, ಸೋಮವಾರದಿಂದ ಮೂರು ದಿನಗಳ ಆರ್ಥಿಕ ಚಟುವಟಿಕೆಗಳನ್ನು ಬಹಿಷ್ಕರಿಸುವಂತೆ ಪ್ರತಿಭಟನಕಾರರು ಮುಷ್ಕರಕ್ಕೆ ಕರೆ ನೀಡಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

‘ಶತಮಾನದ ಶಾಂತವೇರಿ’ ವಿಚಾರಸಂಕಿರಣ ಮತ್ತು ನೆನಪು ಕಾರ್ಯಕ್ರಮ

ಡಿಜಿಟಲ್‌ನಲ್ಲಿ ಶಾಂತವೇರಿ ವ್ಯಕ್ತಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಳ ಮತ್ತು ಪ್ರಾಮಾಣಿಕ ರಾಜಕಾರಣಿಯಾಗಿದ್ದ ಶಾಂತವೇರಿ ಗೋಪಾಲಗೌಡರ ವ್ಯಕ್ತಿತ್ವವನ್ನು ಈಗಿನ ಪೀಳಿಗೆಗೆ ಡಿಜಿಟಲ್ ಮಾಧ್ಯಮಗಳ ಮೂಲಕ ಪರಿಚಯಿಸುವ ಕಾರ್ಯವನ್ನು ಮಲೆನಾಡಿನ ಸಮಾನ ಮನಸ್ಸುಗಳ ಚಿಂತನ ಸಂಗಮ ಕೈಗೊಳ್ಳಲು ನಿರ್ಧರಿಸಿದೆ.

ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಶತಮಾನದ ಶಾಂತವೇರಿ’ ವಿಚಾರಸಂಕಿರಣ ಮತ್ತು ನೆನಪು ಕಾರ್ಯಕ್ರಮದಲ್ಲಿ ಈ ವಿಷಯ ತಿಳಿಸಿದ ಶಾಂತವೇರಿ ಗೋಪಾಲಗೌಡ ಅವರ ಪುತ್ರ ರಾಮಮನೋಹರ ಶಾಂತವೇರಿ ಅವರು, ‘ಸರ್ಕಾರದ ಸಹಯೋಗದಲ್ಲಿ ಇಡೀ ವರ್ಷ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಮುಖವಾಗಿ, ಯೂಟ್ಯೂಬ್ ಮೂಲಕ ಶಾಂತವೇರಿ ಅವರ ಕುರಿತು ವಿವಿಧ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುವುದು’ ಎಂದು ತಿಳಿಸಿದರು.

‘ಶಾಂತವೇರಿ ಗೋಪಾಲಗೌಡರ ಜೀವನದ ಮುಖ್ಯ ಘಟನೆಗಳನ್ನು ಆಯ್ದುಕೊಂಡು ಸಾಕ್ಷ್ಯಚಿತ್ರ ಮಾಡಿ, ಶಾಲಾ-ಕಾಲೇಜುಗಳಲ್ಲಿ ಬಿತ್ತರಿಸುವ ಜತೆಗೆ ಕೈಪಿಡಿ ವಿತರಿಸಲಾಗುವುದು. ಜತೆಗೆ, ವೆಬ್‌ಸೈಟ್ ಸಹ ರೂಪಿಸಲು ಉದ್ದೇಶಿಸಲಾಗಿದೆ. ಹಿರಿಯ ರಾಜಕಾರಣಿಗಳಿಗೆ ಅವರ ವ್ಯಕ್ತಿತ್ವ ಚಿರಪರಿಚಿತ. ಆದರೆ, ಇಂದಿನ ವಿದ್ಯಾರ್ಥಿಗಳಿಗೆ ಅಪರಿಚಿತ. ಹೀಗಾಗಿ, ಈ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ’ ಎಂದು ತಿಳಿಸಿದರು.

‘ಸಂವಿಧಾನದ ಆಶಯ ಮತ್ತು ಶಾಂತವೇರಿ’ ಕುರಿತು ಮಾತನಾಡಿದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ, ‘ವಿಧಾನಮಂಡಲ ಅಧಿವೇಶನದಲ್ಲಿ ಕೇವಲ ಭಾವನಾತ್ಮಕ ವಿಷಯಗಳು ಹೆಚ್ಚು ಚರ್ಚೆಗಳು ನಡೆಯುತ್ತಿವೆ. ನಿರುದ್ಯೋಗದ ಬದಲಿಗೆ ಲವ್ ಜಿಹಾದ್, ಅನ್ನದ ಬದಲಿಗೆ ಗೋಹತ್ಯೆ ನಿಷೇಧದ ವಿಷಯಗಳು ಚರ್ಚೆಯ ವಸ್ತುಗಳಾಗಿವೆ. ರೈತರ ಆತ್ಮಹತ್ಯೆ, ಕೈಗಾರಿಕಾ ಬಿಕ್ಕಟ್ಟಿನ ಬಗ್ಗೆ ಚರ್ಚೆಗಳೇ ನಡೆಯುತ್ತಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮೀಕ್ಷೆಯೊಂದರ ಪ್ರಕಾರ ಸಂಸತ್ತಿನಲ್ಲಿ ಶೇ 88ರಷ್ಟು ಸದಸ್ಯರು ಕೋಟ್ಯಧಿಪತಿಗಳಾಗಿದ್ದು, ಶೇ 43 ಸದಸ್ಯರ ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ. ಶೇ 56 ಸದಸ್ಯರು ಕುಟುಂಬ ರಾಜಕಾರಣ, ರಿಯಲ್ ಎಸ್ಟೇಟ್ ಹಿನ್ನೆಲೆಯವರು. ಸಂಸತ್ ಅಧಿವೇಶನದ ಪ್ರತಿ ನಿಮಿಷಕ್ಕೆ ₹1 ಲಕ್ಷ ಖರ್ಚಾಗುತ್ತದೆ. ವರ್ಷಕ್ಕೆ ಅಂದಾಜು ₹500 ಕೋಟಿ ಖರ್ಚಾಗುತ್ತದೆ. ಆದರೆ, ಅಲ್ಲಿ ಜನರ ಬದುಕಿನ ಬಗ್ಗೆ ಚರ್ಚೆಗಳೇ ನಡೆಯುವುದಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಲೇಖಕ ಪ್ರೊ. ಕಾಳೇಗೌಡ ನಾಗವಾರ ಮಾತನಾಡಿ, ‘ನಾಡು ಕಂಡ ಶ್ರೇಷ್ಠ ಹಾಗೂ ಮೌಲ್ಯಾಧಾರಿತ ರಾಜಕಾರಣಿ ಶಾಂತವೇರಿ ಗೋಪಾಲಗೌಡರು ಸಮಾಜವಾದದ ಚಿಂತನೆ ಮತ್ತು ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದರು. ಅವರು ರಾಜಕಾರಣಿಗಳಿಗೆ ಮಾದರಿಯಾಗಿದ್ದರು’ ಎಂದು ಸ್ಮರಿಸಿದರು.

ಪ್ರಾಧ್ಯಾಪಕರಾದ ರಾಜಶೇಖರ್ ಕಿಗ್ಗ, ಡಾ.ಶ್ರೀಪತಿ ಹಳಗುಂದ ಇದ್ದರು.

ನಗರದಲ್ಲಿ ಭಾನುವಾರ ನಡೆದ ‘ಶತಮಾನದ ಶಾಂತವೇರಿ ವಿಚಾರ ಸಂಕಿರಣ ಮತ್ತು ನೆನಪು’ ಕಾರ್ಯಕ್ರಮದಲ್ಲಿ (ಎಡದಿಂದ) ಕನ್ನಡ ಪ್ರಾಧ್ಯಾಪಕ ಮತ್ತು ಲೇಖಕ ಡಾ.ಶ್ರೀಪತಿ ಹಳಗುಂದ, ಲೇಖಕ ಪ್ರೊ. ಕಾಳೇಗೌಡ ನಾಗವಾರ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ಚಿಂತಕ ಬಂಜಗೆರೆ ಜಯಪ್ರಕಾಶ್ ಮತ್ತು ರಾಮಮನೋಹರ ಶಾಂತವೇರಿ ಇದ್ದರು. – ಪ್ರಜಾವಾಣಿ ಚಿತ್ರ

‘ರಾಜಕಾರಣಿಗೆ ಸಾಹಿತ್ಯ, ಪರಿಚಯ ಅಗತ್ಯ’

‘ಸಾಹಿತ್ಯ, ಸಂಸ್ಕೃತಿಯ ಪರಿಚಯ ಇಲ್ಲದ ರಾಜಕಾರಣಿಗಳಿಗೆ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಗುಣಗಳೇ ಇರುವುದಿಲ್ಲ’ ಎಂದು ಪ್ರಗತಿಪರ ಚಿಂತಕ ಬಂಜಗೆರೆ ಜಯಪ್ರಕಾಶ ಹೇಳಿದರು.

‘ಸಾಹಿತ್ಯದಿಂದ ಪ್ರೇರಣೆ ಪಡೆದಿದ್ದ ಶಾಂತವೇರಿ ಗೋಪಾಲಗೌಡರು, ಜನಪರ ದೃಷ್ಟಿಕೋನ ಹೊಂದಿದ್ದರು. ಇಂದಿನ ಕಪ್ಪು ಹಣದ ಮತ್ತು ಭಾವೋನ್ಮಾದದ ರಾಜಕಾರಣ ಪ್ರಭಾವದ ಪ್ರಸ್ತುತ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರಂತಹ ವ್ಯಕ್ತಿತ್ವದ ರಾಜಕಾರಣಿ ಹೆಚ್ಚು ಪ್ರಸ್ತುತ ಮತ್ತು ಚಿರಸ್ಥಾಯಿಯಾಗಿ ಉಳಿದಿದ್ದಾರೆ’ ಎಂದರು.

‘ಪ್ರತಿಯೊಬ್ಬ ರಾಜಕಾರಣಿಗೆ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ನೈತಿಕತೆ ಮುಖ್ಯವಾಗಬೇಕು. ಆದರೆ, ಇಂದಿನ ಸಂದರ್ಭದಲ್ಲಿ ಹಣಕಾಸಿನ ವಹಿವಾಟು ಮಾತ್ರ ಮುಖ್ಯವಾಗುತ್ತಿದೆ’ ಎಂದು ಬೇಸರಿಸಿದರು.

ಸಿ.ಎಂ, ಸಚಿವರ ನಿರ್ಗಮನ: ಅಂಗವಿಕಲರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ಕಾರ್ಯಕ್ರಮಗಳಲ್ಲಿ ತಾಸುಗಟ್ಟಲೆ ಕಾಲಹರಣ ಮಾಡುವ ನಾಯಕರಿಗೆ ಅಂಗವಿಕಲರ ಕಾರ್ಯಕ್ರಮದಲ್ಲಿ ಆಸಕ್ತಿ ಇಲ್ಲದಿರುವುದು ವಿಪರ್ಯಾಸ’ ಎಂದು ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ವಿಶ್ವ ಅಂಗವಿಕಲರ ದಿನಾಚರಣೆಯಲ್ಲಿ ಗಣ್ಯರು ಬೇಗ ನಿರ್ಗಮಿಸಿದ್ದಕ್ಕೆ ಅಂಗವಿಕಲರು ಹಾಗೂ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಸದಸ್ಯರು ಅತೃಪ್ತಿ ಹೊರಹಾಕಿದ್ದಾರೆ.

‘ಆಹ್ವಾನ ಪತ್ರಿಕೆಯಲ್ಲಿ ಮುಖ್ಯಮಂತ್ರಿ, ಸಚಿವರು, ಸಂಸದರು, ಶಾಸಕರ ಹೆಸರು ನಮೂದಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಗೂ ಮೊದಲು ಭಾಷಣ ಮುಗಿಸಿ ನಂತರ ತರಾತುರಿಯಲ್ಲಿ ದೀಪ ಹಚ್ಚಿ ನಿರ್ಗಮಿಸಿದ ಮುಖ್ಯಮಂತ್ರಿ ಅವರೊಂದಿಗೇ ಸಂಸದ ಪಿ.ಸಿ.ಮೋಹನ್, ಸಚಿವ ಆರ್. ಅಶೋಕ ಅವರು ಸಹ ಹೊರಟರು. ಅದಾದಮೇಲೆ ಶಾಸಕ ರಿಜ್ವಾನ್ ಅರ್ಷದ್ ಅವರೂ ನಿರ್ಗಮಿಸಿದರು’ ಎಂದು ದೂರಿದ್ದಾರೆ.

ಮುಖ್ಯಮಂತ್ರಿ ಅವರಿಂದ ಪ್ರಶಸ್ತಿ ಸ್ವೀಕರಿಸುವ ನಿರೀಕ್ಷೆಯಲ್ಲಿದ್ದ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದ್ದು ಸಚಿವ ಹಾಲಪ್ಪ ಆಚಾರ್, ಇಲಾಖಾ ಕಾರ್ಯದರ್ಶಿ, ನಿರ್ದೇಶಕರು. ಪ್ರಶಸ್ತಿ ಪ್ರದಾನದ ನಂತರ ಇಲಾಖಾ ಸಚಿವರೂ ನಿರ್ಗಮಿಸಿದರು. ಗಣ್ಯರಿಲ್ಲದ ಖಾಲಿ ಕುರ್ಚಿಗಳ ವೇದಿಕೆ ಎದುರು ಅಂಗವಿಕಲ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು’ ಎಂದು ತಿಳಿಸಿದ್ದಾರೆ.

‘ವರ್ಷಕ್ಕೆ ಒಮ್ಮೆ ಆಚರಿಸಲಾಗುವ ವಿಶ್ವ ಅಂಗವಿಕಲರ ದಿನಾಚರಣೆಗೆ ಒಂದು ದಿನ ತಾಳ್ಮೆಯಿಂದ ತೊಡಗಿಸಿಕೊಳ್ಳಲಾಗದ ನಾಯಕರಿಂದ ಅಂಗವಿಕಲರ ಸಬಲೀಕರಣ ಸಾಧ್ಯವೇ’ ಎಂದು ಪ್ರಕಟಣೆಯಲ್ಲಿ ಪ್ರಶ್ನಿಸಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ವರದಿ ಪರಿಣಾಮ

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಬಸವನಪುರ ವಾರ್ಡ್ ನಂಬರ್ 88ರ ಮೇಡಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಉದ್ಘಾಟನೆ ಭಾಗ್ಯ ದೊರೆತಿದೆ. ಈ ಘಟಕವನ್ನು ನಿರ್ಮಿಸಿ ನಾಲ್ಕೈದು ತಿಂಗಳಾಗಿದ್ದರೂ ಉದ್ಘಾಟನೆಯಾಗಿರಲಿಲ್ಲ. ಈ ಕುರಿತು ‘ಪ್ರಜಾವಾಣಿ’ಯ ಕುಂದುಕೊರತೆ ವಿಭಾಗದಲ್ಲಿ 2022ರ ಜುಲೈ 4ರಂದು ‘ಉದ್ಘಾಟನೆ ಭಾಗ್ಯ ಕಾಣದ ನೀರಿನ ಘಟಕ’ ಎನ್ನುವ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ವರದಿ ಪ್ರಕಟವಾದ ಬಳಿಕ ಎಚ್ಚೆತ್ತ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಉದ್ಘಾಟನೆಗೆ ಕ್ರಮ ಕೈಗೊಂಡಿದ್ದಾರೆ.

ಮೇಡಹಳ್ಳಿ ಗ್ರಾಮದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ

‘ಮರ ಕಡಿದಿರುವುದು ಖಂಡನೀಯ’

ಕೃಷ್ಣರಾಜೇಂದ್ರಪುರದ ಸರ್ಕಾರಿ ಕಾಲೇಜಿನಲ್ಲಿದ್ದ ಮರವನ್ನು ಕಡಿದು ಹಾಕಿರುವುದು.

ಕೃಷ್ಣ ರಾಜೇಂದ್ರಪುರದ ಪ್ರಥಮ ದರ್ಜೆ ಕಾಲೇಜಿನ ರಾಜೀವ್ ಗಾಂಧಿ ಕ್ರೀಡಾಂಗದಲ್ಲಿದ್ದ ಬೃಹತ್ ಗಾತ್ರದ ಮರವನ್ನು ಇತ್ತೀಚಿಗೆ ಕಡಿದು ಹಾಕಲಾಗಿದೆ. ಯಾರಿಗೂ ತೊಂದರೆ ಕೊಡದೆ ಕಂಪೌಂಡ್ ಬದಿಯಲ್ಲಿ ಇದ್ದ ಮರಕ್ಕೆ ಕೊಡಲಿ ಹಾಕಿ ಕತ್ತರಿಸಿರುವುದು ದುರದೃಷ್ಟಕರ ಸಂಗತಿ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಮರ ಕಡಿದವರ ವಿರುದ್ಧ ಕ್ರಮಕೈಗೊಳ್ಳಬೇಕು

ಕೋದಂಡರಾಮ್ ಆರ್,. ಕೃಷ್ಣ ರಾಜೇಂದ್ರಪುರ

ಬಿಎಂಟಿಸಿ ಬಸ್ಸುಗಳಲ್ಲಿ ₹10ರ ನಾಣ್ಯ ಅಮಾನ್ಯವೇ?

ಬಿಎಂಟಿಸಿ ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ನಿರ್ವಾಹಕನಿಗೆ ₹10ರ ನಾಣ್ಯ ನೀಡಿದರೆ ಟಿಕೆಟ್ ನೀಡದೇ, ಬಸ್ಸಿನಿಂದ ಕೆಳಗೆ ಇಳಿಯಲು ಹೇಳಿದರು. ಈ ಬಗ್ಗೆ ನಿರ್ವಾಹಕನಿಗೆ ಸ್ಪಷ್ಟನೆ ಕೇಳಿದರೆ ಡಿಪೋ 33ರ ಕ್ಯಾಷಿಯರ್ ₹10ರ ನಾಣ್ಯ ತೆಗೆದುಕೊಳ್ಳುವುದಿಲ್ಲ ಎಂದು ತಿಳಿಸಿದರು. ದೇಶದಲ್ಲಿ ಈ ನಾಣ್ಯ ಚಲಾವಣೆಯಲ್ಲಿರುವಾಗ ಬಿಎಂಟಿಸಿಯಲ್ಲಿ ಅಮಾನ್ಯವೇಕೆ? ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಪಷ್ಟನೆ ನೀಡಬೇಕು.

ಎಚ್. ಆರ್. ಪ್ರಕಾಶ್ ಕೃಷಿ ವಿಜ್ಞಾನಿ, ಮಂಡ್ಯ

ಮೈಕೋ ಲೇಔಟ್, ಹೊಂಗಸಂದ್ರದ ಒನಕೆ ಓಬವ್ವ ರಸ್ತೆ

‘ರಸ್ತೆ ಸರಿಪಡಿಸಿ’

ಮೈಕೋ ಲೇಔಟ್, ಹೊಂಗಸಂದ್ರದ ಒನಕೆ ಓಬವ್ವ ರಸ್ತೆ ಸಂಪೂರ್ಣ ಹಾಳಾಗಿದೆ. ಇದು ಬಿಬಿಎಂಪಿ ನಿರ್ಲಕ್ಷ್ಯಕ್ಕೆ ಉತ್ತಮ ಉದಾಹರಣೆಯಾಗಿದೆ. ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಈ ರಸ್ತೆ ಬಗ್ಗೆ ಗಮನ ಹರಿಸುತ್ತಿಲ್ಲ. ಇಲ್ಲಿನ ನಿವಾಸಿಗಳ ಗೋಳು ಕೇಳುವವರೇ ಇಲ್ಲ. ರಸ್ತೆಯಲ್ಲಿಯೇ ಮನೆಯ ಕಸ ಮತ್ತು ಕಟ್ಟಡ ನಿರ್ಮಾಣ ತ್ಯಾಜ್ಯ ಹಾಕಲಾಗುತ್ತಿದೆ. ಸ್ವಲ್ಪ ಮಳೆ ಬಂದರೂ ವಾಹನ ಸವಾರರು ಮತ್ತು ಪಾದಚಾರಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮಹೇಶ್ವರಿ, ಸ್ಥಳೀಯ ನಿವಾಸಿ

‘ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸಿ’

ಅವೆನ್ಯೂ ರಸ್ತೆಯಲ್ಲಿರುವ ಪಾದಚಾರಿಮಾರ್ಗದ ಕಾಮಗಾರಿ ಆಮೆಗತಿಯಲ್ಲಿ ಸಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಈ ಕಿರಿದಾದ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುವುದರಿಂದ ಪಾದಚಾರಿಗಳು ಜೀವ ಭಯದಲ್ಲಿ ರಸ್ತೆಯಲ್ಲಿ ಓಡಾಡಬೇಕಿದೆ. ಇದರಿಂದ ವಾಹನ ಸವಾರರಿಗೂ ಕಿರಿಕಿರಿಯಾಗುತ್ತಿದೆ. ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಮುಗಿಸಿ ಪಾದಚಾರಿಗಳಿಗೆ ಅನುಕೂಲ ಮಾಡಿಕೊಡಬೇಕು.

ದೀಪಕ್ ಶಿರಾಲಿ, ತ್ಯಾಗರಾಜ ನಗರ

ಆಮೆಗತಿಯಲ್ಲಿ ಸಾಗಿದ ಅವೆನ್ಯೂ ರಸ್ತೆಯ ಪಾದಚಾರಿಮಾರ್ಗದ ಕಾಮಗಾರಿ

‘ಕಳಪೆ ಕಾಮಗಾರಿ ಆಕ್ರೋಶ’

ಚಿಕ್ಕಪೇಟೆ ವ್ಯಾಪ್ತಿಯ ಮೆಜೆಸ್ಟಿಕ್‌ನ ಆಸ್ಪತ್ರೆ ರಸ್ತೆಯನ್ನು ಇತ್ತೀಚಿಗೆ ಡಾಂಬರ್ ಹಾಕಲಾಗಿದೆ. ಆದರೆ, ಈ ಕಾಮಗಾರಿ ಸಂಪೂರ್ಣ ಕಳಪೆ ಗುಣಮಟ್ಟದಿಂದ ಕೂಡಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಇದು ಸಹ ನಗರದ ರಸ್ತೆಗಳ ಗುಣಮಟ್ಟ ಕುಸಿಯಲು ಪ್ರಮುಖ ಕಾರಣವಾಗಿದೆ. ಇಂತಹ ರಸ್ತೆಗಳಲ್ಲಿ ಗುಂಡಿಗಳು ಬಿದ್ದು, ವಾಹನ ಸವಾರರ ಸಾವಿಗೆ ಕಾರಣವಾಗುತ್ತಿವೆ. ಸಾರ್ವಜನಿಕರ ತೆರಿಗೆ ಹಣ ಈ ರೀತಿ ಪೋಲು ಮಾಡುತ್ತಿರುವುದು ಖಂಡನೀಯ.

ಶಿವಪ್ರಸಾದ್, ಸ್ಥಳೀಯ ನಿವಾಸಿ

ಚಿಕ್ಕಪೇಟೆ ವ್ಯಾಪ್ತಿಯ ಆಸ್ಪತ್ರೆ ರಸ್ತೆಗೆ ಹಾಕಿರುವ ಕಳಪೆ ಡಾಂಬರೀಕರಣ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

PUBLIC NOTICE

ಮಾನ್ಯ 16ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಕ್ರಿ.ಮಿಸ್.ನಂ. 6078/2022

ಅರ್ಜಿದಾರರು: ಶ್ರೀ ಪ್ಯಾಟ್ರಿಕ್ ರ್‍ಯಾಂಡಾಲ್ಫ್ ವಿಲ್ಸನ್, ಬಿನ್ ಯೂಸ್ಟಸ್ ರ್‍ಯಾಂಡಾಲ್ಫ್ ವಿಲ್ಸನ್, ವಯಸ್ಸು: 80 ವರ್ಷ, ವಾಸ: ನಂ. 802, ಏಥೆನ್ಸ್ ಪ್ರೆಸ್ಟೀಜ್ ಆಕ್ರೋಪೊಲಿಸ್, ನಂ. 20, ಹೊಸೂರು ರಸ್ತೆ, ಕೋರಮಂಗಲ, ಬೆಂಗಳೂರು – 560 029.

ಮತ್ತು

ಎದುರುದಾರರು: ಮಾನ್ಯ ಆಯುಕ್ತರು, ಜನನ ಮತ್ತು ಮರಣ ನೋಂದಣಿ ಇಲಾಖೆ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಮೇಲಿನ ಅರ್ಜಿದಾರರಿಗೆ ತಾಯಿಯಾದ ಮೃತ ರಿಟಾಮೇರಿ ಅಲೆಕ್ಸಾಂಡ್ರ ವಿಲ್ಸನ್ ಕೋಂ. ಯೂಸ್ಟಸ್ ರ್‍ಯಾಂಡಾಲ್ಫ್ ವಿಲ್ಸನ್ ರವರು ದಿ: 27.09.2003 ರಂದು ನಂ. 802, ಏಥೆನ್ಸ್ ಪ್ರೆಸ್ಟೀಜ್ ಆಕ್ರೋಪೊಲಿಸ್, ನಂ. 20, ಹೊಸೂರು ರಸ್ತೆ, ಕೋರಮಂಗಲ, ಬೆಂಗಳೂರು – 560 029 ಇಲ್ಲಿ ಮರಣ ಹೊಂದಿದ್ದು, ಮೃತರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಮಾನ್ಯ 16ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ನ್ಯಾಯಾಲಯವು ಪ್ರಕರಣವನ್ನು ದಿ: 30.12.2022ರಂದು ಬೆಳಿಗ್ಗೆ 11 ಗಂಟೆಗೆ ನಿಗದಿಪಡಿಸಿದೆ.

ಸದರಿ ಮರಣ ಪ್ರಮಾಣ ಪತ್ರವು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಲು ಹಾಗೂ ದಸ್ತಾವೇಜು ತಯಾರಿಸಲು ಮತ್ತು ಖಾತಾ ವರ್ಗಾವಣೆಗಾಗಿ ಮತ್ತು ಕಾನೂನು ಉದ್ದೇಶಕ್ಕಾಗಿ ಬೇಕಾಗಿರುತ್ತದೆ.

ಸದರಿ ಅರ್ಜಿಯ ಬಗ್ಗೆ ಯಾರಿಗಾದರೂ ತಂಟೆ ತಕರಾರುಗಳು ಇದ್ದಲ್ಲಿ ಅವರುಗಳು ನ್ಯಾಯಾಲಯದಲ್ಲಿ ತಮ್ಮ ತಗಾದೆಯನ್ನು ಸಲ್ಲಿಸಬಹುದು, ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು.

ನನ್ನ ಸಹಿಯೊಡನೆ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿ: 30.11.2022 ರಂದು ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ ಸಹಿ/– ಶಿರಸ್ತೇದಾರರು, ಮಾನ್ಯ 16ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು.

ಸಹಿ/– ಅರ್ಜಿದಾರರ ಪರ ವಕೀಲರು
ವೀಕ್ಷಾ ಲಾ LLP
ನಂ.1, ಪ್ಯಾಲೇಸ್ ವ್ಯೂ ಬಿಲ್ಡಿಂಗ್, 2ನೇ ಮಹಡಿ, ವಿ.ಎಸ್. ರಾಜು ರಸ್ತೆ, ಕುಮಾರಾ ಪಾರ್ಕ್ ಪಶ್ಚಿಮ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು 1956ರ ಕಂಪನಿಗಳ ಕಾಯ್ದೆ ಕೆಳಗೆ ಸಂಯೋಜಿತವಾದ ಎಲ್ ಅಂಡ್ ಟಿ ರಿಯಾಲ್ಟಿ ಡೆವಲಪರ್ಸ್ ಲಿಮಿಟೆಡ್ ನ ಶೀರ್ಷಿಕೆ, ಹಕ್ಕುಗಳು ಮತ್ತು ಈ ಶೀರ್ಷಿಕೆಯ ಆಸಕ್ತಿಯನ್ನು ತಿಳಿದುಕೊಳ್ಳಲು ಉದ್ದೇಶಿಸಿದ್ದು ಇದರ ನೋಂದಾಯಿತ ಕಚೇರಿಯು ಎಲ್ ಅಂಡ್ ಟಿ ಹೌಸ್ ಬಲ್ಲಾಡ್ ಎಸ್ಟೇಟ್, ಮುಂಬೈ ಮಹಾರಾಷ್ಟ್ರ 400001 **(ಮಾಲೀಕರು)** ದಲ್ಲಿದ್ದು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರ ಪಟ್ಟಿಯಲ್ಲಿ ವಿವರಿಸಲಾದ ಮತ್ತು ವಿವರ ಪಟ್ಟಿಯ ಸ್ವತ್ತು ಎಂದು ಉಲ್ಲೇಖಿಸಿರುವ ಎಲ್ಲಾ ಭಾಗ ಮತ್ತು ಭಾಗಂಶಕ್ಕೆ ಸಂಬಂಧಿಸಿದಂತೆ ಶೀರ್ಷಿಕೆ, ಹಕ್ಕುಗಳನ್ನು ಮತ್ತು ಸ್ವತ್ತಿನ ಮೇಲಿನ ಮಾಲೀಕರ ಆಸಕ್ತಿಯನ್ನು ತನಿಖೆ ಮಾಡಲು ನಮ್ಮ ಕಕ್ಷಿದಾರರು ನಮಗೆ ಸೂಚನೆ ನೀಡಿದ್ದಾರೆ.

ಎಲ್ಲಾ ವ್ಯಕ್ತಿಗಳು, ಹಿಂದೂ ಅವಿಭಜಿತ ಕುಟುಂಬ, ಕಂಪನಿ, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆ(ಗಳು), ಬ್ಯಾಂಕಿಂಗ್ ಯೇತರ ಹಣಕಾಸು ಸಂಸ್ಥೆ(ಗಳು), ಸಂಸ್ಥೆ, ವ್ಯಕ್ತಿಗಳ ಸಂಘ ಅಥವಾ ವ್ಯಕ್ತಿಗಳ ಸಂಸ್ಥೆ ಸೇರಿದಂತೆ ಸಾಲದಾತರು / ಸಾಲಗಾರರು ಮತ್ತು /ಅಥವಾ ಶೆಡ್ಯೂಲ್ ಆಸ್ತಿ ಅಥವಾ ಅದರ ಯಾವುದೇ ಭಾಗ ಅಥವಾ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ, ಹಕ್ಕು, ಶೀರ್ಷಿಕೆ ಮತ್ತು/ಅಥವಾ ಆಸಕ್ತಿ ಹೊಂದಿರುವ ಸಾಲದಾತರು, ಮಾರಾಟ, ತಿಳುವಳಿಕೆಯ ಜ್ಞಾಪಕ ಪತ್ರ, ವಿನಿಮಯ, ಅಡಮಾನ, ಶುಲ್ಕ, ಉಡುಗೊರೆ, ನಂಬಿಕೆ, ಉಯಿಲು, ಉತ್ತರಾಧಿಕಾರದ ಹಕ್ಕು, ಕೌಟುಂಬಿಕ ವ್ಯವಸ್ಥೆ, ಸ್ವಾಧೀನ, ಗುತ್ತಿಗೆ, ಹಿಡುವಳಿ, ನಿರ್ವಹಣೆ ಸರಾಗತೆ, ಪರವಾನಗಿ, ಪಾಲು, ನಿಯೋಜನೆ, ಹಕ್ಕು, ಬಾಂಧವ್ಯ, ಅಭಿವೃದ್ಧಿ ಹಕ್ಕುಗಳು, ಒಡಂಬಡಿಕೆ, ವಸಾಹತು ದಾರಿಯ ಹಕ್ಕು, ಯಾವುದೇ ಉಳಿದಿರುವ ದಾವೆ, ಮೀಸಲಾತಿ, ಒಪ್ಪಂದ, ಎಫ್‌ಎಸ್‌ಐ/ಎಫ್‌ಎಆರ್ ಬಳಕೆ, ಅಥವಾ ಯಾವುದೇ ಹೊಣೆಗಾರಿಕೆ ಅಥವಾ ಬದ್ಧತೆ ಅಥವಾ ಯಾವುದೇ ರೀತಿಯ ಬೇಡಿಕೆಯನ್ನು ಮೂಲ ದಾಖಲೆಗಳ ಬೆಂಬಲದೊಂದಿಗೆ ಲಿಖಿತವಾಗಿ ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ **10 (ಹತ್ತು) ದಿನಗಳ** ಅವಧಿಯೊಳಗೆ ಈ ಕೆಳಗಿನ ವಿಳಾಸಕ್ಕೆ ತಿಳಿಸತಕ್ಕದ್ದು, ತಪ್ಪಿದಲ್ಲಿ ಈ ಕೆಳಗೆ ತಿಳಿಸಿದ ವಿವರ ಪಟ್ಟಿಯ ಸ್ವತ್ತಿಗೆ ಇದರ ಮಾಲೀಕರಲ್ಲದೆ ಯಾವುದೇ ವ್ಯಕ್ತಿಗೆ/ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಯಾವುದೇ ಹಕ್ಕು ಅಥವಾ ಅಧಿಕಾರವಿಲ್ಲವೆಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರು ವಿವರ ಪಟ್ಟಿಯ ಸ್ವತ್ತಿಗೆ ಸಂಬಂಧಿಸಿದಂತೆ ಮಾರಾಟ ವಹಿವಾಟು ಮುಂದುವರಿಸಲು ಸ್ವತಂತ್ರರಾಗಿದ್ದಾರೆ.

ವಿವರ ಪಟ್ಟಿ
(ವಿವರ ಪಟ್ಟಿಯ ಸ್ವತ್ತು)

ಈ ಸಮಗ್ರ ಪರಿವರ್ತಿತ ಜಮೀನಿನ ಎಲ್ಲಾ ಭಾಗ ಮತ್ತು ಭಾಗಂಶದ ಒಟ್ಟು ವಿಸ್ತೀರ್ಣ 12 ಎಕರೆ 08 ಗುಂಟೆಗಳಾಗಿದ್ದು ಇದು ಬೆಂಗಳೂರು ಉತ್ತರ ತಾಲೂಕು ಯಲಹಂಕ ಹೋಬಳಿ ಬ್ಯಾಟರಾಯನಪುರ ಗ್ರಾಮದಲ್ಲಿದ್ದು ಇದರ ಸರ್ವೆ ಸಂ. 98/1 (ಪಿ), 98/2, 98/3 (ಪಿ), 99 ಪಿ, 100/1(ಪಿ), 101/ 1ಬಿ1, 101/1ಬಿ2 (ಪಿ), 101/2 (ಪಿ), 102/1 (ಪಿ), 102/2 (ಪಿ) ಮತ್ತು 102/3 (ಪಿ) ಆಗಿರುತ್ತದೆ.

ದಿನಾಂಕ: 05/12/2022

FoxMandal Solicitors & Advocates
ಶ್ರೀ ಎಸ್ ಟಿ ಪ್ರಶಾಂತ ಕುಮಾರ್,
ಹಿರಿಯ ಪಾಲುದಾರ,
ಫಾಕ್ಸ್ ಮಂಡಲ್ ಮತ್ತು ಅಸೋಸಿಯೇಟ್ಸ್,
ಸಲಹೆಗಾರರು ಮತ್ತು ವಕೀಲರು,
FM ಹೌಸ್, 6/12, ಪ್ರಿಮ್ರೋಸ್ ರಸ್ತೆ, ಬೆಂಗಳೂರು 560025,
ಕರ್ನಾಟಕ, ಭಾರತ. ಫೋನ್: +91 80 30554100
ಇಮೇಲ್: CapLTpublicnotice@foxmandal.in

EDUCATION
To Place your Classified Ads Contact: 9845114560

CONNECT

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

URGENT LOAN Avail @ 3.5% per Annum Personal, Business, Projects takeover all types loan. Exim Finance Call & whatsApp :8826494700

INVESTOR (3L) invited for upgrading and expanding running business. Regular monthly returns assured. Contact 9980883950

GREEN HERBAL 2 Lakh Investment Required Daily Collection Contact:- 8892501007/ 9606701007

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

CHANGE OF NAME
I, **Pallavi Wadappi** currently residing at SPE-21, Subroto Park, New Delhi - 110 010 have changed my name to **Pallavi Donni** vide affidavit dated: 26th Nov. 2022, sworn before Notary Madanlal Gupta, Delhi. Henceforth for all future purposes I will be known as **Pallavi Donni** only.

I, SHWETA SHANKAR, residing at Flat No. L-217, Ushas Apartments, No.26, 16th Main 4th Block Jayanagar, Bengaluru-560011 have changed my name to SHWETA NARAYAN for all purposes vide affidavit dated 02/12/2022, sworn before Notary Jayalingayya Mudenoormath, Bangalore.

SATYABATI, MOTHER/O JC673117Y, SUB/MT, PRADEEP KUMAR SHARMA, Vill- Khad Mohan Nagar, Shina, Bulandshahr, Uttar Pradesh changed name SATYABATI to SATYWATI, 02/12/2022, Notary K.V. Mani, Bangalore

I, YUVARAJA S/O- Doddegowda R/o Krittivaasa, 11, 1st Cross Sharada Layout, Pattanagere Rarajeshwarinagar, Bengaluru- 560098 have changed my name to Yuva Raja for all purposes.

9ರಿಂದ ಮೂರು ದಿನ ಚಿತ್ರಕಲಾ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಮೈದಾನದ ಕಿಂಗ್ಸ್ ಕೋರ್ಟ್‌ನಲ್ಲಿ 'ಆಕಾಂಕ್ಷ' ವತಿಯಿಂದ ಡಿ.9ರಿಂದ 11ರ ತನಕ ಚಿತ್ರಕಲಾ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. 49 ಚಿತ್ರ ಕಲಾವಿದರು ಭಾಗವಹಿಸಲಿದ್ದಾರೆ.

'ಹವ್ಯಾಸಿ ಕಲಾವಿದರಾದ ಕೆ. ಉಷಾ ಪಿ. ರೈ ಹಾಗೂ ಕವಿತಾ ಪ್ರಸನ್ನ ಜೊತೆಯಾಗಿ 2014ರಲ್ಲಿ ಆಕಾಂಕ್ಷ ಆರಂಭಿಸಿದ್ದೆವು' ಎಂದು ಶ್ಯಾಮಲಾ ರಮಾನಂದ್ ಮಾಹಿತಿ ನೀಡಿದರು.

2012ರಲ್ಲಿ 'ಆಕಾಂಕ್ಷ' ಆರಂಭಿಸುವ ಆಲೋಚನೆ ಹುಟ್ಟಿತ್ತು. ಮೊದಲ ಬಾರಿಗೆ ಚಿತ್ರಕಲಾ ಪರಿಷತ್ತಿನಲ್ಲಿ 3 ದಿನಗಳ ಬೃಹತ್ ಪ್ರದರ್ಶನ ಏರ್ಪಡಿಸಲಾಗಿತ್ತು. 350 ಕಲಾಕೃತಿಗಳು ಪ್ರದರ್ಶನಗೊಂಡಿದ್ದವು ಎಂದು ಶ್ಯಾಮಲಾ ತಿಳಿಸಿದರು.

ಪ್ರತಿವರ್ಷ ಹೊಸ ಕಲಾವಿದೆಯರು ಆಕಾಂಕ್ಷ ಸೇರುತ್ತಿದ್ದಾರೆ. ಬೇರೆ ರಾಜ್ಯ ಹಾಗೂ ದೇಶಗಳಲ್ಲಿ ನೆಲೆಸಿರುವ ಭಾರತೀಯ ಕಲಾವಿದೆಯರೂ ನಮ್ಮೊಂದಿಗೆ ಸೇರಲು ಆಸಕ್ತಿ ತೋರುತ್ತಿದ್ದಾರೆ. ಆಗಲೇ 600 ಕಲಾವಿದೆಯರು ಸೇರ್ಪಡೆ ಆಗಿದ್ದಾರೆ. ವೈದ್ಯರು, ಎಂಜಿನಿಯರ್, ವಕೀಲರು, ಸಂಗೀತ ಕಲಾವಿದರು, ಲೇಖಕಿಯರು, ಸಾಮಾಜಿಕ ಕಾರ್ಯಕರ್ತೆಯರು ಪ್ರಾಧ್ಯಾಪಕರು, ಕಲಾವಿದೆಯರು ಸೇರಿದ್ದಾರೆ ಎಂದರು.

ಕೇವಲ ಪ್ರದರ್ಶನಕ್ಕೆ ಚಟುವಟಿಕೆ ಸೀಮಿತವಾಗಿಲ್ಲ. ಪ್ರದರ್ಶನಗಳನ್ನು ನಡೆಸಿ ಸಂಗ್ರಹವಾದ ಮೊತ್ತದ ಒಂದು ಭಾಗವನ್ನು ಸಾಮಾಜಿಕ ಚಟುವಟಿಕೆಗೆ ನೀಡಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಶ್ರೀನಿವಾಸ್ 'ಕೈ' ಸೇರುವ ಇಂಗಿತ

ಗುಬ್ಬಿ: ಜೆಡಿಎಸ್ ಉಚ್ಚಾಟಿತ ಶಾಸಕ ಎಸ್.ಆರ್. ಶ್ರೀನಿವಾಸ್ ಅವರು ಕಾಂಗ್ರೆಸ್ ಸೇರುವ ಸುಳಿವು ನೀಡಿದ್ದಾರೆ.

'ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಸೇರುವ ಇಂಗಿತ ಇರುವುದರಿಂದ ಗುಬ್ಬಿ ತಾಲ್ಲೂಕಿನ ಕಾಂಗ್ರೆಸ್ ನಾಯಕರ ಬಗ್ಗೆ ಟೀಕಿಸಲು ಇಚ್ಛಿಸುವುದಿಲ್ಲ' ಎಂದು ಅವರು ಭಾನುವಾರ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

'ಪಂಚರತ್ನ ಯಾತ್ರೆಗೂ ನನಗೂ ಸಂಬಂಧವಿಲ್ಲ' ಎಂದರು.

ಸಂಕ್ಷಿಪ್ತ ಸುದ್ದಿ

ಚಿಲುಮೆ: ಕರೆಗಳ ವಿವರ ಪರಿಶೀಲನೆ

ಬೆಂಗಳೂರು: ಚಿಲುಮೆ ಸಂಸ್ಥೆ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಹಲಸೂರು ಗೇಟ್ ಪೊಲೀಸರು, ಐಎಎಸ್ ಅಧಿಕಾರಿಗಳಾದ ಕೆ.ಶ್ರೀನಿವಾಸ್ ಹಾಗೂ ಎಸ್. ರಂಗಪ್ಪ ಅವರ ಕರೆಗಳ ವಿವರಗಳನ್ನು ಪರಿಶೀಲಿಸುತ್ತಿದ್ದಾರೆ.

ಇಬ್ಬರೂ ಅಧಿಕಾರಿಗಳನ್ನು ಶನಿವಾರ ವಿಚಾರಣೆ ನಡೆಸಿದ್ದ ಪೊಲೀಸರು, ಅವರು ಬಳಸುತ್ತಿದ್ದ ಮೊಬೈಲ್ ಹಾಗೂ ದೂರವಾಣಿ ಸಂಖ್ಯೆಗಳ ಮಾಹಿತಿ ಪಡೆದುಕೊಂಡಿದ್ದಾರೆ. ಆ ಸಂಖ್ಯೆಗಳ ಒಳ ಹಾಗೂ ಹೊರ ಕರೆಗಳ ವಿವರಗಳನ್ನು ಈಗಾಗಲೇ ಸಂಗ್ರಹಿಸಿರುವ ಪೊಲೀಸರು, ಮಾಹಿತಿ ಕಲೆ ಹಾಕುತ್ತಿದ್ದಾರೆ.

'ಈಗಾಗಲೇ ಬಂಧಿಸಲಾಗಿರುವ ನಾಲ್ವರು ಬಿಬಿಎಂಪಿ ಅಧಿಕಾರಿಗಳು, 'ಚಿಲುಮೆ ಸಂಸ್ಥೆಯವರು ಕೈಗೊಳ್ಳುತ್ತಿರುವ ಸಮೀಕ್ಷೆಗೆ ಸಹಕಾರ ನೀಡುವಂತೆ ಹಿರಿಯ ಅಧಿಕಾರಿಗಳು ಕರೆ ಮಾಡಿ ತಿಳಿಸಿದ್ದರು' ಎಂಬುದಾಗಿ ಹೇಳಿಕೆ ನೀಡಿದ್ದಾರೆ. ಈ ಆರೋಪವನ್ನು ಐಎಎಸ್ ಅಧಿಕಾರಿಗಳು ತಳ್ಳಿ ಹಾಕಿದ್ದಾರೆ. ಸೂಕ್ತ ಪುರಾವೆ ಕಲೆ ಹಾಕಲು ಕರೆಗಳ ವಿವರ ಪರಿಶೀಲಿಸಲಾಗುತ್ತಿದೆ'.

ಕಾರ್ಯಾಗಾರ

ಬೆಂಗಳೂರು: ಎಸ್.ಜಿ.ಎಸ್ ವಾಗ್ದೇವಿ ಸಂಸ್ಥೆಯ 2023 ಜನವರಿ 25ರಂದು 'ಕಾಕ್ಲಿಯರ್ ಇಂಪ್ಲಾಟ್' ಅಳವಡಿಸಿಕೊಂಡಿರುವ ಮಕ್ಕಳಿಗೆ ಆಡಿಟರಿ–ವರ್ಬಲ್ ಥೆರಪಿಯ (ಎವಿಟಿ) ಮೂಲಕ ಒಂದು ದಿನದ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ತರಬೇತಿಯಲ್ಲಿ ಕೌಶಲ್ಯವನ್ನು ಅಭಿವೃದ್ಧಿ ಪಡಿಸಿಕೊಳ್ಳುವ ಹಾಗೂ ಇತ್ತೀಚಿನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಇದು ಸಹಕಾರಿಯಾಗಲಿದೆ. ಈ ಕಾರ್ಯಾಗಾರ 30 ಜನರಿಗೆ ಸೀಮಿತವಾಗಿದ್ದು, ಆಸಕ್ತರು 2023ರ ಜನವರಿ 10ರೊಳಗೆ vagdevitrust@gmail.com ವಿಳಾಸದಲ್ಲಿ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ 080-26727141ಗೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.



‘ಅಪ್ಪು’ ವ್ಯಕ್ತಿತ್ವ ಬಣ್ಣನೆ • ಸಾಮಾಜಿಕ ಕಾರ್ಯಗಳ ಕಾರಣಕ್ಕಾಗಿ ಈಗಲೂ ಜೀವಂತ: ಕೆ. ಪುಟ್ಟಸ್ವಾಮಿ

‘ಮೌಲ್ಯ ಮರುಸ್ಥಾಪಿಸಿದ ಪುನೀತ್’

• ವರುಣ ಹೆಗಡೆ

ಬೆಂಗಳೂರು: ‘ವರನಟ ರಾಜ್‌ಕುಮಾರ್ ಬಳಿಕ ಚಲನಚಿತ್ರಗಳಲ್ಲಿ ಕೌಟುಂಬಿಕ ಮೌಲ್ಯಗಳನ್ನು ಮರುಸ್ಥಾಪಿಸಿದವರು ಪುನೀತ್ ರಾಜ್‌ಕುಮಾರ್. ಇದರಿಂದಾಗಿಯೇ ಅವರು ಎಲ್ಲಾ ವಯೋಮಾನದವರ ಅಚ್ಚುಮೆಚ್ಚಿನ ನಟರಾಗಿ ಕನ್ನಡ ಚಿತ್ರರಂಗದಲ್ಲಿ ಪ್ರಜ್ವಲಿಸಿದರು. ತೆರೆಯ ಆಚೆಗಿನ ಅವರ ಸರಳತೆ, ಸಾಮಾಜಿಕ ಕಾರ್ಯಗಳು ಸಾವಿನ ಬಳಿಕವೂ ಅವರನ್ನು ಜೀವಂತವಾಗಿಸಿದೆ.’

ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಯಲ್ಲಿ ಹಮ್ಮಿಕೊಂಡ ‘ಮುಗ್ಧ ನಗುವೊಂದರ ಕಣ್ಣರ್’ ಗೋಷ್ಠಿಯಲ್ಲಿ ಪುನೀತ್ ಜನಪ್ರಿಯತೆ ಕುರಿತು ಸಿನಿಮಾ ವಿಮರ್ಶಕ ಕೆ. ಪುಟ್ಟಸ್ವಾಮಿ ವಿಶ್ಲೇಷಿಸಿದ್ದು ಹೀಗೆ. ಪುನೀತ್ ರಾಜ್‌ಕುಮಾರ್ ಅವರ ನಿಧನದ ಬಳಿಕ ಅವರ ಬಗೆಗೆ ಬರೆದ ಲೇಖನಗಳ ಸಂಗ್ರಹವನ್ನು ಎ.ಎಸ್. ಪ್ರಭಾಕರ ಸಂಪಾದಿಸಿದ್ದಾರೆ. ಈ ಕೃತಿಯ ಶೀರ್ಷಿಕೆಯಡಿ ನಡೆದ ಗೋಷ್ಠಿ, ಪುನೀತ್ ಅವರ ಚಿತ್ರಯಾನವನ್ನು ಮೆಲುಕುಹಾಕಿತು.

‘ಚಿತ್ರರಂಗದಲ್ಲಿ ರಾಜ್‌ಕುಮಾರ್ ಅವರು ಜನಪ್ರಿಯರಾಗಲು ಮುಖ್ಯ ಕಾರಣ ಆಯ್ದುಕೊಂಡ ಕೌಟುಂಬಿಕ ಪಾತ್ರಗಳು. ಸಹಜವಾದ ಅವರ ನಟನೆ ಕನ್ನಡಿಗರ ಬದುಕಿಗೆ ಹತ್ತಿರವಾಗಿತ್ತು. ಬಾಲನಟನಾಗಿ ಜನರ ಮೆಚ್ಚುಗೆಗೆ ಪಾತ್ರವಾಗಿದ್ದ ಪುನೀತ್, 13 ವರ್ಷಗಳ ಬಳಿಕ ಯುವನಟನಾಗಿ ಎರಡನೇ ಇನಿಂಗ್ಸ್ ಆರಂಭಿಸಿದರು. ಅವರ ಲವಲವಿಕೆಯ ಅಭಿನಯ ಹೊಸ ತಲೆಮಾರಿಗೆ ಹಿಡಿಸಿತು. ತಂದೆಯ ಹಾದಿಯನ್ನು ಅನುಸರಿಸಿದ ‘ಅಪ್ಪು’, ಕೌಟುಂಬಿಕ ಮೌಲ್ಯಗಳ ಚಿತ್ರಗಳಿಗೆ ಆದ್ಯತೆ ನೀಡಿದರು. ಇದರಿಂದಾಗಿ ಅವರು ಎಲ್ಲರಿಗೂ ‘ಇಷ್ಟವಾಗುತ್ತಾ ಹೋದರು’ ಎಂದು ಕೆ.ಪುಟ್ಟಸ್ವಾಮಿ ವ್ಯಾಖ್ಯಾನಿಸಿದರು.

‘ಮೂರು ಸಾವುಗಳು ಸಾರ್ವಜನಿಕ ಬದುಕಿನ ಮೇಲೆ ದೊಡ್ಡ ಪರಿಣಾಮ ಬೀರಿತು. ಶಂಕರ್ ನಾಗ್ ಹಾಗೂ ರಾಜ್‌ಕುಮಾರ್ ಅವರ ಸಾವು ಆಘಾತ ನೀಡುವ ಜತೆಗೆ ಜನರ ಜೀವನವನ್ನು ಪ್ರಭಾವಿಸಿತ್ತು. ಪುನೀತ್ ಅವರ ಮರಣ ಮೊದಲೆರಡು ಸಾವಿಗಿಂತ ಭೀಕರವಾಗಿತ್ತು. ಅವರ ಜನಪ್ರಿಯತೆ ಮರಣದ ನಂತರ ಊಹೆಗೂ ನಿಲುಕದಷ್ಟು ಹೆಚ್ಚಿತು. ಕನ್ನಡಿಗರು ಬಾಲ್ಯದಿಂದಲೂ ಅವರ ಬೆಳವಣಿಗೆಯನ್ನು ಹತ್ತಿರದಿಂದ ನೋಡುತ್ತಾ ಬಂದಿದ್ದರು. ಇದರಿಂದಾಗಿ ಜನಮಾನಸದಲ್ಲಿ ಅಚ್ಚಳಿಯದ ಸ್ಥಾನ ಪಡೆದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎ.ಎಸ್. ಪ್ರಭಾಕರ, ‘ಪುನೀತ್ ಮೂರು ತಲೆಮಾರಿನ ನಟರ ಸ್ಪರ್ಧೆ ಎದುರಿಸಿದರು. ಕನ್ನಡಿಗರು ಕಪ್ಪು ವರ್ಣದ ನಟರನ್ನು ಒಪ್ಪಿಕೊಂಡಿರುವುದು ಕಡಿಮೆ. ರಾಜ್‌ಕುಮಾರ್ ಅವರ ಮಕ್ಕಳು ಅಪ್ಪು ಸುಂದರ ಆಗಿರದಿದ್ದರೂ ತಮ್ಮ ಪ್ರತಿಭೆ ಹಾಗೂ ಅಭಿನಯದ ಮೂಲಕ ಜನರ ಅಭಿರುಚಿ ಬದಲಾಯಿಸಿದರು. ಪುನೀತ್ ಅವರ ಜೀವನ ಸಾಮರಸ್ಯದ ಸಂಕೇತವಾಗಿದ್ದು, ಸಾರ್ವಜನಿಕ ಸಭ್ಯಸಿಕೆಯನ್ನು ಬಿಟ್ಟು ಹೋಗಿದ್ದಾರೆ’ ಎಂದು ಅವರು ಹೇಳಿದರು.

‘ಮುಗ್ಧ ನಗುವೊಂದರ ಕಣ್ಣರ್’ ಗೋಷ್ಠಿಯಲ್ಲಿ ಕೆ. ಪುಟ್ಟಸ್ವಾಮಿ ಮಾತನಾಡಿದರು. ಎ.ಎಸ್ ಪ್ರಭಾಕರ್ ಇದ್ದಾರೆ. – ಪ್ರಜಾವಾಣಿ ಚಿತ್ರ/ರಂಜು ಪಿ.

ಪುನೀತ್ ರಾಜ್‌ಕುಮಾರ್

ಮಕ್ಕಳ ಸಾವು ಕೊನೆಯವರೆಗೂ ಕಾಡುತ್ತದೆ: ನಟ ಕಬೀರ್ ಬೇಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಸಾವು ಯಾವುದೇ ಪೋಷಕರನ್ನು ಕೊನೆಯವರೆಗೂ ಕಾಡುತ್ತದೆ. ತಂದೆ, ತಾಯಿಗೆ ಮಕ್ಕಳನ್ನು ಕಳೆದುಕೊಳ್ಳುವುದಕ್ಕಿಂತ ದೊಡ್ಡ ನೋವು ಬೇರೆ ಇರುವುದಿಲ್ಲ ಎಂದು ಚಿತ್ರನಟ ಕಬೀರ್ ಬೇಡಿ ಹೇಳಿದರು.

ಬೆಂಗಳೂರು ಸಾಹಿತ್ಯೋತ್ಸವದ ಎರಡನೇ ದಿನವಾದ ಭಾನುವಾರ, ‘ನಿಮ್ಮ ಆತ್ಮಕತೆಯಲ್ಲಿ ಮಗನ ಮರಣಪತ್ರದ ಕುರಿತು ಉಲ್ಲೇಖಿಸಿದ್ದೀರಿ. ತಂದೆಯಾದ ನಿಮ್ಮ ಬಗ್ಗೆ ಮಗ ಏನು ಹೇಳಿದ್ದ ಎಂಬುದರ ವಿವರವೇ ಕೃತಿಯಲ್ಲಿಲ್ಲ. ನಿಜವಾಗಿಯೂ ಏನಿತ್ತು’ ಎಂದು ಸಭಿಕರೊಬ್ಬರು ಪ್ರಶ್ನಿಸಿದಾಗ, ಭಾವುಕರಾದ ಬೇಡಿ, ಮಗನ ಸಾವಿನ ಕುರಿತು ಹೆಚ್ಚು ಮಾತನಾಡಲು ನಿರಾಕರಿಸಿದರು.

‘ಆಕಾಶವಾಣಿಯಲ್ಲಿ ಉದ್ಯೋಗ ದಲ್ಲಿದ್ದೆ. ಕೆಲವರ ಆಸಕ್ತಿಕ್ತತೆಯ ಕಾರಣದಿಂದ ಅಲ್ಲಿಂದ ಹೊರಬಂದೆ. ನಂತರ ಸಿನಿಮಾ ರಂಗ ಪ್ರವೇಶಿಸಿದೆ. ಮಾಡೆಲಿಂಗ್ ಕ್ಷೇತ್ರದಲ್ಲಿರುವವರನ್ನು ಪ್ರತಿನಿಧಿಸಬಾರದು ಎಂದು ನಿರ್ಧರಿಸಿದ್ದೆ. ಆದರೂ, ಪ್ರೊತಿಮಾ ಬೇಡಿಯೊಂದಿಗೆ ಪ್ರೇಮಾಂಕುರವಾಯಿತು. ಪಾಶ್ಚಿಮಾತ್ಯ ಶೈಲಿಯ ನೃತ್ಯಗಾತಿಯಾಗಿದ್ದ ಪ್ರೊತಿಮಾ, ಒಡಿಸ್ಸಿ ನೃತ್ಯ ಕಲಿಯಲು ಬಯಸಿದ್ದರು. ಆಗ ಸಂಪೂರ್ಣ ಬೆಂಬಲಕ್ಕೆ ನಿಂತಿದ್ದ ನಾನು, ಮಕ್ಕಳ ನಿರ್ವಹಣೆ ಮಾಡಿದೆ’ ಎಂದರು.

‘ನೃತ್ಯ ಶಾಲೆ ತೆರೆಯಲು ಪ್ರೊತಿಮಾ ಸಾಕಷ್ಟು ಕಷ್ಟಪಟ್ಟಿದ್ದರು. ನೆರವು ಕೋರಿ ರಾಜೀವ್ ಗಾಂಧಿ ಸೇರಿದಂತೆ ಹಲವರಲ್ಲಿ ಮನವಿ ಮಾಡಿದ್ದರು. ರಾಮಕೃಷ್ಣ ಹೆಗಡೆ ನೆರವಿಗೆ ಬಂದರು. ನಂತರ ಹಲವರು ಕೈಜೋಡಿಸಿದರು. ಇದರಿಂದಾಗಿ ನೃತ್ಯಗ್ರಾಮ ಸ್ಥಾಪನೆಯಾಯಿತು ಎಂದು ವಿವರಿಸಿದರು.

‘ಹಾಲಿವುಡ್ ಸೇರಿದಂತೆ ಹಲವು ದೇಶಗಳ, ಭಾಷೆಗಳ ಚಿತ್ರರಂಗದಲ್ಲಿ ಕೆಲಸ ಮಾಡಿದ್ದೇನೆ. ಹಲವು ಘಟನೆಗಳು ಜೀವನವನ್ನು ಅರಿಯಲು ಮತ್ತು ಬೆಳೆಯಲು ಸಹಕರಿಸಿದವು. ಭಾರತಕ್ಕೆ ಬರಬೇಕು ಎಂದು ಯಾವಾಗಲೂ ನನ್ನ ಮನಸ್ಸು ತುಡಿಯುತ್ತಿತ್ತು, ನಾನು ಇಲ್ಲಿಯವ, ‘ಇದು ನನ್ನ ನೆಲ ಎಂಬ ಸಂತೋಷವೇ ಅದಕ್ಕೆ ಕಾರಣ’ ಎಂದರು.

ಕಬೀರ್ ಬೇಡಿ

‘ಉದ್ಯಾನಗಳೂ ಪಾರಂಪರಿಕ ತಾಣಗಳು’

ಬೆಂಗಳೂರು: ‘ಕೇವಲ ಕಟ್ಟಡಗಳು ನಗರವೊಂದರ ಪಾರಂಪರಿಕ ತಾಣಗಳಲ್ಲ, ಉದ್ಯಾನಗಳೂ ಪಾರಂಪರಿಕ ತಾಣಗಳೇ ಆಗಿವೆ. ನಗರದ ಕಬ್ಬನ್ ಪಾರ್ಕ್‌ಗೆ 152 ವರ್ಷಗಳಷ್ಟು ಇತಿಹಾಸವಿದೆ. ಆದ್ದರಿಂದ ಇದು ಕೂಡ ಬೆಂಗಳೂರಿನ ಪಾರಂಪರಿಕ ತಾಣವಾಗಿದೆ’ ಎಂದು ಲೇಖಕಿ ರೂಪಾ ಪೈ ಹೇಳಿದರು.

‘ಲಾಲ್‌ಬಾಗ್ ಬಗ್ಗೆ ಇರುವಷ್ಟು ಪುಸ್ತಕಗಳು ಕಬ್ಬನ್ ಪಾರ್ಕ್ ಬಗ್ಗೆ ಇಲ್ಲ. ಇದೇ ಕಾರಣಕ್ಕೆ ‘ಕಬ್ಬನ್ ಪಾರ್ಕ್: ದಿ ಗ್ರೀನ್ ಹಾರ್ಟ್ ಆಫ್ ಬೆಂಗಳೂರು’ ಪುಸ್ತಕ ಬರೆದೆ’ ಎಂದರು.

‘ಉದ್ಯಾನದಲ್ಲಿ ವಾಕಿಂಗ್ ಮಾಡುವವರು, ಜಾಗಿಂಗ್ ಮಾಡುವವರು ಹೀಗೆ ಈ ಎಲ್ಲರ ನಡುವೆ ಒಂದು ಪ್ರಜಾಸತ್ತಾತ್ಮಕವಾದ ಜಗಳ ಇದೆ. ಇದಕ್ಕಾಗಿ ಹಲವರು ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದ್ದಾರೆ. ಈ ಜಗಳಗಳೇ ಉದ್ಯಾನವನ್ನು ಇನ್ನೂವರೆಗೂ ಜೀವಂತವಾಗಿರಿಸಿದೆ’ ಎಂದರು.

ಹೊಗಳಿಕೆ, ಟೀಕೆ... ತಪ್ಪು ಗ್ರಹಿಕೆ

ಸಿನಿಮಾ ಸತ್ವ ಅರ್ಥೈಸಿಕೊಳ್ಳುವಲ್ಲಿನ ಯಡವಟ್ಟುಗಳತ್ತ ನಟೇಶ್ ಹೆಗ್ಡೆ ಬೊಟ್ಟು

• ವಿಶಾಖ ಎನ್.

ಬೆಂಗಳೂರು: ‘ನನ್ನೂ ಸೇರಿದಂತೆ ಎಷ್ಟೋ ಸಿನಿಮಾಗಳನ್ನು ತಪ್ಪು ಕಾರಣಗಳಿಂದಾಗಿ ಹೊಗಳುವುದು ಅಥವಾ ಟೀಕಿಸುವುದು ನಡೆಯುತ್ತಿದೆ’ ಎಂದು ‘ಪೆದ್ರೊ’ ಕನ್ನಡ ಸಿನಿಮಾ ನಿರ್ದೇಶಕ ನಟೇಶ್ ಹೆಗ್ಡೆ ವಿಷಾದಿಸಿದರು.

ಬೆಂಗಳೂರು ಸಾಹಿತ್ಯ ಉತ್ಸವದ ‘ಬಾಲಿ–ಮಾಲಿ–ಟಾಲಿ–ಸ್ಯಾಂಡಲ್‌ವುಡ್’ ಗೋಷ್ಠಿಯಲ್ಲಿ ಭಾನುವಾರ ಅವರು ಮಾತನಾಡಿದರು. ‘ಕಾಂತಾರ’ ಸಿನಿಮಾದಲ್ಲಿ ಮೇಲ್ಜಾತಿಯವನ ಮನೆಯೊಳಗೆ ದಲಿತ ಪ್ರವೇಶಿಸಿ, ಊಟದ ಮೇಜಿನ ಎದುರು ಕೂರುವ ದೃಶ್ಯವಿದೆ. ಅದರ ಕುರಿತು ಮಾತನಾಡುವವರನ್ನು ಹುಡುಕಬೇಕು. ಅದೇ ಆ ಸಿನಿಮಾದ ಕೇಂದ್ರಪಾತ್ರ ಕಿರುಚುವುದನ್ನು ಕಂಡು ಪ್ರೇಕ್ಷಕರು ರೋಮಾಂಚನಗೊಳ್ಳುತ್ತಾರೆ. ‘ಆರ್‌ಆರ್‌ಆರ್’ ತೆಲುಗು ಚಿತ್ರದಲ್ಲಿ ಪ್ರಾಣಿಗಳನ್ನು ಒಳಗೊಂಡ ಅನೇಕ ಬಾಲಿಶ ದೃಶ್ಯಗಳನ್ನು ಕಂಡೂ ಪ್ರೇಕ್ಷಕರು ನವಿರೇಳುವುದು ಕೂಡ ಇದೇ ಮನಸ್ಥಿತಿಯಿಂದ ಎಂದು ಅವರು ಅಭಿಪ್ರಾಯಪಟ್ಟರು.

ತಾವು ಮಾಡಿದ್ದ ಕಿರುಚಿತ್ರವನ್ನು ಗಮನಿಸಿದ ರಾಜ್ ಬಿ. ಶೆಟ್ಟಿ ತಾವಾಗಿಯೇ ಸಂಪರ್ಕಿಸಿದ್ದರಿಂದ ‘ಪೆದ್ರೊ’ ಸಿನಿಮಾ ಸಾಕಾರಗೊಂಡಿತು ಎಂದು ಅನುಭವ ಹಂಚಿಕೊಂಡ ಅವರು, ತಮ್ಮ ಎರಡನೇ ಸಿನಿಮಾ ಕಥೆ ಕೇಳಿಯೂ ಇದೇ ರೀತಿ ನಿರ್ಮಾಣಕ್ಕೆ ಹಸಿರು ನಿಶಾನೆ ಸಿಕ್ಕಿದ್ದಾಗಿ ತಿಳಿಸಿದರು. ಸಿನಿಮಾಗಳನ್ನು ‘ಆ ವುಡ್... ಈ ವುಡ್’ ಎಂದು ವರ್ಗೀಕರಿಸುವುದೇ ಅರ್ಥವಿಲ್ಲದ್ದು ಎಂದೂ ಹೇಳಿದರು.

ಬಾಲಿವುಡ್‌ಗೆ ತನ್ನ ಇತಿಹಾಸವೇ ಮುಳ್ಳು: ‘1990ರ ದಶಕದಲ್ಲಿ ಬಾಲಿವುಡ್ ಜಾಗತಿಕ ಆರ್ಥಿಕತೆಯೊಂದಾಗಿ ಬದಲಾಯಿತು. ಮದುವೆ ಸಂಪ್ರದಾಯವೆಲ್ಲ ಸಿನಿಮಾದ ಅನಿವಾರ್ಯತೆಯಾಯಿತು. ಹಿಂದೂ ಆಚರಣೆಗಳನ್ನೇ ತೋರುತ್ತಾ ಕ್ರಮೇಣ ಅದು ಪುರುಷ ಪ್ರಧಾನ ಧೋರಣೆಯ ರಾಷ್ಟ್ರೀಯತೆಯ ಪ್ರಚಾರಸೂತ್ರವಾಗಿ ಬದಲಾಗಿಹೋಯಿತು. ಈಗೀಗ ರಾಷ್ಟ್ರೀಯತೆಯ ಆ ಬಿಂಬಕ್ಕೆ ಪ್ರತಿರೋಧ ಎನ್ನುವಂತೆ ಪ್ರಾದೇಶಿಕ ಸಿನಿಮಾಗಳು ಗೆಲ್ಲತೊಡಗಿದವು. ತೆಲುಗಿನಲ್ಲಿ ತನ್ನದೇ ಆದ ಫ್ಯಾಂಟಸಿ ಆಧರಿತ ಚಿತ್ರಗಳು ಬಂದವು’ ಎಂದು ಮಲಯಾಳಂ ನಿರ್ದೇಶಕ ಕಮಲ್ ಕೆ.ಎಂ. ವಿಶ್ಲೇಷಿಸಿದರು.

ಬಂಡವಾಳ ಹೂಡುವವರಿಗೆ ಸಿನಿಮಾ ನಿರ್ದೇಶಕರ ತಲೆಯಲ್ಲಿ ಇರುವ ಚಿತ್ರಕಥೆ ರುಚಿಸುವುದು ಕಷ್ಟ. ಅಂತಹ ಮನಸ್ಥಿತಿ ಇರುವ ನಿರ್ಮಾಪಕರನ್ನು ಹುಡುಕುವುದೂ ಸವಾಲು. ಚಿತ್ರದಿಂದ ಚಿತ್ರಕ್ಕೆ ಈ ಕಲೆ ತಮ್ಮೊಂದಿಗೆ ಒಲಿಯುತ್ತಿದೆ ಎಂದು ಹಿಂದಿ ಸಿನಿಮಾಗಳ ನಿರ್ದೇಶಕಿ ಅಲಂಕೃತಾ ಶ್ರೀವಾಸ್ತವ ಅನುಭವ ಹಂಚಿಕೊಂಡರು.

‘ಬಾಹುಬಲಿ’ ಸರಣಿ ಚಿತ್ರಗಳನ್ನು ನಿರ್ಮಿಸಿದ ಅರ್ಕಾ ನಿರ್ಮಾಣ ಸಂಸ್ಥೆಯ ಸಿಇಒ ಶೋಬು ಯರ್ಲಗಡ್ಡ, ‘ಅಮರ ಚಿತ್ರಕಥಾದಂತಹ ವಸ್ತುವಿನ ದೃಶ್ಯ ವೈಭವವೇ ಬಾಹುಬಲಿ. ಕೆಜಿಎಫ್, ಕಾಂತಾರ ಕೂಡ ತಮ್ಮ ನೆಲದ ಕಥನಗಳಿಂದಲೇ ದೊಡ್ಡ ಮಟ್ಟದಲ್ಲಿ ವಿವಿಧೆಡೆ ಗೆದ್ದಿವೆ. ಇಂತಹ ಗೆಲುವುಗಳು ಹೆಚ್ಚಾಗಬೇಕು’ ಎಂದು ಆಶಿಸಿದರು. ಪತ್ರಕರ್ತೆ ಕಾವೇರಿ ಬಾಮ್ಜೈ ಗೋಷ್ಠಿಯನ್ನು ನಿರ್ವಹಿಸಿದರು.

ಉತ್ಸವದ ಎರಡನೇ ದಿನ ‘ಬಾಲಿ–ಮಾಲಿ–ಟಾಲಿ–ಸ್ಯಾಂಡಲ್‌ವುಡ್’ ಗೋಷ್ಠಿಯಲ್ಲಿ ಕಾವೇರಿ ಬಾಮ್ಜೈ, ಅಲಂಕೃತ ಶ್ರೀವಾಸ್ತವ, ಶೋಬು ಯರ್ಲಗಡ್ಡ, ನಟೇಶ್ ಹೆಗ್ಡೆ ಮತ್ತು ಕಮಲ್ ಕೆ.ಎಂ.ಭಾಗವಹಿಸಿದರು. – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

‘ಆತ್ಮಹತ್ಯೆಗೆ ಮನಸ್ಸಾದರೆ ನೀರು ಕುಡಿದು ಮಲಗಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಾವಣಗೆರೆಯ ಹೈಸ್ಕೂಲು ಮೈದಾನದ ಫುಟ್‌ಪಾತ್ ಬಳಿ ಐವರು ನನ್ನ ಮೇಲೆ ದೌರ್ಜನ್ಯ ಮಾಡಿದರು. ಸಾಗುವ ದೈರಿಗೆ ದೇಹ ಕೊಟ್ಟು, ಛಿದ್ರವಾಗಿಬಿಡಬೇಕು ಎಂಬ ನಿರ್ಧಾರ ಆ ಘಟನೆಯ ನಂತರ ಮೂಡಿತು. ಆತ್ಮಹತ್ಯೆಯ ನಿರ್ಧಾರಕ್ಕೆ ಬಂದದ್ದು ‘ಇದು ಎರಡನೇ ಸಲ. ಮೊದಲ ಸಲ ಭಿಕ್ಷೆ ಬೇಡಿದ ಹಣದಲ್ಲಿ ತಂದ ಟಿಕ್‌ಟ್ವೆಂಟಿ ಕುಡಿದೂ ಬದುಕಿದ್ದೆ. ಈ ಸಲ ಸಾಯಬೇಕು ಅಂದುಕೊಂಡೆ. ಎರಡನೇ ಮನಸ್ಸು ಬದುಕು ಎಂದಿತು. ಒಂದು ಚೊಂಬು ನೀರು ಕುಡಿದು, ಹೊದ್ದು ಮಲಗಿಬಿಟ್ಟೆ. ಅಮೇಲೆ ಎಂದೂ ಸಾಯುವ ನಿರ್ಧಾರ ಕೈಗೊಳ್ಳಲಿಲ್ಲ.’

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಭಾನುವಾರ ನಡೆದ ‘ನಡುವೆ ಸುಳಿವ ಹೆಣ್ಣು’ ಅನುಭವ ಹೇಳಿಕೊಳ್ಳುವ ಕಾರ್ಯಕ್ರಮದಲ್ಲಿ ಮಂಜಮ್ಮ ಜೋಗತಿ ತಮ್ಮ ಬದುಕಿನ ಕಷ್ಟಗಳ ಪುಟಗಳನ್ನು ಮತ್ತೆ ಮೆಲುಕು ಹಾಕಿದರು. ಅಷ್ಟೇ ಅಲ್ಲ, ಯಾವುದೇ ಕಾರಣಕ್ಕೆ ಯಾರಿಗೇ ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸಿದರೂ, ಒಂದು ಲೀಟರ್ ನೀರು ಕುಡಿದು ಹೊದ್ದು ಮಲಗುವಂತೆ ಸಲಹೆ ನೀಡುತ್ತಿರುವುದಾಗಿಯೂ ತಿಳಿಸಿದರು.

ಹುಡುಗನಾಗಿದ್ದ ತಮ್ಮಲ್ಲಿ ಹೆಣ್ಣಾಗುವ ಬಯಕೆ ಮೂಡಿದ್ದು, ಅದಕ್ಕೆ ಸಮಾಜದಿಂದ ಸವಾಲುಗಳು ಎದುರಾದದ್ದು, ತಂದೆ–ತಾಯಿಯೇ ಮನೆಯಿಂದ ಹೊರಹಾಕುವಾಗಲೂ ಹೊಳೆಗೆ ತಿನಿಸಿ ಕಳುಹಿಸಿದ್ದು, ಮುತ್ತು ಕಟ್ಟಿಸಿ ಪರಿಹಾರಕ್ಕೆ ಹುಡುಕಾಡಿದ್ದು, ಭಿಕ್ಷಾಟನೆ ಬೇಡಿದ್ದು, ಯಲ್ಲಮ್ಮ ಜೋಗತಿಯಾಗಿ ಗೆದ್ದದ್ದು ಎಲ್ಲವನ್ನೂ ಅವರು ಪುಂಖಾನುಪುಂಖವಾಗಿ ಮೆಲುಕುಹಾಕಿದರು. ಮೊದಲ ಬಾರಿಗೆ ಅವರ ಅನುಭವಗಳಿಗೆ ಕಿವಿಯಾದ ವರಲ್ಲಿ ಭಾವುಕರಾಗಿ, ಚಪ್ಪಾಳೆ ತಟ್ಟುತ್ತಾ ಪ್ರತಿಕ್ರಿಯಿಸಿದರು.

ರಾತ್ರಿಯಿಂದ ಸೂರ್ಯ ಹುಟ್ಟುವವರೆಗೆ ನಡೆವ ಯಲ್ಲಮ್ಮ ಜೋಗತಿ ಪ್ರದರ್ಶನವನ್ನು ಕಾಲಕ್ಕೆ ತಕ್ಕಂತೆ ಒಂದು ಗಂಟೆ, ಅರ್ಧ ಗಂಟೆ, ಕೊನೆಗೆ ಮೂರು ನಿಮಿಷಕ್ಕೂ ಇಳಿಸಿ ಒಗ್ಗಿಸಿದ ಸವಾಲನ್ನು ಹಂಚಿಕೊಂಡರು.

ತಾವು ನಿಂತು ಮಾತನಾಡುತ್ತಿರುವ ಲಲಿತ್ ಅಶೋಕ ಹೋಟೆಲ್‌ನಲ್ಲಿಯೇ ನಾಲ್ವರು ಲಿಂಗತ್ವ ಅಲ್ಪಸಂಖ್ಯಾತರಿಗೆ ಕೆಲಸ ಕೊಟ್ಟಿರುವುದನ್ನು ಶ್ಲಾಘಿಸಿದ ಅವರು, ಅಂತಹ ಇನ್ನಷ್ಟು ಅವಕಾಶಗಳು ತಮ್ಮಂತೆ ನೊಂದವರಿಗೆ ಸಿಗಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಮಂಜಮ್ಮ ಅವರ ‘ನಡುವೆ ಸುಳಿವ ಹೆಣ್ಣು’ ಆತ್ಮಕಥೆಯನ್ನು ನಿರೂಪಣೆ ಮಾಡಿರುವ ಅರುಣ್ ಜೋಳದ ಕೂಡ್ಲಿಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.


ಪದ್ಮಶ್ರೀ ಪ್ರಶಸ್ತಿ ವಿಜೇತರಾದ ಮಂಜಮ್ಮ ಜೋಗತಿ ಮಾತನಾಡುವಾಗ ಭಾವುಕರಾದರು.

‘ಲೇಖಕ ರಾಜಕೀಯ ಪ್ರಜ್ಞೆ ರೂಪಿಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೇಖಕನು ರಾಜಕೀಯ ಪ್ರಜ್ಞೆ ರೂಪಿಸಬೇಕು. ಅಲ್ಪಸಂಖ್ಯಾತರ ಕಡೆಗೆ ಗಮನ ಕೊಡಬೇಕು. ನಾನು ಕಂಡ ಕರಾವಳಿಯ ಧರ್ಮ ಸಂಘರ್ಷದ ಘಟನೆಗಳು ಕಾಡುತ್ತವೆ. ನನ್ನ ಹೆಚ್ಚಿನ ಕಥೆಗಳು ಫ್ಯಾಸಿಸಂ ವಿರುದ್ಧವಾಗಿಯೇ ಇವೆ’ ಎಂದು ಯುವ ಕಥೆಗಾರ ಮುಸ್ತಾಫ ಕೆ.ಎಚ್. ಹೇಳಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಭಾನುವಾರ ನಡೆದ ‘ಹೊಸ ಬರಹ: ಇಂದಿನ ಕನ್ನಡ ಬರಹ’ ಸಂವಾದದಲ್ಲಿ ಸಾಹಿತಿ ವಿವೇಕ ಶಾನಭಾಗ ಕೇಳಿದ ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯೆ ನೀಡುತ್ತಾ ಸಮಕಾಲೀನ ಸಂಗತಿಗಳ ಮೇಲೆ ಬೆಳಕು ಚೆಲ್ಲಿದರು. ಸಭಿಕರೊಬ್ಬರು ಎಡವೂ ಅಲ್ಲದ, ಬಲವೂ ಅಲ್ಲದ ಸಾಹಿತ್ಯಸೃಷ್ಟಿ ಸಾಧ್ಯವಿದೆಯೇ ಎಂದು ಕೇಳಿದ ಪ್ರಶ್ನೆಗೆ, ‘ಬೌದ್ಧ ದಾರ್ಶನಿಕತೆ ಇಟ್ಟುಕೊಂಡು ಎರಡೂ ಅಲ್ಲದ ಸಾಹಿತ್ಯವನ್ನು ಮುಸ್ಲಿಂ ಹಾಗೂ ತಳಸಮುದಾಯದ ಲೇಖಕರು ಸೃಷ್ಟಿಸುತ್ತಿದ್ದಾರೆ. ದೇವನೂರ ಮಹಾದೇವ ಅವರಂಥವರು ಈಗಾಗಲೇ ಅದನ್ನು ಮಾಡಿದ್ದಾರೆ’ ಎಂದು ಉತ್ತರಿಸಿದರು.

ತಮಗೆ ಸಿದ್ಧಿಸಿರುವ ಕನ್ನಡ ಸಾಕಾಗುತ್ತಿಲ್ಲ ಎಂದು ಯಾವತ್ತಾದರೂ ಅನಿಸಿದೆಯೇ ಎಂಬ ವಿವೇಕ ಶಾನಭಾಗ ಅವರ ಇನ್ನೊಂದು ಪ್ರಶ್ನೆಗೆ, ‘ಹಾಗೆ ಅನಿಸಿಲ್ಲ. ಎಲ್‌ಜಿಬಿಟಿ, ಕಾರ್ಪೊರೇಟ್ ವಿಷಯಗಳ ಕುರಿತು ಬರೆಯುವಾಗ, ದಲಿತ ಜಗತ್ತಿನ ಕಥನ ಕಟ್ಟಿಕೊಡುವಾಗ ಭಾಷೆ ನಿರಂತರವಾಗಿ ಬದಲಾಯಿಸಿಕೊಳ್ಳುತ್ತಿದೆ. ದಾದಾಪೀರ್ ಜೈಮನ್, ವಸುಧೇಂದ್ರ, ಮಧು ವೈ.ಎನ್. ತರಹದವರು ಅದಕ್ಕೆ ಉದಾಹರಣೆ’ ಎಂದು ಅವರು ಹೇಳಿದರು.

‘ಇದೇ ಪ್ರಶ್ನೆಗೆ ಉತ್ತರಿಸಿದ ಕವಯಿತ್ರಿ ಮೌಲ್ಯಾ ಸ್ವಾಮಿ, ‘ಕತ್ತಲ ಬಾವಿಯಲ್ಲಿ ಕಣ್ಣುಚ್ಚಿ ಹುಡುಕಿದಂತೆಯೇ ಹೊಸ ಪದಗಳನ್ನು ಹುಡುಕುತ್ತೇನೆ’ ಎಂದು ಕಾವ್ಯಾತ್ಮಕವಾಗಿ ಹೇಳಿದರು.

ಸಂಗೀತದಲ್ಲಿ ಇರುವಂತೆಯೇ ಸಾಹಿತ್ಯದಲ್ಲೂ ಪದಗಳ, ಶಬ್ದಗಳ ಹುಡುಕಾಟ–ಆಲೋಚನೆಯ ರಿಯಾಜ್ ಇರಬೇಕು ಎಂದು ಹೊಸ ಕಾದಂಬರಿಯನ್ನು ಬರೆದಿರುವ ಕವಯಿತ್ರಿ ಶ್ರೀದೇವಿ ಕಳಸದ ಉತ್ತರಿಸಿದರು.

ಮುಸ್ತಾಫ ‘ಮುಳಿ ಹುಲ್ಲಿನ ಮೂಲೆ ಅಂಗಡಿ’ ಕಥೆಯ ಭಾಗವನ್ನು ಓದಿದರು. ‘ಶ್ರುತಿ ತಪ್ಪಿದ ಚರಮಗೀತೆ’ ಎಂಬ ಕಾವ್ಯವನ್ನು ಮೌಲ್ಯಾ ವಾಚಿಸಿದರು. ಶ್ರೀದೇವಿ ತಮ್ಮ ಅಪ್ರಕಟಿತ ಕಾದಂಬರಿಯ ಪ್ರಸಂಗವೊಂದನ್ನು ಓದಿದರು.

ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಯ ಎರಡನೇ ದಿನ ‘ಹೊಸ ಬರಹ: ಇಂದಿನ ಕನ್ನಡ ಬರಹ’ ಗೋಷ್ಠಿಯಲ್ಲಿ ಮುಸ್ತಾಫ ಕೆ.ಎಚ್ ಮಾತನಾಡಿದರು. ವಿವೇಕ ಶಾನಭಾಗ, ಶ್ರೀದೇವಿ ಕಳಸದ, ಮೌಲ್ಯ ಸ್ವಾಮಿ ಇದ್ದಾರೆ. –ಪ್ರಜಾವಾಣಿ ಚಿತ್ರ

ಬಲಿಜ ಸಮುದಾಯದಿಂದ ಉಪವಾಸ ಸತ್ಯಾಗ್ರಹ ಇಂದು

ಬೆಂಗಳೂರು: ಪೂರ್ಣ ಪ್ರಮಾಣದಲ್ಲಿ 2ಎ ಮೀಸಲಾತಿಗೆ ಒತ್ತಾಯಿಸಿ ಸೋಮವಾರ (ಡಿ.5) ಸ್ವಾತಂತ್ರ್ಯ ಉದ್ಯಾನದಲ್ಲಿ ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಲು ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ನಿರ್ಧರಿಸಿದೆ.

‘ಬಲಿಜ ಹಾಗೂ ಅದರ ಉಪಜಾತಿಗಳು ಆರ್ಥಿಕ ಮತ್ತು ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ಸಮುದಾಯಗಳಾಗಿದ್ದು, ಸದ್ಯ ಶಿಕ್ಷಣಕ್ಕೆ 2ಎ ಮೀಸಲಾತಿ ಕಲ್ಪಿಸಲಾಗಿದೆ. ಉದ್ಯೋಗದ ವಿಷಯದಲ್ಲಿ 3ಎ ಪಟ್ಟಿಯಲ್ಲಿ ಉಳಿಸಲಾಗಿದ್ದು, ರಾಜಕೀಯ ಮೀಸಲಾತಿಯೂ ಇಲ್ಲವಾಗಿದೆ. ನಮ್ಮೆಲ್ಲ ಕಷ್ಟವನ್ನು ಅರಿತು 2ಎ ಮೀಸಲಾತಿಯನ್ನು ಮತ್ತೆ ನೀಡಬೇಕು’ ಎಂದು ಒತ್ತಾಯಿಸಿದೆ.

‘ಈ ಎಲ್ಲಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಉಪವಾಸ ಸತ್ಯಾಗ್ರಹ ನಡೆಸಲಾಗುತ್ತಿದೆ’ ಎಂದು ವೇದಿಕೆ ಅಧ್ಯಕ್ಷ ಎನ್.ಪಿ. ಮುನಿಕೃಷ್ಣ ಮತ್ತು ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್ ತಿಳಿಸಿದ್ದಾರೆ.

‘ಪ್ರತಿಭಟನೆಗಿಳಿದರೆ ರವಿ ಹೊರಗೆ ಬರಲು ಸಾಧ್ಯವಾಗಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿ.ಟಿ. ರವಿ ಅವರು ಸಿದ್ದರಾಮಯ್ಯ ಕುರಿತು ನೀಡಿರುವ ಹೇಳಿಕೆ ಸರಿಯಲ್ಲ. ನಾವು ಕೂಡ ಪ್ರತಿಭಟನೆ ಆರಂಭಿಸಿದರೆ ಸಿ.ಟಿ ರವಿ ಹೊರಗೆ ಬರಲು ಸಾಧ್ಯವಾಗುವುದಿಲ್ಲ’ ಎಂದು ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಸಿದ್ದರಾಮಯ್ಯ ವಿರುದ್ಧ ರಾಜಕೀಯವಾಗಿ ಸಿ.ಟಿ. ರವಿ ಮಾತನಾಡಿದ್ದಾರೆ.ಆದರೆ,ಇಂಥಮಾತು ಸರಿಯಲ್ಲ. ಇದನ್ನು ಇಲ್ಲಿಗೇ ನಿಲ್ಲಿಸಿದರೆ ಸರಿ, ಇಲ್ಲದಿದ್ದರೆ ಮತ್ತಷ್ಟು ವಿಕೋಪಕ್ಕೆ ಹೋಗಬಹುದು’ ಎಂದಿದ್ದಾರೆ.

‘ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದರೆ, ಕಾಂಗ್ರೆಸ್ ಅವಧಿಯಲ್ಲೂ ಇರಲಿಲ್ಲವೇ ಎನ್ನುತ್ತಾರೆ. ಹಾಗಾದರೆ, ಆಗ ವಿರೋಧ ಪಕ್ಷದಲ್ಲಿ ಇದ್ದವರು ಯಾಕೆ ಸುಮ್ಮನಿದ್ದರು’ ಎಂದು ಪ್ರಶ್ನಿಸಿದರು.

ನಗರದಲ್ಲಿ ಇಂದು

ವಿಶ್ವ ಮಣ್ಣು ದಿನ: ಉದ್ಘಾಟನೆ: ಎಸ್.ವಿ. ಸುರೇಶ, ಅತಿಥಿಗಳು: ಜಿ.ಎಸ್. ದಾಸೇಗೌಡ, ಕೆ.ಸಿ. ನಾರಾಯಣಸ್ವಾಮಿ, ಕೆ.ಬಿ. ಉಮೇಶ್, ಕೆ. ನಾರಾಯಣಗೌಡ, ಎಚ್.ಸಿ. ಪ್ರಕಾಶ್, ಅಧ್ಯಕ್ಷತೆ: ಎಸ್. ಬಿ. ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಳಿಗ್ಗೆ 10

ಪಿ. ಸಾಯಿನಾಥ್ ಅವರ ಉಪನ್ಯಾಸ: ವಿಷಯ: ಭಾರತೀಯ ಮಾಧ್ಯಮಗಳು ರಾಜಕೀಯವಾಗಿ ಸ್ವತಂತ್ರವಾಗಿವೆ; ಆದರೆ ಆರ್ಥಿಕವಾಗಿ ಬಂದಿಯಾಗಿವೆ, ಆಯೋಜನೆ ಮತ್ತು ಸ್ಥಳ: ಸೆಂಟರ್ ಫಾರ್ ಮಿಡಿಯಾ ಸ್ಟಡೀಸ್, ಜ್ಯೋತಿ ನಿವಾಸ ಕಾಲೇಜ್, ಹೊಸೂರು ರಸ್ತೆ, ಬೆಳಿಗ್ಗೆ 10.30

57ನೇ ವಾರ್ಷಿಕ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಂ. ಜಗದೀಶ್ ಕುಮಾರ್, ಜಯಕರ ಎಸ್. ಎಮ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟರ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಳಿಗ್ಗೆ 11

ಹನುಮ ಜಯಂತಿ ಮಹೋತ್ಸವ: ಬೆಳಿಗ್ಗೆ 6ಕ್ಕೆ ಅಭಿಷೇಕ ಮತ್ತು ವಿಶೇಷ ಮುತ್ತಿನ ಅಲಂಕಾರ, ಸಂಜೆ 5.30ಕ್ಕೆ ಭಜನೆ: ವೆಂಕಟಪ್ಪ, ಗೋಪಾಲ ಕೃಷ್ಣ ಮತ್ತು ತಂಡ, ಆಯೋಜನೆ: ದಾಸ ಆಂಜನೇಯಸ್ವಾಮಿ ಚಾರಿಟಬಲ್ ಟ್ರಸ್ಟ್, ಮಲ್ಲೇಶ್ವರ

ಹನುಮ ಜಯಂತಿ: ಬೆಳಿಗ್ಗೆ 7.30ಕ್ಕೆ ಪಂಚಾಮೃತ ಅಭಿಷೇಕ, 10.30ಕ್ಕೆ ಮಂಗಳಾರತಿ ಮತ್ತು ದೇವರನಾಮಗಳು, ಸಂಜೆ 5.30ಕ್ಕೆ ಪೂಜೆ ಮತ್ತು ದೇವರನಾಮಗಳು, ರಾತ್ರಿ 9.30ಕ್ಕೆ ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಭಗವಾನ್ ಮಾರುತಿ ದೇವಾಲಯ ಟ್ರಸ್ಟ್, ಮಾಣಿಕ್ಯವೇಲು ಮ್ಯಾನ್ಷನ್, ಅರಮನೆ ರಸ್ತೆ

ಹನುಮ ಜಯಂತಿ: ವಿಶೇಷ ಪೂಜೆ, ಅನ್ನದಾನ ಕಾರ್ಯಕ್ರಮ, ಅತಿಥಿಗಳು: ಸಾ.ರಾ. ಗೋವಿಂದು, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಕಣ್ಮಣಿ ಡಾ.ರಾಜ್‌ಕುಮಾರ್ ಸಾಂಸ್ಕೃತಿಕ ವೇದಿಕೆ, ಸ್ಥಳ: ಆಂಜನೇಯಸ್ವಾಮಿ ದೇವಸ್ಥಾನ, ಕಂಠೀರವ ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಯಲಹಂಕ ಗೇಟ್, ಮಧ್ಯಾಹ್ನ 12

‘ಶ್ರೀಕೃಷ್ಣ ವಿಜಯ’ ಪೌರಾಣಿಕ ನಾಟಕ ಪ್ರದರ್ಶನ: ಉದ್ಘಾಟನೆ: ಕೆ.ವಿ. ನಾರಾಯಣಸ್ವಾಮಿ, ಅಧ್ಯಕ್ಷತೆ: ಬಿ. ನೀಲಪ್ಪ, ಅತಿಥಿಗಳು: ಎಚ್.ವೆಂಕಟೇಶ್, ರವೀಶ್ ಎಂ.ಎಲ್., ಆಯೋಜನೆ: ರೇವಣಸಿದ್ದೇಶ್ವರ ಕಲಾ ಬಳಗ, ಸ್ಥಳ: ನಯನ ಸಭಾಂಗಣ, ಬೆಳಿಗ್ಗೆ 11

‘6ಬಿ’ ಗಳ ದಕ್ಷಿಣ ಅಗ್ನಿಶಾಮಕ ಠಾಣೆ ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ವಹಣಾ ಕೇಂದ್ರದ ಕಟ್ಟಡ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಅರಗ ಜ್ಞಾನೇಂದ್ರ, ಅಧ್ಯಕ್ಷತೆ: ಎನ್.ಎ. ಹ್ಯಾರಿಸ್, ಪಿ.ಸಿ. ಮೋಹನ್, ಸ್ಥಳ: ಮಯೋಹಾಲ್ ಹತ್ತಿರ, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 11

ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಉದ್ಘಾಟನೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತಿ: ಸುಧಾಮೂರ್ತಿ, ದೇವಿಪ್ರಸಾದ್ ಶೆಟ್ಟಿ, ದತ್ತಾತ್ರೇಯ ಹೊಸಬಾಳೆ, ಆಯೋಜನೆ ಮತ್ತು ಸ್ಥಳ: ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ರಾಜರಾಜೇಶ್ವರಿನಗರ, ಸಂಜೆ 6

SAD DEMISE

We are Sad to announce the demise of
J Surendra Reddy
Chairman and Managing Director
of Promac Engineering Industries Ltd
He will be fondly remembered by
Family, Friends and Employees of Promac
(Funeral will be on 6th December 2022
For Details Call - 99455 35054)
promac
ENGINEERING INDUSTRIES LIMITED

ರಾಜಕಾಲುವೆಯಲ್ಲಿ ಮೃತದೇಹ ಪತ್ತೆ • ನೇಪಾಳದ ಐವರ ಬಂಧನ

ಕೆಲಸದ ಸ್ಥಳದಲ್ಲಿ ದಬ್ಬಾಳಿಕೆ ಮರ್ಮಾಂಗಕ್ಕೆ ಹೊಡೆದು ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಧನಸಿಂಗ್ ಧಾಮೆ (23) ಎಂಬುವವರನ್ನು ಕತ್ತು ಹಿಸುಕಿ ಮರ್ಮಾಂಗಕ್ಕೆ ಹೊಡೆದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಐವರನ್ನು ಪೊಲೀಸರು ಬಂಧಿಸಿದ್ದಾರೆ.

ಧನಸಿಂಗ್

‘ದಿನೇಶ್ ಸಿಂಗ್ ಧಾಮೆ, ಶೇರ್ ಸಿಂಗ್, ದೀಪಕ್ ಧಾಮೆ ಹಾಗೂ ನರೇಂದ್ರ ಧಾಮೆ ಬಂಧಿತರು. ಆರೋಪಿಗಳಲ್ಲಿ ಒಬ್ಬ ಬಾಲಕ. ಹೆಸರು ಬಹಿರಂಗಪಡಿಸಲಾಗದು. ಇವರೆಲ್ಲರೂ ಸೇರಿಕೊಂಡು ನ. 30ರಂದು ರಾತ್ರಿ ಧನಸಿಂಗ್ ಅವರನ್ನು ಕೊಲೆ ಮಾಡಿದ್ದರು’ ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ ಗುಳೇದ ತಿಳಿಸಿದರು.

‘ನೇಪಾಳದ ಧನಸಿಂಗ್, ನಾಲ್ಕು ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಬಾಬುಸಪಾಳ್ಯದ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ಸ್ವಚ್ಛತೆ ಕೆಲಸಕ್ಕೆ ಸೇರಿದ್ದರು. ಆರೋಪಿಗಳು ಸಹ ನೇಪಾಳದವರು. ಧನಸಿಂಗ್ ಜೊತೆಯಲ್ಲೇ ಆರೋಪಿಗಳೂ ಸ್ವಚ್ಛತೆ ಕೆಲಸ ಮಾಡುತ್ತಿದ್ದರು’ ಎಂದು ಹೇಳಿದರು.

ಹಿರಿಯರೆಂದು ದಬ್ಬಾಳಿಕೆ: ‘ಮದ್ಯ ವ್ಯಸನಿ ಆಗಿದ್ದ ಧನಸಿಂಗ್, ನಿತ್ಯವೂ ಸಹೋದ್ಯೋಗಿಗಳ ಜೊತೆ ಗಲಾಟೆ ಮಾಡುತ್ತಿದ್ದರು. ವಯಸ್ಸಿನಲ್ಲಿ ಹಿರಿಯರಾಗಿದ್ದ ಧನಸಿಂಗ್, ಕಿರಿಯರಾದ ಸಹೋದ್ಯೋಗಿಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದರು. ಕಿರುಕುಳ ಸಹ ಕೊಡುತ್ತಿದ್ದರು’ ಎಂದು ಡಿಸಿಪಿ ತಿಳಿಸಿದರು.

‘ಧನಸಿಂಗ್ ಹಾಗೂ ಇಬ್ಬರು ಆರೋಪಿಗಳು, ನೇಪಾಳದಲ್ಲಿ ಒಂದೇ ಕಾಲೇಜಿನಲ್ಲಿ ಕಲಿಯುತ್ತಿದ್ದರು. ಅಲ್ಲಿಯೇ ಆರೋಪಿಗಳ ಮೇಲೆ ಧನಸಿಂಗ್ ದಬ್ಬಾಳಿಕೆ ಮಾಡಿ ಪೀಡಿಸುತ್ತಿದ್ದರು. ಕೆಲಸದ ಸ್ಥಳದಲ್ಲೂ ಧನಸಿಂಗ್ ದಬ್ಬಾಳಿಕೆಯಿಂದ ಬೇಸತ್ತಿದ್ದ ಆರೋಪಿಗಳು, ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು’ ಎಂದು ಹೇಳಿದರು.

ರಾಜಕಾಲುವೆಯಲ್ಲಿ ಮೃತದೇಹ

‘ನ. 30ರಂದು ರಾತ್ರಿ ಮೂವರು ಆರೋಪಿಗಳು, ರಾಜಕಾಲುವೆ ಬಳಿ ಹೋಗಿ ಅವಿತುಕೊಂಡಿದ್ದರು. ಕುಡಿದ ಅಮಲಿನಲ್ಲಿ ಪೇಯಿಂಗ್ ಗೆಸ್ಟ್ ಕಟ್ಟಡಕ್ಕೆ ಬಂದಿದ್ದ ಧನಸಿಂಗ್ ಅವರನ್ನು ಮಾತನಾಡಿಸಿದ್ದ ಇನ್ನಿಬ್ಬರು ಆರೋಪಿಗಳು, ಸಿಗರೇಟ್ ಕೊಡಿಸುವುದಾಗಿ ಹೇಳಿ ರಾಜಕಾಲುವೆ ಬಳಿ ಕರೆದೊಯ್ದಿದ್ದರು’ ಎಂದು ಡಿಸಿಪಿ ತಿಳಿಸಿದರು.

‘ಧನಸಿಂಗ್ ರಾಜಕಾಲುವೆ ಬಳಿ ತೆರಳುತ್ತಿದ್ದಂತೆ ಐವರು ದಾಳಿ ಮಾಡಿದ್ದರು. ಅಂಗಿ ಬಿಚ್ಚಿ, ಅದನ್ನೇ ಕುತ್ತಿಗೆಗೆ ಸುತ್ತಿ ಬಿಗಿದಿದ್ದರು. ನಂತರ, ಮರ್ಮಾಂಗಕ್ಕೆ ಹೊಡೆದಿದ್ದರು. ಇದರಿಂದಾಗಿ ಧನಸಿಂಗ್ ಸ್ಥಳದಲ್ಲೇ ಮೃತಪಟ್ಟಿದ್ದರು. ನಂತರ, ಮೃತದೇಹವನ್ನು ರಾಜಕಾಲುವೆಗೆ ಎಸೆದು ಆರೋಪಿಗಳು ಪರಾರಿಯಾಗಿದ್ದರು’ ಎಂದು ಹೇಳಿದರು.

‘ಭಾನುವಾರ ರಾಜಕಾಲುವೆಯಲ್ಲಿ ಮೃತದೇಹ ತೇಲುತ್ತಿದ್ದ ಬಗ್ಗೆ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿದ್ದ ಪೊಲೀಸರು, ಮೃತದೇಹವನ್ನು ಹೊರಗೆ ತೆಗೆದು ಆಸ್ಪತ್ರೆಗೆ ಸಾಗಿಸಿದ್ದರು. ಕೊಲೆ ಪ್ರಕರಣ ದಾಖಲಿಸಿಕೊಂಡು, ರಾಜಕಾಲುವೆ ಅಕ್ಕ-ಪಕ್ಕದಲ್ಲಿ ವಾಸವಿದ್ದ ಜನರನ್ನು ವಿಚಾರಿಸಿದ್ದರು. ಧನಸಿಂಗ್ ಗುರುತು ಪತ್ತೆ ಮಾಡಿ, ತ್ವರಿತ ತನಿಖೆ ಮೂಲಕ ಆರೋಪಿಗಳನ್ನು ಬಂಧಿಸಿದ್ದಾರೆ’ ಎಂದು ಡಿಸಿಪಿ ತಿಳಿಸಿದರು.

ಸಾಹಸ ಪ್ರದರ್ಶನ

ಆರ್ಮಿ ಸರ್ವಿಸ್ ಕೋರ್ (ಎಎಸ್‌ಸಿ) ‘ಟಾರ್ನಡೋಸ್’ ತಂಡದಿಂದ ನೈಸ್ ರಸ್ತೆಯಲ್ಲಿ ಭಾನುವಾರ ವಿಶ್ವ ದಾಖಲೆಗಾಗಿ ನಡೆದ ‘ವ್ಹೀಲಿ’ ಸಾಹಸ ಪ್ರದರ್ಶನದಲ್ಲಿ ಹವಾಲ್ದಾರ್ ಮನೀಶ್ ರಾತಿ ಎಂಬುವವರು ರಾಯಲ್ ಎನ್‌ಫೀಲ್ಡ್‌ನಲ್ಲಿ (350 ಸಿ.ಸಿ) 2.5 ಕಿ.ಮೀ ಅನ್ನು ಕೇವಲ 2 ನಿಮಿಷ 58 ಸೆಕೆಂಡ್‌ನಲ್ಲಿ ಕ್ರಮಿಸಿದರು

ಬಾವಿಯಲ್ಲಿ ಯುವಕನ ಶವ ಪತ್ತೆ

ಉಳ್ಳಾಲ: ಮಂಗಳೂರಿನ ತೊಕ್ಕೊಟ್ಟು ಸಮೀಪದ ಬಾವಿಯಲ್ಲಿ ಬೆಂಗಳೂರಿನ ಯುವಕನ ಶವ ಪತ್ತೆಯಾಗಿದೆ. ಉಳ್ಳಾಲ ಪೊಲೀಸರು ಅಗ್ನಿಶಾಮಕ ದಳದ ಸಹಕಾರದಿಂದ ಮೃತದೇಹ ಮೇಲಕ್ಕೆತ್ತಿದ್ದಾರೆ.

ಮಹಂತೇಶ್

ಹಾಸನ ಜಿಲ್ಲೆಯ ಅರಸೀಕೆರೆ ನಿವಾಸಿಯಾಗಿದ್ದು, ಸದ್ಯ ಬೆಂಗಳೂರಿನಲ್ಲಿ ವಾಸವಾಗಿರುವ ಮಹಂತೇಶ್ ಎ.ಎಸ್. (36) ಮೃತ ಯುವಕ.

ನ.30ರಂದು ಬೆಂಗಳೂರಿನಿಂದ ತೊಕ್ಕೊಟ್ಟಿಗೆ ಬಂದಿದ್ದ ಮಹಂತೇಶ್ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಕಾಪಿಕಾಡಿನ ಲಾಡ್ಜ್‌ನಲ್ಲಿ ತಂಗಿದ್ದರು. ಡಿ.1ರಂದು ಸಂಜೆ ಲಾಡ್ಜ್ ರೂಮಿನ ಅವಧಿ ಮುಗಿದ ಕಾರಣ ಸಿಬ್ಬಂದಿಯು ಕೊಠಡಿ ತಪಾಸಣೆ ನಡೆಸಿದಾಗ ಮಹಂತೇಶ್ ಇರಲಿಲ್ಲ. ಈ ಕುರಿತು ಉಳ್ಳಾಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ಭಾನುವಾರ ಮಧ್ಯಾಹ್ನದ ವೇಳೆಗೆ ಅಂಬಿಕಾ ರೋಡ್ ಹೆದ್ದಾರಿ ಅಂಚಿನಲ್ಲಿರುವ ಅಬ್ದುಲ್ ಸಮದ್ ಎಂಬುವರ ಮನೆಯ ಹಿಂದಿನ ಬಾವಿಯಲ್ಲಿ ಮಹಂತೇಶ್ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಬಾವಿಯೊಳಗೆ ದುರ್ವಾಸನೆ ಬರುತ್ತಿರುವುದನ್ನು ಗಮನಿಸಿ ಬಾವಿ ಪರಿಶೀಲಿಸಿದಾಗ ವ್ಯಕ್ತಿಯ ಶವ ಪತ್ತೆಯಾಗಿದೆ. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಉಳ್ಳಾಲ ಪೊಲೀಸರು ಕೊಳೆತ ಶವವನ್ನು ಮೇಲಕ್ಕೆತ್ತಿ ಪರಿಶೀಲಿಸಿದಾಗ ಮಹಂತೇಶ್ ಶವ ಎಂದು ಗುರುತಿಸಲಾಗಿದೆ.

ಟೆಕಿ ಅಪಹರಿಸಿ ₹ 8 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರ್ ರಾಹುಲ್ ಎಂಬುವರನ್ನು ಅಪಹರಿಸಿ ₹ 8 ಲಕ್ಷ ಹಾಗೂ ಚಿನ್ನಾಭರಣ ಸುಲಿಗೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಹೊರಮಾವು ಪಿಎನ್‌ಟಿ ಬಡಾವಣೆಯ ತರುಣ್ ಗಣೇಶ್ (22), ಗೋವಿಂದಪುರ ಜಾನಕಿರಾಮ ಬಡಾವಣೆಯ ವಿಘ್ನೇಶ್ (23), ಹಳೇ ಬೈಯಪ್ಪನಹಳ್ಳಿಯ ಜೆ. ಚರೀಶ್ (23) ಹಾಗೂ ಸುಬ್ಬಣ್ಣಪಾಳ್ಯದ ಮಣಿಕಂಠ (21) ಬಂಧಿತರು. ಇವರಿಂದ ಕಾರು, ಮೊಬೈಲ್ ಹಾಗೂ ಚಾಕು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹೂಡಿ ನಿವಾಸಿ ರಾಹುಲ್, ನ. 26ರಂದು ಕಾರಿನಲ್ಲಿ ಕಲ್ಯಾಣನಗರಕ್ಕೆ ಹೋಗಿದ್ದರು. ಅಲ್ಲಿಯೇ ಕಾರು ನಿಲುಗಡೆ ಮಾಡಿದ್ದರು. ನಂತರ, ಪಬ್‌ಗೆ ತೆರಳಲು ಆಟೊದಲ್ಲಿ ಬ್ರಿಗೇಡ್ ರಸ್ತೆಗೆ ಹೋಗಿದ್ದರು. ಬ್ರಿಗೇಡ್ ರಸ್ತೆಯಲ್ಲಿ ವ್ಯಕ್ತಿಯೊಬ್ಬರ ಪರಿಚಯವಾಗಿತ್ತು. ಕೆಲ ಯುವತಿಯರ ಫೋಟೊ ತೋರಿಸಿದ್ದ ವ್ಯಕ್ತಿ, ಅವರನ್ನು ಪರಿಚಯ ಮಾಡಿಸುವುದಾಗಿ ಹೇಳಿದ್ದ. ತಮಗೆ ಯಾವ ಯುವತಿಯೂ ಬೇಡವೆಂದು ಹೇಳಿದ್ದ ರಾಹುಲ್, ಅಲ್ಲಿಂದ ಆಟೊದಲ್ಲಿ ಪುನಃ ಕಲ್ಯಾಣ ನಗರದತ್ತ ಹೊರಟಿದ್ದರು.’

‘ಬ್ರಿಗೇಡ್ ರಸ್ತೆಯಿಂದಲೇ ರಾಹುಲ್ ಅವರನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು, ಮಾರ್ಗಮಧ್ಯೆ ಅಡ್ಡಗಟ್ಟಿದ್ದರು. ನಂತರ, ರಾಹುಲ್ ಅವರನ್ನು ಒತ್ತಾಯದಿಂದ ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಕರೆದೊಯ್ದರು’ ಎಂದು ಪೊಲೀಸರು ತಿಳಿಸಿದರು.

‘ಹೊರವರ್ತುಲ ರಸ್ತೆ, ಬೆಳ್ಳಂದೂರು, ಎಲೆಕ್ಟ್ರಾನಿಕ್ ಸಿಟಿ ಹಾಗೂ ಇತರೆಡೆ ಕಾರಿನಲ್ಲಿ ಸುತ್ತಾಡಿದ್ದ ಆರೋಪಿಗಳು, ರಾಹುಲ್ ಮೇಲೆ ಹಲ್ಲೆ ಮಾಡಿದ್ದರು. ಅವರ ಬಳಿಯ ಡೆಬಿಟ್ ಕಾರ್ಡ್‌ಗಳನ್ನು ಪಡೆದು ಪಾಸ್‌ವರ್ಡ್ ತಿಳಿದುಕೊಂಡು ಹಣ ಡ್ರಾ ಮಾಡಿಕೊಂಡಿದ್ದರು. ಸ್ವೈಪಿಂಗ್ ಉಪಕರಣ ಮೂಲಕವೂ ಹಣ ಪಡೆದುಕೊಂಡಿದ್ದರು. ನಂತರ, ಚಿನ್ನದ ಸರವನ್ನು ಕಿತ್ತುಕೊಂಡಿದ್ದರು.’

‘ರಾಹುಲ್ ಅವರ ಸಹೋದರನಿಗೆ ಕರೆ ಮಾಡಿದ್ದ ಆರೋಪಿಗಳು, ಪುನಃ ₹ 2 ಲಕ್ಷ ತಂದುಕೊಡುವಂತೆ ಬೇಡಿಕೆ ಇಟ್ಟಿದ್ದರು. ಆದರೆ, ಸಹೋದರ ಹಣವಿಲ್ಲವೆಂದು ಹೇಳಿದ್ದರು. ಬಳಿಕ, ರಾಹುಲ್ ಅವರನ್ನು ಕಲ್ಯಾಣನಗರಕ್ಕೆ ಬಿಟ್ಟು ಆರೋಪಿಗಳು ಪರಾರಿಯಾಗಿದ್ದರು. ನಂತರವೇ ರಾಹುಲ್ ಠಾಣೆಗೆ ಬಂದು ದೂರು ನೀಡಿದ್ದಾರೆ. ₹ 8 ಲಕ್ಷ ಹಾಗೂ ಚಿನ್ನಾಭರಣ ಸುಲಿಗೆ ಆಗಿರುವುದಾಗಿ ದೂರಿನಲ್ಲಿ ವಿವರಿಸಿದ್ದಾರೆ. ಆರೋಪಿಗಳಿಂದ ನಗದು ಜಪ್ತಿ ಮಾಡಬೇಕಿದೆ’ ಎಂದು ಪೊಲೀಸರು ಹೇಳಿದರು.

ಕಳ್ಳತನ: ಗಂಡ – ಹೆಂಡತಿ ಬಂಧನ

ಬೆಂಗಳೂರು: ನಗರದ ಹಲವೆಡೆ ಕಳ್ಳತನ ಮಾಡುತ್ತಿದ್ದ ಆರೋಪದಡಿ ನಾಗರಾಜು ಅಲಿಯಾಸ್ ಎಸಿ (24) ಹಾಗೂ ಹೆಂಡತಿ ರಮ್ಯಾ (23) ಅವರನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಗರಾಜು

ರಮ್ಯಾ

‘ಬನಶಂಕರಿ 3ನೇ ಹಂತದ ನಿವಾಸಿಗಳಾದ ನಾಗರಾಜು ಹಾಗೂ ರಮ್ಯಾ, ಕಳ್ಳತನದಿಂದ ಜೀವನ ನಿರ್ವಹಣೆ ಮಾಡುತ್ತಿದ್ದರು. ಇವರಿಂದ ₹ 5.25 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ, ಎರಡು ದ್ವಿಚಕ್ರ ವಾಹನ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಇಬ್ಬರೂ ಆರೋಪಿಗಳು ನಗರದಲ್ಲಿ ಸುತ್ತಾಡುತ್ತಿದ್ದರು. ಬೀಗ ಹಾಕಿದ್ದ ಮನೆಗಳನ್ನು ಗುರುತಿಸಿ, ಬಾಗಿಲು ಮೀಟಿ ಒಳನುಗ್ಗಿ ಕಳ್ಳತನ ಮಾಡುತ್ತಿದ್ದರು. ಕೆಲವೆಡೆ, ದ್ವಿಚಕ್ರ ವಾಹನಗಳ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡಿದ್ದರು’ ಎಂದು ತಿಳಿಸಿದರು.

‘ಠಾಣೆ ವ್ಯಾಪ್ತಿಯಲ್ಲಿ ಹೆಚ್ಚಾಗಿದ್ದ ಕಳ್ಳತನ ಪ್ರಕರಣಗಳನ್ನು ಭೇದಿಸಲು ವಿಶೇಷ ತಂಡ ರಚಿಸಲಾಗಿತ್ತು. ತನಿಖೆ ನಡೆಸಿ ಸುಳಿವು ಪತ್ತೆ ಮಾಡಿದ್ದ ತಂಡ, ಆರೋಪಿತ ದಂಪತಿಗಳನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ’ ಎಂದು ಪೊಲೀಸರು ಹೇಳಿದರು.

‘ಜ್ಞಾನಭಾರತಿ, ಮಾದನಾಯಕನಹಳ್ಳಿ, ರಾಜರಾಜೇಶ್ವರಿನಗರ ಹಾಗೂ ಇತರೆ ಠಾಣೆಗಳ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು’ ಎಂದು ತಿಳಿಸಿದರು.

ವಾಹನ ಕಳ್ಳತನ: ಇಬ್ಬರ ಸೆರೆ

ಬೆಂಗಳೂರು: ರಾಜ್ಯದ ಹಲವು ನಗರಗಳಲ್ಲಿ ಸುತ್ತಾಡಿ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಜೆ.ಪಿ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಘು ನಾಯ್ಕ ಹಾಗೂ ದೌಲತ್ ಖಾನ್ ಬಂಧಿತರು. ಇವರಿಂದ ₹ 16 ಲಕ್ಷ ಮೌಲ್ಯದ 24 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಜೆ.ಪಿ.ನಗರ 3ನೇ ಹಂತದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನವೊಂದು ಇತ್ತೀಚೆಗೆ ಕಳ್ಳತನವಾಗಿತ್ತು. ಅದರ ಮಾಲೀಕರು ದೂರು ನೀಡಿದ್ದರು. ತನಿಖೆ ಕೈಗೊಂಡು ಸುಳಿವು ಪತ್ತೆ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

‘ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೊಪ್ಪಳ, ಗದಗ, ರಾಯಚೂರು, ವಿಜಯನಗರ ಸೇರಿದಂತೆ ಹಲವೆಡೆ ಆರೋಪಿಗಳು ಸುತ್ತಾಡಿದ್ದರು. ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದರು. ಕದ್ದ ವಾಹನಗಳ ನೋಂದಣಿ ಫಲಕ ಬದಲಾಯಿಸಿ ಮಾರುತ್ತಿದ್ದರು. ಕೆಲ ವಾಹನಗಳ ಬಿಡಿಭಾಗ ಬಿಚ್ಚಿ ಮಾರಿದ್ದರು. ರಾಯಲ್ ಎನ್‌ಫೀಲ್ಡ್, ಬಜಾಜ್ ಪಲ್ಸರ್, ಬಜಾಜ್ ಅವೆಂಜರ್, ಹೊಂಡಾ ಆಕ್ಟಿವಾ, ಡಿಯೊ ಸೇರಿದಂತೆ ಹಲವು ಬೈಕ್‌ಗಳನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಮೃತದೇಹ ಪತ್ತೆ: ಕೊಲೆ ಶಂಕೆ

ಬೆಂಗಳೂರು: ಕೆ.ಪಿ. ಅಗ್ರಹಾರ 5ನೇ ಅಡ್ಡರಸ್ತೆಯಲ್ಲಿ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾಗಿದ್ದು, ಪರಿಚಯಸ್ಥರು ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

‘ಔಷಧ ಮಳಿಗೆಯೊಂದರ ಎದುರಿನ ಜಾಗದಲ್ಲಿ ವ್ಯಕ್ತಿಯೊಬ್ಬರ ಮೃತದೇಹ ಭಾನುವಾರ ಪತ್ತೆಯಾಗಿದ್ದು, ಅವರ ಹೆಸರು ಗೊತ್ತಾಗಿಲ್ಲ. 30 ವರ್ಷ ವಯಸ್ಸು ಇರಬಹುದೆಂದು ಅಂದಾಜಿಸಲಾಗಿದೆ. ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಕೆ.ಪಿ. ಅಗ್ರಹಾರ ಪೊಲೀಸರು ಹೇಳಿದರು.

‘ಮೃತದೇಹದ ಮೇಲೆ ಕಲ್ಲಿನಿಂದ ಹೊಡೆದ ಗಾಯದ ಗುರುತುಗಳಿವೆ. ಮೂವರು ಮಹಿಳೆಯರು ಹಾಗೂ ಮೂವರು ಪುರುಷರು ಸೇರಿ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿದರು.

ವಿದ್ಯುತ್ ತಗುಲಿದ್ದ ಬಾಲಕ ಸಾವು

ಬೆಂಗಳೂರು: ತಂತಿ ಮೇಲೆ ಕುಳಿತಿದ್ದ ಪಾರಿವಾಳಕ್ಕೆ ರಾಡ್‌ನಿಂದ ಹೊಡೆಯುವ ವೇಳೆ ವಿದ್ಯುತ್ ಪ್ರವಹಿಸಿ ತೀವ್ರ ಗಾಯಗೊಂಡಿದ್ದ ಬಾಲಕ ಸುಪ್ರೀತ್ (11) ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.

‘ನಂದಿನಿ ಲೇಔಟ್ ಬಳಿಯ ವಿಜಯಾನಂದನಗರದಲ್ಲಿ ಡಿ. 1ರಂದು ಮಧ್ಯಾಹ್ನ ಸಂಭವಿಸಿದ್ದ ಅವಘಡದಲ್ಲಿ ಗಾಯಗೊಂಡಿದ್ದ ಸುಪ್ರೀತ್ ಹಾಗೂ ಸ್ನೇಹಿತ ಚಂದನ್ (11) ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ಗಾಯಗೊಂಡಿದ್ದ ಸುಪ್ರೀತ್ ಅಸುನೀಗಿದ್ದಾರೆ. ಚಂದನ್‌ಗೆ ಚಿಕಿತ್ಸೆ ಮುಂದುವರಿದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ತುರಹಳ್ಳಿ ಅರಣ್ಯ ವಲಯದಲ್ಲಿ ಸಿಗದ ಚಿರತೆ ಸುಳಿವು

‘ನಸುಕು, ರಾತ್ರಿ ಒಬ್ಬಂಟಿ ಓಡಾಟ ಬೇಡ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ರಾಜಧಾನಿಯ ಹೊರವಲಯದಲ್ಲಿ ಭೀತಿ ತಂದಿರುವ ಚಿರತೆಯ ಸೆರೆಗೆ ಮೂರು ದಿನಗಳಿಂದ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದರೂ ಅದರ ಸುಳಿವು ದೊರೆತಿಲ್ಲ. ರಾತ್ರಿ ಹಾಗೂ ನಸುಕಿನಲ್ಲಿ ಒಂಟಿಯಾಗಿ ಓಡಾಡದಂತೆ ಜನರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚರಿಸಿದ್ದಾರೆ.

ಪ್ರತ್ಯೇಕ ತಂಡವು ಅರಣ್ಯ ಪ್ರದೇಶ, ಕಾಡಂಚಿನಲ್ಲಿ ಚಿರತೆಯ ಜಾಡು ಹಿಡಿದು ಕಾರ್ಯಾಚರಣೆ ನಡೆಸುತ್ತಿರುವ ಸಿಬ್ಬಂದಿಗೆ ಭಾನುವಾರವೂ ಫಲ ಸಿಗಲಿಲ್ಲ.

> **ತುರಹಳ್ಳಿ ಅರಣ್ಯ ವ್ಯಾಪ್ತಿಯಲ್ಲಿ ನೂರಾರು ಬೀದಿ ನಾಯಿಗಳಿವೆ. ಚಿರತೆಗಳು ಮನುಷ್ಯರನ್ನು ಬಾಧಿಸುವ ಸಾಧ್ಯತೆ ಕಡಿಮೆ ಗೋವಿಂದರಾಜು**
> ಅರಣ್ಯ ವಲಯಾಧಿಕಾರಿ, ಕಗ್ಗಲೀಪುರ

ಗುರುವಾರದಿಂದ ಹತ್ತಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ, ಚಿರತೆ ಪತ್ತೆಗೆ ತುರಹಳ್ಳಿ ಅರಣ್ಯ ವಲಯದಲ್ಲಿ ನಿರಂತರವಾಗಿ ಹುಡುಕಾಟ ನಡೆಸಿದ್ದಾರೆ. ಶುಕ್ರವಾರ ರಾತ್ರಿ ಗಾಣಕಲ್ ಗ್ರಾಮದ ಬಳಿ ಚಿರತೆ ಸಂಚರಿಸುತ್ತಿರುವ ಬಗ್ಗೆ ಗ್ರಾಮಸ್ಥರು ಮಾಹಿತಿ ನೀಡಿದ್ದರು. ಅದನ್ನೇ ಆಧರಿಸಿ ತಂಡವು ಕಾರ್ಯಾಚರಣೆಗೆ ಇಳಿದಿದೆ.

ಅರಣ್ಯ ಸಿಬ್ಬಂದಿಗೆ ಚಿರತೆಯ ಚಲನವಲನದ ಬಗ್ಗೆ ಈವರೆಗೆ ಯಾವುದೇ ಮಾಹಿತಿ ಕಂಡುಬಂದಿಲ್ಲ. ಹೀಗಾಗಿ ಸ್ಥಳೀಯ ಜನರಲ್ಲಿ ಆತಂಕ ಇಮ್ಮಡಿಗೊಂಡಿದೆ. ಕೋಡಿಪಾಳ್ಯ, ಹೆಮ್ಮಿಗೆಪುರ, ಗಾಣಕಲ್ ಹಾಗೂ ಬನಶಂಕರಿ 6ನೇ ಹಂತ ಸೇರಿ ತುರಹಳ್ಳಿ ಅರಣ್ಯ ವಲಯ ಸುತ್ತಮುತ್ತಲಿನ ಗ್ರಾಮಸ್ಥರು ಭಯದಲ್ಲೇ ದಿನ ದೂಡುತ್ತಿದ್ದಾರೆ.

ಚಿರತೆ ಸೆರೆ ಹಿಡಿಯುವವರೆಗೆ ಜಾಗೃತವಾಗಿ ಇರುವಂತೆ ಸೂಚನೆ ಅರಣ್ಯ ಇಲಾಖೆ ಕೋರಿದೆ. ರಾತ್ರಿ ಹಾಗೂ ನಸುಕಿನಲ್ಲಿ ಒಂಟಿಯಾಗಿ ತಿರುಗಾಡದಂತೆ ಮನವಿ ಮಾಡಿದೆ. ಸಾಕುಪ್ರಾಣಿಗಳಾದ ನಾಯಿ, ಹಸು, ಎಮ್ಮೆಗಳನ್ನು ಅರಣ್ಯ ವಲಯದತ್ತ ಕರೆದೊಯ್ಯದಂತೆ ಗ್ರಾಮಸ್ಥರಿಗೆ ಎಚ್ಚರಿಕೆ ನೀಡಿದೆ.

ನಿವೃತ್ತ ಐಎಎಸ್ ಅಧಿಕಾರಿ ಟಿ. ತಿಮ್ಮೇಗೌಡ ಬೇಸರ

‘ಕನ್ನಡವೆಂದರೆ ಅಧಿಕಾರಿಗಳಿಗೆ ಅಸಡ್ಡೆ’

ಪ್ರಜಾವಾಣಿ ವಾರ್ತೆ

ಕನ್ನಡ ನುಡಿ ಸಮ್ಮೇಳನದಲ್ಲಿ ‘ಮಂಗಲದ ಮಾಣಿಕ್ಯ’ ಕೃತಿಯನ್ನು ಪತ್ರಕರ್ತ ಪಿ. ರಾಮಯ್ಯ ಬಿಡುಗಡೆ ಮಾಡಿದರು. ಮಂಡ್ಯದ ಜಿಲ್ಲಾ ಯುವ ಬರಹಗಾರ ಬಳಗದ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಗೊ.ರು. ಚನ್ನಬಸಪ್ಪ, ಟಿ. ತಿಮ್ಮೇಗೌಡ ಹಾಗೂ ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಸುರೇಶ ಜೀವನ್ಮುಖಿ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ರಾಜ್ಯ ಸರ್ಕಾರವು ಕನ್ನಡ ಆಡಳಿತ ಭಾಷೆಯೆಂದು ಆದೇಶ ಹೊರಡಿಸಿದ್ದರೂ ಈಗಲೂ ವಿಧಾನಸೌಧ ಹಾಗೂ ವಿಕಾಸಸೌಧದಿಂದ ಹೊರಡುವ ಆದೇಶಗಳು ಆಂಗ್ಲ ಭಾಷೆಯಲ್ಲಿ ಇರುತ್ತವೆ. ಉನ್ನತ ಅಧಿಕಾರಿಗಳು ಕನ್ನಡದ ಬಗ್ಗೆ ತೋರುತ್ತಿರುವ ಅಸಡ್ಡೆ ಇದನ್ನು ತೋರಿಸುತ್ತದೆ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಟಿ. ತಿಮ್ಮೇಗೌಡ ಬೇಸರ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ಕನ್ನಡ ನುಡಿ ಸಮ್ಮೇಳನ’ದ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ‘ಬ್ರಿಟಿಷರ ಆಡಳಿತದಿಂದ ಮುಕ್ತಿಗೊಂಡು ಏಳು ದಶಕ ಕಳೆದರೂ ಸರ್ಕಾರಿ ಕಚೇರಿ ಹಾಗೂ ನ್ಯಾಯಾಲಯಗಳಲ್ಲಿ ಆಂಗ್ಲ ಭಾಷೆಯ ಮೂಲಕ ವ್ಯವಹರಿಸುತ್ತಿರುವುದು ಶೋಚನೀಯ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ರಾಜ್ಯ ಸರ್ಕಾರದ ಆದೇಶ ಇನ್ನೂ ಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. ಬೆಂಗಳೂರಿನಲ್ಲಿ ನೆಲೆಸಿರುವ ಹೊರರಾಜ್ಯದವರು ಕನ್ನಡದಲ್ಲಿ ಮಾತನಾಡಲು, ಕಲಿಯಲು ಆಸಕ್ತಿ ತೋರುತ್ತಿಲ್ಲ’ ಎಂದು ಹೇಳಿದರು.

‘ರಾಜ್ಯದ ಎಲ್ಲ ಶಾಲೆಗಳಲ್ಲಿ ಕನ್ನಡ ಬೋಧನೆಯನ್ನು ಕಡ್ಡಾಯ ಮಾಡಬೇಕು. ಶಾಲಾ– ಕಾಲೇಜುಗಳಲ್ಲಿ ಕನ್ನಡ ಮಾತನಾಡುವಂತೆ ಪ್ರೋತ್ಸಾಹಿಸಬೇಕು. ವಿವಿಧ ಸರ್ಕಾರಿ ಹುದ್ದೆಗಳಿಗೆ ನಡೆಸುವ ಪರೀಕ್ಷೆಗಳನ್ನು ಕನ್ನಡದಲ್ಲಿಯೂ ನಡೆಸಬೇಕು. ಶಿಕ್ಷಣ ಮತ್ತು ವೃತ್ತಿಗೆ ಸಂಬಂಧಿಸಿದಂತೆ ಇಂಗ್ಲಿಷಿನ ಅವಶ್ಯಕತೆ ಇದ್ದಾಗ ಮಾತ್ರ ಬಳಸಬೇಕು. ಸಾಮಾಜಿಕ ಮಾಧ್ಯಮಗಳಲ್ಲಿಯೂ ಕನ್ನಡ ಬಳಸಬೇಕು’ ಎಂದರು.

ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ‘ಎರಡು ಸಾವಿರ ವರ್ಷಗಳ ಪರಂಪರೆ ಇರುವ ಕನ್ನಡ ಭಾಷೆಯ ಮೇಲೆ 400 ವರ್ಷಗಳ ಹಿಂದೆ ಬಂದ ಆಂಗ್ಲ ಭಾಷೆ ಸವಾರಿ ಮಾಡುತ್ತಿದೆ. ಈಗ ಹಿಂದಿ ಹೇರಿಕೆ ಪ್ರಾರಂಭವಾಗಿದೆ. ಇದು ಆಘಾತಕಾರಿ ಬೆಳವಣಿಗೆ. ಕನ್ನಡದೊಂದಿಗೆ ಬೇರೆ ಭಾಷೆಗಳನ್ನು ಮಿಶ್ರಗೊಳಿಸಿ, ಭಾಷೆಯನ್ನು ವಿಕೃತಗೊಳಿಸಬಾರದು. ಭಾಷೆ ಉಳಿಸಿ, ಬೆಳೆಸುವುದು ಸರ್ಕಾರದ ಕರ್ತವ್ಯ ಆಗಬೇಕು. ಮಾತೃಭಾಷೆಯ ವಿಚಾರವಾಗಿ ಕನ್ನಡಿಗರು ಧ್ವನಿಯೆತ್ತಬೇಕು’ ಎಂದು ಹೇಳಿದರು.

ರಾಜಕಾರಣಿಗಳಿಂದ ಸಂವಿಧಾನಕ್ಕೆ ಗಾಯ: ಗೊ.ರು. ಚನ್ನಬಸಪ್ಪ

‘ಸ್ವಾತಂತ್ರ್ಯದ ಬಳಿಕ ಗಡಿಗಳನ್ನು ಪುನರ್ ವಿಂಗಡಣೆ ಮಾಡಲಾಗಿದೆ. ಆದರೂ ಮಹಾರಾಷ್ಟ್ರದವರು ಗಲಾಟೆ ಮಾಡುತ್ತಿದ್ದಾರೆ. ಇಂತಹ ಬಿಕ್ಕಟ್ಟನ್ನು ಕೇಂದ್ರ ಸರ್ಕಾರ ಪರಿಹರಿಸಬೇಕು. ಆದರೆ, ಕೇಂದ್ರ ಸರ್ಕಾರ ಉದಾಸೀನತೆ ತೋರುತ್ತಿದೆ. ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ಪ್ರಕರಣ ಈಗ ಸುಪ್ರೀಂ ಕೋರ್ಟ್‌ನಲ್ಲಿದೆ. ಆದರೂ ಮರಾಠ ಮುಖಂಡರು ಕನ್ನಡಿಗರನ್ನು ಕೆರಳಿಸುವ ಹೇಳಿಕೆ ನೀಡುತ್ತಿದ್ದಾರೆ’ ಎಂದು ಗೊ.ರು. ಚನ್ನಬಸಪ್ಪ ಬೇಸರ ವ್ಯಕ್ತಪಡಿಸಿದರು.

‘ಸ್ವತಂತ್ರ ಭಾರತ ಅಂಗೀಕರಿಸಿದ ಸಂವಿಧಾನವು ವಿವಾದ ಹುಟ್ಟುಹಾಕಲು ಹೇಳಿಲ್ಲ. ನಮ್ಮ ಸಂವಿಧಾನವನ್ನು ರಾಜಕೀಯ ವ್ಯಕ್ತಿಗಳು ಗಾಯಗೊಳಿಸುತ್ತಿದ್ದಾರೆ. ಜಾಗತಿಕವಾಗಿ ಭಾರತ ಪ್ರತಿಷ್ಠಿತ ಸ್ಥಾನ ಪಡೆಯುತ್ತಿರುವ ವೇಳೆ, ಗಡಿ ಬಗ್ಗೆ ಗಲಾಟೆ ಮಾಡುತ್ತಿರುವುದು ವಿಷಾದನೀಯ’ ಎಂದರು.

ಉಡುಪಿ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅಭಿಮತ

‘ಬದುಕಿಗೆ ಭಗವದ್ಗೀತೆ ಸ್ಫೂರ್ತಿ’

ಪ್ರಜಾವಾಣಿ ವಾರ್ತೆ

ಗೀತಾ ಜಯಂತಿ ಮಹೋತ್ಸವಕ್ಕೆ ಆಗಮಿಸಿದ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರನ್ನು ಮೇಲುಕೋಟೆಯ ಯದುಗಿರಿ ಯರಿರಾಜ ಮಠದ ಯದುಗಿರಿ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಬರಮಾಡಿಕೊಂಡರು. ಕೂಡಲಿಗಿ ಶಂಕರಮಠದ ವಿದ್ಯಾವಿಶ್ವೇಶ್ವರ ಭಾರತೀ ಸ್ವಾಮೀಜಿ, ಪಾವಗಡ ಪ್ರಕಾಶರಾವ್ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಭಗವದ್ಗೀತೆ ಎಲ್ಲರಿಗೂ ಸ್ಫೂರ್ತಿ ಹಾಗೂ ಪ್ರೇರಣದಾಯಕ’ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರತಿಪಾದಿಸಿದರು.

ನಗರದಲ್ಲಿ ಭಾನುವಾರ ತಿರುಮಲ ತಿರುಪತಿ ದೇವಸ್ಥಾನ, ಹಿಂದೂ ಧರ್ಮ ಪ್ರಚಾರಕ ಪರಿಷತ್ ಹಾಗೂ ಮಲ್ಲೇಶ್ವರ ಬ್ರಾಹ್ಮಣ ಸಭಾ ಟ್ರಸ್ಟ್ ಆಯೋಜಿಸಿದ್ದ ಗೀತಾಜಯಂತಿ ಮಹೋತ್ಸವದಲ್ಲಿ ಅವರು ಮಾತನಾಡಿದರು.

‘ಎಲ್ಲರೂ ಹಕ್ಕಿಗಾಗಿ ಹೋರಾಡುತ್ತಾರೆ. ಅದರ ನಡುವೆ ಕರ್ತವ್ಯವನ್ನೇ ಮರೆಯುತ್ತಿದ್ದಾರೆ. ಪ್ರತಿಯೊಬ್ಬರು ತಮ್ಮ ಕರ್ತವ್ಯ ಪಾಲಿಸಿದರೆ ಉತ್ತಮ ಸಮಾಜ ಸಾಧ್ಯ. ಸಂಪಾದನೆಯ ಸ್ವಲ್ಪ ಭಾಗವನ್ನು ಸಮಾಜಕ್ಕೂ ವಿನಿಯೋಗಿಸಬೇಕು’ ಎಂದು ಸ್ವಾಮೀಜಿ ಸಲಹೆ ನೀಡಿದರು.

‘ದಾರಿದ್ರ್ಯ ನಿವಾರಣೆಗೆ ಹೋರಾಟ ನಡೆಸದ ಬಡವ ಹಾಗೂ ಸಮಾಜ ಏಳಿಗೆಗೆ ದಾನ ನೀಡದ ಶ್ರೀಮಂತ ಇಬ್ಬರೂ ಹೊರೆ ಎಂದು ವೇದವ್ಯಾಸರು ಹಿಂದೆಯೇ ಹೇಳಿದ್ದರು. ನಿಷ್ಕಾಮ ಮನಸ್ಸಿನಿಂದ ಕರ್ತವ್ಯ ನಿಭಾಯಿಸಬೇಕು. ಸಾಮಾಜಿಕ ಹಾಗೂ ಧಾರ್ಮಿಕ ಚಿಂತನೆ ಬೇರೆ, ಬೇರೆ ಅಲ್ಲ. ಧರ್ಮ ಪಾಲನೆ ಜತೆಗೆ ಕರ್ತವ್ಯ ನಿರ್ವಹಿಸಬೇಕು. ಮೋಸ, ವಂಚನೆಗೆ ಜಾಗ ಇರಬಾರದು’ ಎಂದು ಸ್ವಾಮೀಜಿ ಎಚ್ಚರಿಸಿದರು.

‘ನಕಾರಾತ್ಮಕ ಧೋರಣೆ ಬಿಟ್ಟು ಸಕಾರಾತ್ಮಕ ಚಿಂತನೆ ಅಳವಡಿಸಿಕೊಳ್ಳಬೇಕು’ ಎಂದು ಮೇಲುಕೋಟೆಯ ಯದುಗಿರಿ ಯರಿರಾಜ ಮಠದ ಯದುಗಿರಿ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಪ್ರತಿಪಾದಿಸಿದರು.

ಚಾಮರಾಜಪೇಟೆ ಕೂಡಲಿಗಿ ಶಂಕರಮಠದ ವಿದ್ಯಾವಿಶ್ವೇಶ್ವರ ಭಾರತೀ ಸ್ವಾಮೀಜಿ ಅವರು, ‘ಕೆಲಸದಲ್ಲೂ ಕೌಶಲ ಇರಬೇಕು. ಪ್ರತಿಫಲಾಪೇಕ್ಷೆಗಾಗಿ ಕೆಲಸ ಮಾಡಬಾರದು. ಮನಸ್ಸು ನಿಗ್ರಹಿಸಿಕೊಳ್ಳುವ ಗುಣ ಬರಬೇಕು’ ಎಂದು ಕರೆ ನೀಡಿದರು.

ಮಾಜಿ ಎಡಿಜಿಪಿ ಭಾಸ್ಕರ್‌ರಾವ್, ‘ಭಗವದ್ಗೀತೆಯಲ್ಲಿ ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ. ಭಗವದ್ಗೀತೆಯನ್ನು ಟೀಕಿಸುವವರಿಗೆ ಅದರ ಅರ್ಥ ಮತ್ತು ಮಹತ್ವ ತಿಳಿದಿಲ್ಲ’ ಎಂದರು.

ಮಲ್ಲೇಶ್ವರ ಬ್ರಾಹ್ಮಣ ಸಭಾ ಟ್ರಸ್ಟ್ ಅಧ್ಯಕ್ಷ ಡಾ.ಪಾವಗಡ ಪ್ರಕಾಶರಾವ್, ಶ್ರೀರಾಮಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್, ರಾಧಾಕೃಷ್ಣ ಅಡಿಗ, ಗೀತಾ ಹಾಜರಿದ್ದರು.

ಸರ್ಕಾರಿ ಆಸ್ಪತ್ರೆಯಲ್ಲಿ ಹಸುಳೆ ಸಾವು

ಚಿಂತಾಮಣಿ: ನಗರದ ಮಹಿಳಾ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆಯಲ್ಲಿ ನಾಲ್ಕು ದಿನದ ಹಿಂದೆ ಜನಿಸಿದ ಹೆಣ್ಣು ಮಗು ಶನಿವಾರ ಮೃತಪಟ್ಟಿದ್ದು, ವೈದ್ಯರ ನಿರ್ಲಕ್ಷ್ಯದಿಂದ ಮಗು ಮೃತಪಟ್ಟಿದೆ ಎಂದು ಪೋಷಕರು ಆರೋಪಿಸಿದ್ದಾರೆ.

ತಾಲ್ಲೂಕಿನ ಕಾನಗಮಾಕಲಹಳ್ಳಿ ಗ್ರಾಮದ ಮಂಜುಳಾ ರಮೇಶ್ ಡಿ.1 ರಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಮಗುವಿಗೆ ಜ್ವರವಿದ್ದ ಕಾರಣ ಶನಿವಾರ ವೈದ್ಯರ ಸೂಚನೆಯಂತೆ ಮಂಜುಳಾ ಎರಡು ಹನಿ ಔಷಧ ನೀಡಿದ್ದಾರೆ. ನಂತರ ಮಗುವಿನ ಚಲನವಲನದಲ್ಲಿ ವ್ಯತ್ಯಾಸ ಕಂಡು ಬಂದಿದೆ. ಕೂಡಲೇ ಸಾರ್ವಜನಿಕ ಆಸ್ಪತ್ರೆಯ ಮಕ್ಕಳ ತಜ್ಞರ ಬಳಿ ತೋರಿಸಿದ್ದಾರೆ. ಮಗು ಮೃತಪಟ್ಟಿದೆ ಎಂದು ಅಲ್ಲಿಯ ವೈದ್ಯರು ತಿಳಿಸಿದ್ದಾರೆ.

ಮಗುವಿನ ಸಾವಿಗೆ ಮಹಿಳಾ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯ ಕಾರಣ. ಗಂಭೀರ ಸ್ಥಿತಿಯಲ್ಲಿದ್ದ ಮಗುವನ್ನು ಪರೀಕ್ಷಿಸಲು ಆಸ್ಪತ್ರೆಯಲ್ಲಿ ಯಾವೊಬ್ಬ ವೈದ್ಯ ಹಾಗೂ ಶುಶ್ರೂಷಕಿ ಇರಲಿಲ್ಲ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಸಂತೋಷ್ ಕ್ರಮದ ಭರವಸೆ ನೀಡಿದ್ದಾರೆ.

‘ವೈದ್ಯರಿಂದ ಲೋಪವಾಗಿಲ್ಲ. ಉಸಿರುಗಟ್ಟಿ ಮಗು ಮೃತಪಟ್ಟಿದೆ ಎಂದು ಆಡಳಿತ ವೈದ್ಯಾಧಿಕಾರಿ ಹೇಳಿದ್ದಾರೆ. ವೈದ್ಯರು ಮತ್ತು ಶುಶ್ರೂಷಕಿಯರ ನಿರ್ಲಕ್ಷ್ಯವಿಲ್ಲ’ ಎಂದು ಜಿಲ್ಲಾಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ್ ಕುಮಾರ್ ತಿಳಿಸಿದ್ದಾರೆ.

ವೆಂಗಯ್ಯನಕೆರೆ ಉಳಿವಿಗೆ ಮೌನ ಪ್ರತಿಭಟನೆ

ಕೆ.ಆರ್‌.ಪುರದ ನಾಗರಿಕರು ಭಿತ್ತಿಪತ್ರ ಹಿಡಿದು ಕೆರೆಯ ಮುಖ್ಯದ್ವಾರದ ಮುಂದೆ ಮೌನ ಪ್ರತಿಭಟನೆ ನಡೆಸಿದರು

ಕೆ.ಆರ್.ಪುರ: ವೆಂಗಯ್ಯನಕೆರೆಯನ್ನು ಭೂಮಾಫಿಯಾದವರಿಂದ ರಕ್ಷಿಸಿ ಕೆರೆ ಅಭಿವೃದ್ಧಿಗೊಳಿಸುವಂತೆ ಆಗ್ರಹಿಸಿ ಕೆ.ಆರ್.ಪುರದ ನಾಗರಿಕರು ಭಿತ್ತಿಪತ್ರ ಹಿಡಿದು ಕೆರೆಯ ಮುಖ್ಯದ್ವಾರದ ಎದುರು ಪ್ರತಿಭಟಿಸಿದರು.

ಕೆರೆ ಅಭಿವೃದ್ಧಿಗೆ ಹಲವು ಬಾರಿ ಅಧಿಕಾರಿಗಳಿಗೆ ಅಹವಾಲು ಸಲ್ಲಿಸಿದ್ದರೂ ಇದರ ಕಿಂಚಿತ್ತೂ ಕಾಳಜಿ ವಹಿಸುತ್ತಿಲ್ಲ. ಕೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಐದು ಎಕರೆಗೂ ಹೆಚ್ಚು ಒತ್ತುವರಿ ಆಗಿದೆ. ಸಣ್ಣತಿಮ್ಮನಹಳ್ಳಿ ಮತ್ತು ಕೆ.ಆರ್. ಪುರ ಸರ್ವೆ ನಂಬರ್ ವ್ಯಾಪ್ತಿಯಲ್ಲಿ 64 ಎಕರೆ ಇದ್ದ ಕೆರೆ 58 ಎಕರೆ ಮಾತ್ರ ಉಳಿದಿದೆ. ಇದರ ಬಗ್ಗೆ ತಹಶೀಲ್ದಾರ್ ಮತ್ತು ಬಿಬಿಎಂಪಿ ಅಧಿಕಾರಿಗಳನ್ನು ವಿಚಾರಿಸಿದರೆ ಮಾಹಿತಿ ನೀಡದೇ ಕೆರೆ ಉಳಿಸಲು ಕಾರ್ಯ ಮಾಡುತ್ತಿಲ್ಲ ಎಂದು ಕೆರೆ ಹೋರಾಟಗಾರ ರಘೋತ್ತಮ್ ಬಾಲಾಜಿ ದೂರಿದರು.

ಗ್ರಾಮಸ್ಥರಾದ ಆರ್.ಕೋದಂಡ ರಾಮ, ಎಲೆ ಶ್ರೀನಿವಾಸ್ ಇದ್ದರು.

ಸಂಧ್ಯಾ ಎಸ್. ಪೈ ಅವರ ‘ಸ್ಮೃತಿ ಗಂಧವತೀ’ ಕೃತಿ ಬಿಡುಗಡೆ

‘ಶೈಲಿ, ನಿರೂಪಣೆಯಲ್ಲಿ ಬುದ್ಧನ ಪ್ರಭಾವ’

ಪ್ರಜಾವಾಣಿ ವಾರ್ತೆ

ಪುಸ್ತಕ: ‘ಸ್ಮೃತಿ ಗಂಧವತೀ’
ಲೇಖಕರು: ಸಂಧ್ಯಾ ಎಸ್. ಪೈ
ಪುಟಗಳು: 224
ಪ್ರಕಾಶನ: ಅಂಕಿತ ಪುಸ್ತಕ ಪ್ರಕಾಶನ
ಬೆಲೆ: ₹ 250

‘ಸ್ಮೃತಿ ಗಂಧವತೀ’ ಬಿಡುಗಡೆ ಕಾರ್ಯಕ್ರಮದಲ್ಲಿ ಕೃತಿಯ ಲೇಖಕಿ ಸಂಧ್ಯಾ ಎಸ್. ಪೈ, ಎಚ್.ಎಸ್. ವೆಂಕಟೇಶಮೂರ್ತಿ, ಲೇಖಕಿ ನಂ. ನಾಗಲಕ್ಷ್ಮಿ ಇದ್ದಾರೆ

ಬೆಂಗಳೂರು: ‘ಸಂಧ್ಯಾ ಎಸ್. ಪೈ ಅವರ ಬರವಣಿಗೆಯಲ್ಲಿ ಕಾವ್ಯಾತ್ಮಕತೆ ಇದೆ. ಅವರ ‘ಸ್ಮೃತಿ ಗಂಧವತೀ’ ಸುಂದರವಾದ ಪ್ರಬಂಧ ಪರ್ಯಟನಾ ಕೃತಿ. ಇಡೀ ಪುಸ್ತಕಕ್ಕೆ ನೆನಪುಗಳೇ ಆಧಾರ’ ಎಂದು ಎಚ್.ಎಸ್. ವೆಂಕಟೇಶಮೂರ್ತಿ ಹೇಳಿದರು.

‘ಬುಕ್ ಬ್ರಹ್ಮ’ ಜಾಲತಾಣದಲ್ಲಿ ಅಂಕಿತ ಪುಸ್ತಕ ಪ್ರಕಾಶನ ಭಾನುವಾರ ಹಮ್ಮಿಕೊಂಡಿದ್ದ ತರಂಗ ವಾರಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ ಸಂಧ್ಯಾ ಎಸ್. ಪೈ ಅವರ ‘ಸ್ಮೃತಿ ಗಂಧವತೀ’ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಲೇಖಕರ ದೃಷ್ಟಿಯಲ್ಲಿ ಸ್ಮೃತಿ ಅನ್ನುವ ಮಾತಿಗೆ ಕೇವಲ ನೆನಪು ಎಂಬ ಅರ್ಥ ಬರುವುದಿಲ್ಲ. ಇನ್ನೂ ಗಂಭೀರ ಅರ್ಥವಿದೆ’ ಎಂದು ಅಭಿಪ್ರಾಯಪಟ್ಟರು.

‘ಅವರ ಬರವಣಿಗೆ ಶೈಲಿ ಮತ್ತು ನಿರೂಪಣೆಯನ್ನು ನೋಡಿದಾಗ ಬುದ್ಧನ ಪ್ರಭಾವ ಗಾಢವಾಗಿ ಆಗಿದೆ ಎಂಬುವುದು ಭಾಸವಾಗುತ್ತದೆ. ಪುನರ್‌ಜನ್ಮಗಳು ಕೂಡ ಸ್ಮೃತಿಯ ನಿರಂತರತೆಯ ಫಲ ಎಂದು ಕೃತಿ ಹೇಳುತ್ತದೆ. ಬುದ್ಧ ಕೂಡ ಇದನ್ನೇ ಹೇಳಿದ್ದಾನೆ’ ಎಂದರು.

‘ಸುಮಾರು 50 ವರ್ಷಗಳ ಸ್ಮೃತಿಪಟಲವನ್ನು ಅವರು ಕೃತಿಯಲ್ಲಿ ಬಿಡಿಸಿಟ್ಟಿದ್ದಾರೆ. ಅವರ ಬರವಣಿಗೆ ಕೇವಲ ನಿರೂಪಣೆಯಲ್ಲ, ಕಥನವಲ್ಲ. ಭಾಷೆಯ ಸೂಕ್ಷ್ಮತೆಯನ್ನು ಕೂಡ ಅವರು ತಮ್ಮ ಬರವಣಿಗೆಯಲ್ಲಿ ದಾಖಲಿಸುತ್ತಾರೆ. ಜಗತ್ತನ್ನು ಭಿನ್ನವಾಗಿ ತೋರಿಸುವ ಶೈಲಿಯನ್ನು ಅವರ ಬರವಣಿಗೆಯಲ್ಲಿ ಕಾಣಬಹುದು’ ಎಂದು ಬಣ್ಣಿಸಿದರು.

ಕೃತಿ ಕುರಿತು ಮಾತನಾಡಿದ ಲೇಖಕಿ ನಂ. ನಾಗಲಕ್ಷ್ಮಿ, ‘ವೈವಿಧ್ಯಮವಾಗಿ ಬರೆಯುವ ಕಲೆ ಸಂಧ್ಯಾ ಎಸ್. ಪೈ ಅವರಿಗೆ ಸಿದ್ಧಿಸಿದೆ. ನೆನಪುಗಳ ಭಂಡಾರವನ್ನು ಓದುಗರಿಗೆ ಈ ಕೃತಿಯಲ್ಲಿ ಅವರು ತೆರೆದಿಟ್ಟಿದ್ದಾರೆ’ ಎಂದರು.

‘ವಾತ್ಸಲ್ಯದ ಸಹೋದರಿಯಾಗಿ, ಮಮತೆಯ ತಾಯಿಯಾಗಿ, ಪ್ರೀತಿಯ ಗೆಳತಿಯಾಗಿ, ಸಾಂಸಾರಿಕ ಜೀವನ ಪರಿಚಯಿಸುವ ವೇದಾಂತಿಯಾಗಿ ಲೇಖಕರು ಇಲ್ಲಿ ಕಾಣುತ್ತಾರೆ. ಅನೇಕ ರೀತಿಯ ಜಿಜ್ಞಾಸೆಗಳಿಗೆ, ಪ್ರಶ್ನೆಗಳಿಗೆ ಉತ್ತರ ಹುಡುಕಲು ಕೂಡ ಪ್ರಯತ್ನಿಸುತ್ತಾರೆ. ಆತ್ಮವಿಶ್ವಾಸ ತುಂಬಿದ ಹೆಣ್ಣು ಮಗಳಾಗಿ ಅಂತಃಕರಣ ತುಂಬುತ್ತಾರೆ’ ಎಂದು ಹೇಳಿದರು.

ಅಂಕಿತ ಪುಸ್ತಕ ಪ್ರಕಾಶನದ ಪ್ರಕಾಶ್ ಕಂಬತ್ತಹಳ್ಳಿ ಇದ್ದರು.

‘ಅಜ್ಜಿ ಹೇಳಿದ ಕಥೆಗಳೇ ಪ್ರೇರಣೆ’

‘ಅನಿವಾರ್ಯ ಸನ್ನಿವೇಶ ನನ್ನನ್ನು ತರಂಗ ವಾರಪತ್ರಿಕೆಯ ಚುಕ್ಕಾಣಿ ಹಿಡಿಯುವಂತೆ ಮಾಡಿತು. ಆಗ ಏನಾದರೂ ಬರೆಯಬೇಕು ಎನಿಸಿತು. ಇಂಗ್ಲಿಷ್ ಭಾಷೆಯಲ್ಲಿ ಹಿಡಿತವಿದ್ದ ನನಗೆ ಕನ್ನಡದಲ್ಲಿ ಮೊದಮೊದಲು ಬರೆಯುವಾಗ ಸ್ವಲ್ಪ ಮಟ್ಟಿನ ಭಯವಿತ್ತು’ ಎಂದು ಸಂಧ್ಯಾ ಎಸ್. ಪೈ ಹೇಳಿದರು.

‘ಈ ಕೃತಿ ತುಷಾರದಲ್ಲಿ ಧಾರಾವಾಹಿ ಆಗಿ ಬಂದಿತ್ತು. ನನ್ನ ಜೀವನದ ನೈಜ ಕಥಾವಸ್ತುಗಳನ್ನು ತೆಗೆದುಕೊಂಡು ನಾನು ಬರೆಯಲು ಆರಂಭಿಸಿದೆ. ಜೀವಮಾನದ ಕಾಲಘಟ್ಟದಲ್ಲಿ ನಡೆದಿರುವ ವಿಚಾರಗಳು ಅನೇಕರ ಜೀವನದಲ್ಲಿ ಕೂಡ ನಡೆಯುತ್ತದೆ. ಸಂಸಾರಿಕ ಜೀವನ ಎಂದ ಮೇಲೆ ಘಟನೆಗಳು ನಡೆದೇ ನಡೆಯುತ್ತವೆ. ಆದರೆ, ಅದನ್ನು ದಾಖಲಿಸಿದವರು ಇಲ್ಲ. ಆ ಕೆಲಸವನ್ನು ನಾನು ಮಾಡಿದ್ದೇನೆ’ ಎಂದರು.

ಭಗವದ್ಗೀತೆ ಕಡ್ಡಾಯವಾಗಿ ಕಲಿಸಬೇಕು: ಕಾಗೇರಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಭಗವದ್ಗೀತೆ ಶಾಲಾ ಪಠ್ಯವಾಗುವುದರ ಜತೆಗೆ ಅದನ್ನು ಕಡ್ಡಾಯವಾಗಿ ಕಲಿಸುವ ಸನ್ನಿವೇಶವು ನಿರ್ಮಾಣವಾಗಬೇಕು' ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯಪಟ್ಟರು.

ಇಲ್ಲಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಆವರಣದಲ್ಲಿ ನಡೆದ ಶ್ರೀಭಗವದ್ಗೀತಾ ಅಭಿಯಾನದ ರಾಜ್ಯಮಟ್ಟದ ಮಹಾಸಮರ್ಪಣಾ ಸಮಾರಂಭದಲ್ಲಿ ಅವರು, 'ರಾಜ್ಯ ಸರ್ಕಾರ ಭಗವದ್ಗೀತೆಯನ್ನು ಪಠ್ಯದಲ್ಲಿ ಅಳವಡಿಸಲು ಮುಂದಡಿ ಇಡುತ್ತಿರುವುದು ಶ್ಲಾಘನೀಯ' ಎಂದರು.

ಕರ್ಮ ಫಲ, ಪುನರ್ಜನ್ಮ, ದಂತಹ ಗೀತೆಯ ಸಂದೇಶಗಳು ಭಾರತೀಯ ಧರ್ಮ, ಸಂಸ್ಕೃತಿಯ ಮೂಲಾಧಾರ. ನೆಲ, ಜಲ, ಗಡಿ, ಭಾಷೆ ವಿಚಾರಗಳಲ್ಲಿ ಜನರ ಮನಸ್ಸು ಒಡೆದಿದೆ. ಏಕತೆ ಮೂಡಿಸಲು ಗೀತೆಯ ಮಾರ್ಗದರ್ಶನ ಬೇಕಾಗಿದೆ' ಎಂದು ಕಾಗೇರಿ ಅವರು ವಿಶ್ಲೇಷಿಸಿದರು.

ಶ್ರೀರಂಗಪಟ್ಟಣದಲ್ಲಿ ಹನುಮ ಮಾಲಾಧಾರಿಗಳ ಸಮಾವೇಶ • ಹಿಂದೂ ಜಾಗರಣಾ ವೇದಿಕೆಯ ಉಲ್ಲಾಸ್ ಹೇಳಿಕೆ

'ಮಸೀದಿ ಸ್ಥಳದಲ್ಲೇ ಮಂದಿರ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ): 'ಪಟ್ಟಣದಲ್ಲಿದ್ದ ಹನುಮಾನ್ ದೇಗುಲವನ್ನು ಒಡೆದು ಟಿಪ್ಪು ಸುಲ್ತಾನ್ ಮಸೀದಿ ಕಟ್ಟಿದ್ದು, ಅದೇ ಸ್ಥಳದಲ್ಲಿಯೇ ಮತ್ತೆ ಹನುಮ ಮಂದಿರ ಕಟ್ಟುತ್ತೇವೆ' ಎಂದು ಹಿಂದೂ ಜಾಗರಣಾ ವೇದಿಕೆಯ ದಕ್ಷಿಣ ಪ್ರಾಂತ ಕಾರ್ಯಕಾರಣಿ ಸದಸ್ಯ ಕೆ.ಟಿ. ಉಲ್ಲಾಸ್ ಹೇಳಿದರು.

ಪಟ್ಟಣದ ಶ್ರೀರಂಗನಾಥ ಸ್ವಾಮಿ ದೇವಾಲಯದ ಮೈದಾನದಲ್ಲಿ ಭಾನುವಾರ ಸಂಕೀರ್ತನಾ ಯಾತ್ರೆ ಅಂಗವಾಗಿ ನಡೆದ ಹನುಮ ಮಾಲಾಧಾರಿಗಳ ಸಮಾವೇಶದಲ್ಲಿ ಮಾತನಾಡಿದರು.

'ಹನುಮ ಮಂದಿರ ನಿರ್ಮಿಸಲು ನ್ಯಾಯಾಲಯದಲ್ಲಿ ಹೋರಾಟ ನಡೆಸಿದ್ದೇವೆ. ಅಯೋಧ್ಯೆಯಂತೆ ಇಲ್ಲಿಯೂ ನಮ್ಮ ಹೋರಾಟಕ್ಕೆ ಜಯ ಸಿಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಮೇಲುಕೋಟೆ, ಕೊಡಗು ಮೊದಲಾದ ಕಡೆ ಹಿಂದೂಗಳಿಗೆ ಟಿಪ್ಪು ಕಿರುಕುಳ ನೀಡಿದ್ದಾನೆ. ಒಡೆಯರ್ ಕುಟುಂಬವನ್ನು ಹಿಂಸೆ ನೀಡಿದ್ದಕ್ಕೆ ದಾಖಲೆಗಳಿವೆ. ಕನ್ನಡ ಕಡೆಗಣಿಸಿ ಪರ್ಷಿಯನ್ ಭಾಷೆಯನ್ನು ಆಡಳಿತ ಭಾಷೆಯಾಗಿ ಹೇರಿದ್ದು ಸುಳ್ಳಾ' ಎಂದು ಪ್ರಶ್ನಿಸಿದರು.

ಸಂಕೀರ್ತನಾ ಯಾತ್ರೆಯಲ್ಲಿ ಸಹಸ್ರಾರು ಮಂದಿ ಪಾಲ್ಗೊಂಡಿದ್ದರು. ಸಮೀಪದ ಗಂಜಾಂ ಬಳಿ, ಕಾವೇರಿ ನದಿ ತೀರದಲ್ಲಿರುವ ಆಂಜನೇಯಸ್ವಾಮಿ ದೇವಾಲಯದಿಂದ ಯಾತ್ರೆ ಆರಂಭವಾಯಿತು. ಜ್ಯೋತಿಷಿ ಭಾನುಪ್ರಕಾಶ್ ಶರ್ಮಾ ಯಾತ್ರೆಗೆ ಚಾಲನೆ ನೀಡಿದರು.

ಶ್ರೀರಂಗನಾಥಸ್ವಾಮಿ ದೇವಾಲಯ ತಲುಪುವ ಮೊದಲು ಮಾಲಾಧಾರಿಗಳು ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಮಾನವ ಸರಪಳಿ ರಚಿಸಿದರು. ಟಿಪ್ಪು ಮಸೀದಿ (ಮಸ್ಜಿದ್-ಎ-ಆಲಾ) ಬಳಿ ಯಾತ್ರೆ ಬಂದಾಗ ಘೋಷಣೆ ಕೂಗಿದರು.

ದೊ.ಕೇಶವಮೂರ್ತಿ, ಲೋಕೇಶ ರಾಜೇ ಅರಸ್, ಮಾರ್ಕಂಡೇಯ, ಎಸ್. ಕೆ.ಚಂದನ್ ಇದ್ದರು.

ಮಸೀದಿಯತ್ತ ನುಗ್ಗಲು ಯತ್ನ ಐವರು ವಶಕ್ಕೆ

ಸಂಕೀರ್ತನಾ ಯಾತ್ರೆ ಟಿಪ್ಪು ಮಸೀದಿ ಬಳಿ ಬಂದಾಗ ಕೆಲವರು ಮಸೀದಿಯತ್ತ ನುಗ್ಗಲು ಯತ್ನಿಸಿದರು. ಇದರಿಂದ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಬ್ಯಾರಿಕೇಡ್ ಹತ್ತಿ ಮಸೀದಿಯತ್ತ ನುಗ್ಗಲು ಪ್ರಯತ್ನ ಮಾಡಿದ ಐವರು ಮಾಲಾಧಾರಿಗಳನ್ನು ಪೊಲೀಸರು ವಶಕ್ಕೆ ಪಡೆದರು. ಅವರನ್ನು ಸ್ಥಳದಲ್ಲೇ ಎರಡು ತಾಸಿಗೂ ಹೆಚ್ಚು ಕಾಲ ಕೂರಿಸಿಕೊಂಡಿದ್ದರು. ಯಾತ್ರೆ ಮುಗಿದು ಬಹುತೇಕ ಹನುಮ ಮಾಲಾಧಾರಿಗಳು ಪಟ್ಟಣದಿಂದ ಹೊರಗೆ ಹೋದ ಬಳಿಕ ಅವರನ್ನು ಆಂಬುಲೆನ್ಸ್‌ನಲ್ಲಿ ಕಳುಹಿಸಿದರು.

'ವಶದಲ್ಲಿದ್ದ ಹನುಮ ಮಾಲಾಧಾರಿಗಳು ಮದ್ಯ ಸೇವಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಹಸಿರು ಬಾವುಟ ಕಿತ್ತು ಕೇಸರಿ ಬಾವುಟ ಹಾಕಿದ ಹನುಮ ಭಕ್ತರು

ಶ್ರೀರಂಗಪಟ್ಟಣ (ಮಂಡ್ಯ): ಪಟ್ಟಣದಲ್ಲಿ ಭಾನುವಾರ ನಡೆದ ಹನುಮ ಭಕ್ತರ ಸಂಕೀರ್ತನಾ ಯಾತ್ರೆ ವೇಳೆ ಮುಸ್ಲಿಮರೊಬ್ಬರ ಮನೆಯ ಮೇಲೆ ಹಾಕಿದ್ದ ಹಸಿರು ಬಾವುಟವನ್ನು ಕಿತ್ತು ಕೇಸರಿ ಬಾವುಟ ಹಾರಿಸಿದರು.

ಗಂಜಾಂನ ಗೋರಿ ಸರ್ಕಲ್ ಬಳಿಯ ಸೈಯದ್ ರಹಮಾನ್ ಅವರ ಮನೆ ಬಳಿ ಹನುಮ ಮಾಲೆ ಧರಿಸಿದ್ದ 12ರಿಂದ 15 ವರ್ಷದ ಹುಡುಗರು ಕೃತ್ಯ ಎಸಗಿದ್ದಾರೆ ಎಂದು ಪುರಸಭೆ ಮಾಜಿ ಸದಸ್ಯ ಎಜಾಸ್ ಪಾಷ ತಿಳಿಸಿದ್ದಾರೆ.

'ಈ ಬಗ್ಗೆ ದೂರು ನೀಡಲಿದ್ದೇವೆ' ಎಂದರು.

ಶ್ರೀರಂಗಪಟ್ಟಣದಲ್ಲಿ ಭಾನುವಾರ ಹಿಂದೂ ಜಾಗರಣಾ ವೇದಿಕೆ ಹಮ್ಮಿಕೊಂಡಿದ್ದ ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆಯಲ್ಲಿ ಭಾಗವಹಿಸಿದ್ದ ಭಕ್ತರು ಹೆದ್ದಾರಿಯಲ್ಲಿ ಮಾನವ ಸರಪಳಿ ರಚಿಸಿದರು

ಅಂಜನಾದ್ರಿ: ಇಂದು ಹನುಮಮಾಲಾ ವಿಸರ್ಜನೆ

ಅಂಜನಾದ್ರಿ (ಕೊಪ್ಪಳ): ಗಂಗಾವತಿ ತಾಲ್ಲೂಕಿನ ಅಂಜನಾದ್ರಿ ಬೆಟ್ಟದಲ್ಲಿ ಸೋಮವಾರ ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ ನಡೆಯಲಿದೆ. ಬೆಟ್ಟದ ಸುತ್ತಮುತ್ತಲಿನ ವಾತಾವರಣ ಸಂಪೂರ್ಣ ಕೇಸರಿಮಯವಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳು, ಹೊರರಾಜ್ಯಗಳಿಂದ ಭಕ್ತರು ಭಾನುವಾರವೇ ಬಂದಿದ್ದಾರೆ. ಒಂದೂವರೆ ಲಕ್ಷ ಹನುಮ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ. ಸೋಮವಾರ ಬೆಳಿಗ್ಗೆ ಸಂಕೀರ್ತನಾ ಯಾತ್ರೆ ನಡೆಯಲಿದ್ದು, 20 ಸಾವಿರ ಜನ ಭಾಗವಹಿಸುವ ಅಂದಾಜಿದೆ.

ಭಕ್ತರಿಗೆ ಜಿಲ್ಲಾಡಳಿತ ಉಪಾಹಾರ, ಊಟದ ವ್ಯವಸ್ಥೆ ಮಾಡಿದೆ. ಗಂಗಾವತಿ, ಕೊಪ್ಪಳ, ಹೊಸಪೇಟೆ, ಬಳ್ಳಾರಿ ಕಡೆಯಿಂದ ಬರುವವರಿಗೆ ಊಟ, ನೀರಿನ ಸೌಲಭ್ಯ ಕಲ್ಪಿಸಲಾಗಿದೆ.'ಜಿಲ್ಲಾಡಳಿತ ಪೂರ್ಣ ಸನ್ನದ್ಧವಾಗಿದೆ' ಎಂದು ನೋಡಲ್ ಅಧಿಕಾರಿ ಬಸವಣ್ಣೆಪ್ಪ ಕಲಶೆಟ್ಟಿ ತಿಳಿಸಿದ್ದಾರೆ.

ಸಿಎಫ್‌ಐ ಸೇರುವಂತೆ ಗೋಡೆ ಬರಹ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಶಿರಾಳಕೊಪ್ಪ: ನಿಷೇಧಿತ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ) ಸಂಘಟನೆ ಸೇರುವಂತೆ ಕೋರಿದ ಗೋಡೆಬರಹ ಪಟ್ಟಣದಲ್ಲಿ ಕಾಣಿಸಿಕೊಂಡಿದ್ದು, ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ.

9ಕ್ಕೂ ಹೆಚ್ಚು ಕಡೆ ನೀಲಿ ಮತ್ತು ಕೆಂಪು ಬಣ್ಣದಲ್ಲಿ ಬರೆದು, ಅದಕ್ಕೆ ಚುಕ್ಕೆ ಗುರುತು ಇರಿಸಲಾಗಿದೆ. ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ)ದ ಅಂಗ ಸಂಸ್ಥೆಯಾಗಿರುವ ಸಿಎಫ್‌ಐ ಪರ ಜನನಿಬಿಡ ಪ್ರದೇಶಗಳಲ್ಲಿ ಇಂಗ್ಲಿಷ್‌ನಲ್ಲಿ ಈ ಬರಹ ಕಾಣಿಸಿಕೊಂಡಿದೆ.

ಕೇಂದ್ರ ಸರ್ಕಾರ 5 ವರ್ಷ ಕಾಲ ಪಿಎಫ್‌ಐ, ಸಿಎಫ್‌ಐ ಸಂಘಟನೆಗಳನ್ನು ನಿಷೇಧಿಸಿದೆ. ಕಿಡಿಗೇಡಿಗಳ ವಿರುದ್ಧ ಪ್ರಕರಣ ದಾಖಲಿಸಿದೆ. ಗೋಡೆಬರಹ ಅಳಿಸುವ ಕೆಲಸ ನಡೆಸಿದ್ದು, ಬರೆದವರ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕೃತಿ ಶಿಬಿರದಲ್ಲಿ ಶಾರಿಕ್ ಭಾಗಿ?

ಮಡಿಕೇರಿ: ಮಂಗಳೂರಿನ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಮೊಹಮ್ಮದ್ ಶಾರಿಕ್ ಕೊಡಗಿನ ಹೋಂಸ್ಟೇಯಲ್ಲಿ ನಡೆದಿದ್ದ ನೇಚರ್ ಕ್ಯಾಂಪ್‌ನಲ್ಲಿ ಪಾಲ್ಗೊಂಡಿದ್ದ ಶಂಕೆ ಇದ್ದು, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಜಿಲ್ಲೆಯಲ್ಲಿ ತನಿಖೆ ಕೈಗೊಂಡಿದೆ.

'ಹುದಿಕೇರಿ ಸಮೀಪದ ಹೋಂಸ್ಟೇಯಲ್ಲಿ ಹೈದರಾಬಾದ್ ಮೂಲದ ಕಂಪನಿಯೊಂದು ಕಾಡಿನಲ್ಲಿ ಬದುಕುಳಿಯುವುದು, ಬಿದಿರಿನಿಂದ ವಸ್ತುಗಳ ತಯಾರಿಕೆ, ಟ್ರೆಕಿಂಗ್, ಕಾಡಿನಲ್ಲಿ ನಡೆದಾಡುವುದು ಕುರಿತು 3 ದಿನಗಳ ತರಬೇತಿ ಶಿಬಿರವನ್ನು ಮೇ ತಿಂಗಳಿನಲ್ಲಿ ನಡೆಸಿತ್ತು. ಇದರಲ್ಲಿ ಭಾಗವಹಿಸಲು ಶಾರಿಕ್ ವಿಚಾರಣೆ ನಡೆಸಿದ್ದ ಮಾಹಿತಿ ಆಧರಿಸಿ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ.

'ಮತ್ತಷ್ಟು ವಿಚಾರಣೆಗೆ ಸೋಮವಾರ (ಡಿ.5) ಮಂಗಳೂರಿಗೆ ಬರುವಂತೆ ಹೋಂ ಸ್ಟೇ ಮಾಲೀಕರಿಗೆ ಸೂಚಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಮೀಸಲಾತಿ ಸಿಗುವವರೆಗೆ ಹೋರಾಟ ನಿಲ್ಲದು'

ಲಕ್ಷ್ಮೇಶ್ವರದಲ್ಲಿ ಜನಜಾಗೃತಿ ಸಮಾವೇಶ • ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಮತ್ತು ಕೇಂದ್ರದ ಒಬಿಸಿ ಸೌಲಭ್ಯ ಸಿಗುವವರೆಗೆ ಹೋರಾಟ ನಿಲ್ಲದು. ಬೆಳಗಾವಿ ಅಧಿವೇಶನದ ಒಳಗಾಗಿ ಸರ್ಕಾರ ನಿರ್ಧಾರ ಪ್ರಕಟಿಸಲೇಬೇಕು' ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಒತ್ತಾಯಿಸಿದರು.

ಪಟ್ಟಣದಲ್ಲಿ ತಾಲ್ಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ ಭಾನುವಾರ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಜನಜಾಗೃತಿ ಸಮಾವೇಶ ಮತ್ತು ವೀರರಾಣಿ ಕಿತ್ತೂರು ಚನ್ನಮ್ಮಾಜಿ 199ನೇ ವಿಜಯೋತ್ಸವ, 244ನೇ ಜಯಂತ್ಯುತ್ಸವದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

'ಮೀಸಲಾತಿ ಪಡೆಯುವುದು ನಮ್ಮೆಲ್ಲರ ಹಕ್ಕು. ಪ್ರಾಣ ಬಿಟ್ಟೇವು, ಮೀಸಲಾತಿ ಬಿಡೆವು. ಮೀಸಲಾತಿ ಸೌಲಭ್ಯವಿಲ್ಲದೆ ಪಂಚಮಸಾಲಿ ಸಮಾಜದ ಮಕ್ಕಳು ಉನ್ನತ ಹುದ್ದೆಗಳಿಂದ ವಂಚಿತರಾಗುತ್ತಿದ್ದಾರೆ. ಈ ವಿಷಯದಲ್ಲಿ ಯಾವುದೇ ರೀತಿಯ ಹೊಂದಾಣಿಕೆ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಸಚಿವ ಮುರಗೇಶ ನಿರಾಣಿ ಮಾತನಾಡಿ, 'ಮುಖ್ಯಮಂತ್ರಿ ಬೊಮ್ಮಾಯಿ ಅವರು ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವುದರಲ್ಲಿ ಯಾವುದೇ ಸಂಶಯ ಇಲ್ಲ. ಸಮಾಜ ಬಾಂಧವರು ಅಪನಂಬಿಕೆ ಇಟ್ಟುಕೊಳ್ಳಬಾರದು' ಎಂದು ಕೋರಿದರು

ಸಚಿವರಾದ ಸಿ.ಸಿ.ಪಾಟೀಲ, ಶಂಕರ್ ಪಾಟೀಲ ಮುನೇನಕೊಪ್ಪ, ಸಂಸದ ಸಂಗಣ್ಣ ಕರಡಿ ಸಮಾವೇಶಕ್ಕೆ ಗೈರಾಗಿದ್ದರು.

ಗದಗ ಜಿಲ್ಲೆ ಲಕ್ಷ್ಮೇಶ್ವರದಲ್ಲಿ ಭಾನುವಾರ ಪಂಚಮಸಾಲಿ ಸಮಾಜದ ಜಿಲ್ಲಾ ಮಟ್ಟದ ಸಮಾವೇಶವನ್ನು ಸಚಿವ ಮುರಗೇಶ ನಿರಾಣಿ ಉದ್ಘಾಟಿಸಿದರು

ಸ್ವಾರ್ಥದ ಹೋರಾಟ- ನಟ ಚೇತನ್

ಚಾಮರಾಜನಗರ: 'ಹಿಂದುಳಿದ ವರ್ಗ 2ಎ ಮೀಸಲಾತಿಗಾಗಿ ಪಂಚಮಸಾಲಿ ಲಿಂಗಾಯತ ಸಮಾಜ ನಡೆಸುತ್ತಿರುವ ಹೋರಾಟ ನ್ಯಾಯಯುತವಲ್ಲ. ಅದು ಸ್ವಾರ್ಥದ ಹೋರಾಟವಾಗಿದೆ' ಎಂದು ನಟ ಚೇತನ್ ಭಾನುವಾರ ಟೀಕಿಸಿದರು.

ಭಾರತೀಯ ಕ್ರಿಕೆಟ್‌ನಲ್ಲಿ ಶೇ 70ರಷ್ಟು ಮೇಲ್ಜಾತಿಯವರೇ ಇದ್ದಾರೆ. ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದಲ್ಲಿ 2016ರಿಂದ 6 ಮಂದಿ ಕರಿಯರಿಗೆ ಮೀಸಲಾತಿ ನೀಡುತ್ತಿದೆ. ಹಾಗೇ ಭಾರತದಲ್ಲೂ ನೀಡಬೇಕು

ಚೇತನ್, ನಟ

ಬಹುಜನ ವಾಲಂಟಿಯರ್ ಫೋರ್ಸ್ (ಬಿವಿಎಫ್) ಹಮ್ಮಿಕೊಂಡಿದ್ದ 'ಮೀಸಲಾತಿ ಪ್ರಾತಿನಿಧ್ಯವೋ- ಆರ್ಥಿಕ ಸಬಲೀಕರಣವೋ' ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಒಕ್ಕಲಿಗರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

'ಪಂಚಮಸಾಲಿ ಸಮಾಜದವರು ಈಗಿರುವುದಕ್ಕಿಂತ ಇನ್ನೂ ಹಿಂದುಳಿದ ವರ್ಗಕ್ಕೆ ಸೇರಿಸಿ ಎನ್ನುವುದು ಎಷ್ಟು ಸರಿ? ಶೇ 4ರಿಂದ ಶೇ 12ಕ್ಕೆ ಮೀಸಲಾತಿ ಹೆಚ್ಚಿಸಬೇಕು ಎಂಬ ಒಕ್ಕಲಿಗರ ಹೋರಾಟ ಸಮಂಜಸವಾಗಿದೆ. ಜನಸಂಖ್ಯೆ ಆಧರಿಸಿ ಮೀಸಲಾತಿ ಕೇಳಿದರೆ ತಪ್ಪಲ್ಲ' ಎಂದರು.

ಬಿಜೆಪಿಗೆ ಮತ ಹಾಕುವವರು ಮೂರ್ಖರು: ಧವಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಿ, ಕೃಷಿ ವೆಚ್ಚಗಳನ್ನು ಮನ್ನಾ ಮಾಡದ ಬಿಜೆಪಿಗೆ ಮುಂದಿನ ಚುನಾವಣೆಯಲ್ಲಿ ಮತ ಹಾಕುವವರು ಮೂರ್ಖರು' ಎಂದು ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರೀಯ ಘಟಕದ ಅಧ್ಯಕ್ಷ ಡಾ.ಅಶೋಕ ಧವಳೆ ಹೇಳಿದರು.

ಕರ್ನಾಟಕ ಪ್ರಾಂತ ರೈತ ಸಂಘ ಭಾನುವಾರ ಆಯೋಜಿಸಿದ್ದ ತೊಗರಿ ಬೆಳೆಗಾರರ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ರೈತರು, ಕಾರ್ಮಿಕರು, ಬಡವರಿಗೆ ಸರ್ಕಾರವನ್ನು ಮಣಿಸುವ ಶಕ್ತಿ ಇದೆ ಎಂಬುದನ್ನು ತೋರಿಸುವ ಕಾಲ ಸನಿಹವಾಗಿದೆ' ಎಂದು ಹೇಳಿದರು.

'ಚುನಾವಣೆಯಲ್ಲಿ ಬಿಜೆಪಿ ಸೋಲಿಸಿ, ದೆಹಲಿಯಲ್ಲಿ ನಡೆದ ರೈತರ ಆಂದೋಲನಕ್ಕೆ ಸೇಡು ತಿರಿಸಿಕೊಳ್ಳಬೇಕು' ಎಂದರು. ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು 8 ವರ್ಷ ಕಳೆದರೂ ರೈತರ ಬಿಡಿಗಾಸು ಮನ್ನಾ ಮಾಡಿಲ್ಲ. ಇಂತಹ ಸರ್ಕಾರ ಬೇಕೆ' ಎಂದು ಪ್ರಶ್ನಿಸಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ ಅವರು, 'ಗೊಬ್ಬರ, ಕೀಟನಾಶಕ, ಬೀಜಗಳ ಬೆಲೆ ಏರಿಕೆಯಾಗಿದೆ. ಕೃಷಿ ಉತ್ಪನ್ನಗಳ ಬೆಲೆ ಹೆಚ್ಚಿಸದ ಪ್ರಧಾನಿ ಮೋದಿ, ಮುಖ್ಯಮಂತ್ರಿ ಬೊಮ್ಮಾಯಿ ಅವರ ಕೊರಳು ಪಟ್ಟಿ ಹಿಡಿದು ದರ ಹೆಚ್ಚಿಸುವಂತೆ ಕೇಳಬೇಕಿದೆ' ಎಂದರು.

ದಾವಣಗೆರೆ ವಿ.ವಿ ಅಕ್ರಮ ತನಿಖೆಗೆ ಸಮಿತಿ

ನೇಮಕಾತಿ ಅಕ್ರಮ, ಹಣ ದುರ್ಬಳಕೆ ಕುರಿತು ಸಿಂಡಿಕೇಟ್ ಸದಸ್ಯರ ದೂರು

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ನಡೆದಿರುವ ನೇಮಕಾತಿ ಅಕ್ರಮ, ಹಣ ದುರ್ಬಳಕೆ ಕುರಿತ ದೂರಿನ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಉನ್ನತ ಶಿಕ್ಷಣ ಇಲಾಖೆ ಉಪ ಕಾರ್ಯದರ್ಶಿ ಸ್ನೇಹಲ್ ಸುಧಾಕರ ಲೋಖಂಡೆ ಅಧ್ಯಕ್ಷತೆಯಲ್ಲಿ ತನಿಖಾ ಸಮಿತಿ ರಚಿಸಿದೆ.

ಮೈಸೂರು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಡಾ. ಸಂಗೀತಾ ಗಜಾನನ ಭಟ್ ತನಿಖಾ ಸಮಿತಿ ಸದಸ್ಯರನ್ನಾಗಿ ನೇಮಿಸಲಾಗಿದೆ. ಸಮಿತಿಯು 20 ದಿನಗಳಲ್ಲಿ ವರದಿ ನೀಡಬೇಕು ಎಂದು ಇಲಾಖೆಯ ಅಧೀನ ಕಾರ್ಯದರ್ಶಿ ಶೀತಲ್ ಎಂ.ಹಿರೇಮಠ ಆದೇಶಿಸಿದ್ದಾರೆ.

'ಉನ್ನತ ಶಿಕ್ಷಣ ಹಾಗೂ ಹಣಕಾಸು ಇಲಾಖೆಯ ಅನುಮತಿ ಪಡೆಯದೇ ಇಬ್ಬರು ಗುತ್ತಿಗೆ ನೌಕರರನ್ನು ಕಾಯಂಗೊಳಿಸಲಾಗಿದೆ. ಸರ್ಕಾರದ ಗಮನಕ್ಕೆ ತಾರದೇ 10 ಬೋಧಕೇತರ ಸಿಬ್ಬಂದಿ ನೇಮಕಾತಿಗೆ ಸೆಪ್ಟೆಂಬರ್ 19ರಂದು ಹೊಸದಾಗಿ ಅಧಿಸೂಚನೆ ಹೊರಡಿಸಲಾಗಿದೆ. 2016, 2017, 2018ರಲ್ಲಿ ಈ ಹುದ್ದೆಗಳಿಗೆ ಪರೀಕ್ಷೆ ನಡೆಸಿ, ಮೆರಿಟ್ ಲೀಸ್ಟ್ ಸಿದ್ಧಪಡಿಸಿದ್ದರೂ ಪ್ರಕಟಿಸಿರಲಿಲ್ಲ. 11 ಹುದ್ದೆಗಳ ಪೈಕಿ ಈಗಾಗಲೇ ಸಹಾಯಕ ಗ್ರಂಥಪಾಲಕ ಹುದ್ದೆಗೆ ಹಿಂದಿನ ಅಧಿಸೂಚನೆ ಅಡಿ ನೇಮಕಾತಿ ಮಾಡಿಕೊಳ್ಳಲಾಗಿದೆ' ಎಂದು ಸಿಂಡಿಕೇಟ್ ಸದಸ್ಯರಾದ ಡಾ.ಶ್ರೀಧರ್ ಎಸ್. ಹಾಗೂ ಪವನ್ ಜೆ.ಎಂ. ಅವರು ಅಕ್ಟೋಬರ್ 21ರಂದು ಉನ್ನತ ಶಿಕ್ಷಣ ಇಲಾಖೆಗೆ ದೂರು ನೀಡಿದ್ದರು.

'ನೂತನ ಕುಲಪತಿ ಆಯ್ಕೆ ನಿಟ್ಟಿನಲ್ಲಿ ಶೋಧನಾ ಸಮಿತಿಯ ಒಂದು ದಿನದ ಸಭೆಗೆ ಸಿಂಡಿಕೇಟ್ ಗಮನಕ್ಕೆ ತಾರದೇ ₹ 8.6 ಲಕ್ಷ ವ್ಯಯಿಸಿದೆ. 10 ಸೂಟ್‌ಕೇಸ್, ಲೆದರ್ ಬ್ಯಾಗ್ ಹಾಗೂ ಲೇಖನ ಸಾಮಗ್ರಿ ಖರೀದಿಗೆ ₹ 2.91 ಲಕ್ಷ ವ್ಯಯಿಸಿದೆ. ನ್ಯಾಕ್ ಚಟುವಟಿಕೆ ಹಾಗೂ ಘಟಿಕೋತ್ಸವಕ್ಕೆ ನಿಯಮಬಾಹಿರವಾಗಿ ₹ 2 ಕೋಟಿ ವ್ಯಯಿಸಲಾಗಿದೆ. ಈ ಬಗ್ಗೆ ಪರಿಶೀಲಿಸಲು ರಚಿಸಿದ್ದ ಸಿಂಡಿಕೇಟ್ ಉಪ ಸಮಿತಿಯೂ ಹಣ ದುರುಪಯೋಗವಾಗಿದ್ದಾಗಿ ಅಭಿಪ್ರಾಯಪಟ್ಟಿದೆ' ಎಂದು ಸಿಂಡಿಕೇಟ್ ಸದಸ್ಯರು ದೂರಿನಲ್ಲಿ ಉಲ್ಲೇಖಿಸಿದ್ದರು.

'ಸಿಂಡಿಕೇಟ್ ಒಪ್ಪಿಗೆ ಪಡೆದೇ ನೇಮಕಾತಿ'

'ವಿಶ್ವವಿದ್ಯಾಲಯದ ಸಲುವಾಗಿ ಭೂಮಿ ಕಳೆದುಕೊಂಡಿದ್ದ ಇಬ್ಬರು ಗುತ್ತಿಗೆ ನೌಕರರನ್ನು ಸಿಂಡಿಕೇಟ್ ಒಪ್ಪಿಗೆ ಪಡೆದೇ ನನ್ನ ಅವಧಿಯಲ್ಲಿ ಕಾಯಂ ಮಾಡಲಾಗಿದೆ. ನ್ಯಾಕ್ ಚಟುವಟಿಕೆಗೆ ದುಂದುವೆಚ್ಚ ಕುರಿತ ವಿಷಯ ನನ್ನ ಅವಧಿಯಲ್ಲಿ ನಡೆದಿಲ್ಲ. ಸಾಮಾನ್ಯವಾಗಿ ಅಧಿಕಾರಿಗಳು ಕಾನೂನಿನ ಚೌಕಟ್ಟಿನಲ್ಲೇ ಕೆಲಸ ಮಾಡಿರುತ್ತಾರೆ. ತಪ್ಪಾಗಿದ್ದರೆ ತನಿಖೆಯಿಂದ ಸತ್ಯಾಸತ್ಯತೆ ಹೊರಬೀಳಲಿದೆ' ಎಂದು ವಿಶ್ವವಿದ್ಯಾಲಯದ ನಿಕಟಪೂರ್ವ ಕುಲಪತಿಯಾಗಿದ್ದ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಹಾಲಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸಿಂಡಿಕೇಟ್‌ನ ಇಬ್ಬರು ಸದಸ್ಯರು ನೀಡಿದ್ದ ದೂರಿಗೆ ಸಂಬಂಧಿಸಿದಂತೆ ತನಿಖಾ ಸಮಿತಿ ರಚಿಸಿರುವುದು ಗಮನಕ್ಕೆ ಬಂದಿದೆ. ಸಮಿತಿ ಕೇಳುವ ದಾಖಲೆ ಒದಗಿಸಲಾಗುವುದು.

ಪ್ರೊ.ಬಿ.ಡಿ. ಕುಂಬಾರ, ಕುಲಪತಿ, ದಾವಣಗೆರೆ ವಿಶ್ವವಿದ್ಯಾಲಯ

ವೃದ್ಧೆ ಕೊಲೆ: ಕಪಾಟಿನಲ್ಲಿ ಶವ

ಪಾರ್ವತಮ್ಮ

ಆನೇಕಲ್: ಮೂರು ದಿನಗಳಿಂದ ಕಾಣೆಯಾಗಿದ್ದ ತಾಲ್ಲೂಕಿನ ನೆರಳೂರು ಗ್ರಾಮದ ವೃದ್ಧೆ ಪಕ್ಕದ ಮನೆಯ ಕಪಾಟಿನಲ್ಲಿ ಭಾನುವಾರ ಶವವಾಗಿ ಪತ್ತೆಯಾಗಿದ್ದಾರೆ. ತುಮಕೂರು ಜಿಲ್ಲೆಯ ಶಿರಾ ಮೂಲದ ಪಾರ್ವತಮ್ಮ (80) ಕೊಲೆಯಾದವರು.

ಪಾರ್ವತಮ್ಮ ಅವರ ಪುತ್ರ ರಮೇಶ್ ಅವರು ನೆರಳೂರಿನಲ್ಲಿ ವಾಸವಿದ್ದರು. 20 ದಿನದ ಹಿಂದೆ ಮೊಮ್ಮಕ್ಕಳನ್ನು ನೋಡಲು ಮಗನ ಮನೆಗೆ ಬಂದಿದ್ದರು. ಮೂರು ದಿನಗಳ ಹಿಂದೆ ಕಾಣೆಯಾಗಿದ್ದರು. ಈ ಬಗ್ಗೆ ಅವರ ಮಗ ಅತ್ತಿಬೆಲೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಅದೇ ಕಟ್ಟಡದ ಮೂರನೇ ಮಹಡಿಯಲ್ಲಿ ಒಂಟಿಯಾಗಿ ಬಾಡಿಗೆಗಿದ್ದ ಮಹಿಳೆ ಪಾವಲ್ ಖಾನ್ (26) ಆಗಾಗ ಪಾರ್ವತಮ್ಮ ಅವರನ್ನು ಮನೆಗೆ ಕರೆಯುತ್ತಿದ್ದರು. ಪಾರ್ವತಮ್ಮ ಕಾಣೆಯಾದ ನಂತರ ಪಾವಲ್ ಖಾನ್ ಕೂಡ ಹುಡುಕಾಟ ನಡೆಸಿದ್ದು, ಮೂರನೇ ದಿನ ನಾಪತ್ತೆಯಾಗಿದ್ದರು.

ಅನುಮಾನಗೊಂಡ ವೃದ್ಧೆಯ ಕುಟುಂಬದವರು ಮನೆ ಮಾಲೀಕ ಅಂಬರೀಷ್ ಅವರಿಗೆ ವಿಷಯ ತಿಳಿಸಿದರು. ಆರೋಪಿ ಮಹಿಳೆ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಮಾಲೀಕರು ತಮ್ಮಲ್ಲಿದ್ದ ಮತ್ತೊಂದು ಕೀ ಬಳಸಿ ಬಾಗಿಲು ತೆರೆದಾಗ ಕೃತ್ಯ ಗೊತ್ತಾಗಿದೆ.

ಮನೆಯಲ್ಲಿ ವಾಸನೆ ಆವರಿಸಿತ್ತು. ಕಪಾಟು ತೆರೆದಾಗ ಪಾರ್ವತಮ್ಮನವರ ಶವವು ಪತ್ತೆಯಾಗಿದೆ. ಅವರ ಕೈ, ಕಾಲು ಕಟ್ಟಿಹಾಕಿ ಉಸಿರುಗಟ್ಟಿಸಿ ಸಾಯಿಸಿದ ನಂತರ ಶವವನ್ನು ಕಪಾಟಿನಲ್ಲಿಟ್ಟು, ಆಭರಣಗಳೊಂದಿಗೆ ಪಾವಲ್ ಖಾನ್ ಪರಾರಿಯಾಗಿದ್ದಾಳೆ.

ಪಾವಲ್ ಖಾನ್ ಮನೆಯಲ್ಲಿ ದೊರೆತ ಆಧಾರ್ ಕಾರ್ಡ್‌ನಲ್ಲಿ ಬೆಂಗಳೂರಿನ ಹೊಂಗಸಂದ್ರದ ಮನೆ ವಿಳಾಸವಿದೆ. ಒಂದು ವರ್ಷದಿಂದ ಆಕೆ ವಾಸಿಸುತ್ತಿದ್ದಳು. ಏನು ಕೆಲಸ ಮಾಡುತ್ತಿದ್ದಳು ಗೊತ್ತಿಲ್ಲ ಎಂದು ಮನೆಯ ಮಾಲೀಕ ಹೇಳಿದ್ದಾರೆ.

ಶೋಷಣೆ: ಐವರು ಮಕ್ಕಳು ಸೇರಿ 10 ಮಂದಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಹಾಸನ: ಚನ್ನರಾಯಪಟ್ಟಣ ತಾಲ್ಲೂಕಿನ ಹುಳಿವಾಲಕೊಪ್ಪಲು ಗ್ರಾಮದಲ್ಲಿ ಶೋಷಣೆಗೆ ಒಳಗಾಗಿದ್ದ ತಮಿಳುನಾಡಿನ ಕಾರ್ಮಿಕರನ್ನು ಪೊಲೀಸರು ರಕ್ಷಿಸಿದ್ದಾರೆ. ಇವರಲ್ಲಿ ಐವರು ಮಕ್ಕಳಿದ್ದಾರೆ.

ಕಾನೂನು ಸೇವಾ ಪ್ರಾಧಿಕಾರದ ಸೂಚನೆಯಂತೆ ಶನಿವಾರ ಗ್ರಾಮಕ್ಕೆ ತೆರಳಿದ್ದ ಪೊಲೀಸರು, ತಮಿಳುನಾಡಿನ ರಂಗಾಪುರ ಅಂಬೋರ್ ಸಿಟಿ ನಿವಾಸಿಗಳಾದ ವಿಜಯ್ ಸುಬ್ರಮಣ್ಯ (32), ಮಲ್ಲಿಕಾ ಸುಬ್ರಹ್ಮಣ್ಯ (52), ದುರ್ಗಾ ವಿಜಿ (26), ಪ್ರಿಯಾ ಸತೀಶ (20), ಅಮ್ಮು ಕಣ್ಣನ್ (28), ಮಕ್ಕಳಾದ ಮುತ್ತು ಚಲುವೆ (1), ಸತ್ಯ (7), ಅನ್ನಪೂರ್ಣಾ (7), ಸ್ವಪ್ನಾ (10), ನದಿಯ (11) ಅವರನ್ನು ರಕ್ಷಿಸಿದ್ದಾರೆ.

'ಎರಡು ತಿಂಗಳ ಹಿಂದೆ ರಾಮಲಿಂಗಂ, ಪುಷ್ಪಾ ಮತ್ತು ರುಕ್ಮಿಣಿ ನಮ್ಮನ್ನು ಹುಳಿವಾಲಕೊಪ್ಪಲಿಗೆ ಕರೆತಂದಿದ್ದು, ಕಬ್ಬು ಕಟಾವು ಕೆಲಸ ಮಾಡುತ್ತಿದ್ದೇವೆ. ಕೂಲಿ, ಸಂಬಳ ನೀಡಿಲ್ಲ. ಊಟ, ತಿಂಡಿಯನ್ನೂ ಸರಿಯಾಗಿ ನೀಡಿಲ್ಲ' ಎಂದು ಕಾರ್ಮಿಕರು ದೂರಿದ್ದಾರೆ.

'ಆರೋಪಿಗಳಾದ ಪುಷ್ಪಾ, ರುಕ್ಮಿಣಿ ಅವರನ್ನು ವಶಕ್ಕೆ ಪಡೆಯಲಾಗಿದೆ. ರಾಮಲಿಂಗಂ, ಧ್ರುವ ಮತ್ತು ತುರುಬಣ್ಣ ತಲೆಮರೆಸಿಕೊಂಡಿದ್ದಾರೆ. 10 ಜನರನ್ನು ರಕ್ಷಿಸಿದ್ದು, ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ ಎದುರು ಹಾಜರುಪಡಿಸಲಾಗಿದೆ ಎಂದು ಎಸ್ಪಿ ಹರಿರಾಂ ಶಂಕರ್ ತಿಳಿಸಿದ್ದಾರೆ.

'ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಯವರ ಸೂಚನೆಯಂತೆ ನಗರದ ಅಂಬೇಡ್ಕರ್ ವಸತಿನಿಲಯದಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಸಿ ಬಳಿಯುತ್ತೇವೆ: ಕರವೇ ಎಚ್ಚರಿಕೆ

ಬೆಳಗಾವಿ: 'ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ, ಶಂಭುರಾಜ್ ದೇಸಾಯಿ ಡಿ.6ರಂದು ಬೆಳಗಾವಿಗೆ ಬಂದು ಗಡಿ ಕ್ಯಾತೆ ತೆಗೆದರೆ ಕಪ್ಪು ಮಸಿ ಬಳಿಯುತ್ತೇವೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಜಿಲ್ಲಾ ಘಟಕದ ಅಧ್ಯಕ್ಷ ಆರ್.ಅಭಿಲಾಷ ಅವರು ಭಾನುವಾರ ಎಚ್ಚರಿಸಿದ್ದಾರೆ.

ಬಾಲಕಿ ಅಪಹರಿಸಿ ಅತ್ಯಾಚಾರ: ಬಂಧನ

ಬೆಳಗಾವಿ: ಶಾಲೆಗೆ ಹೋಗಿದ್ದ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಆರೋಪಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಗುಜರಾತ್ ಮೂಲದ ಆಕಾಶ ಭರತಕುಮಾರ ದೋಂಡಿಯಾ (19) ಬಂಧಿತ.

14 ವರ್ಷದ, 8ನೇ ತರಗತಿ ವಿದ್ಯಾರ್ಥಿನಿಯೊಂದಿಗೆ ಸಲುಗೆ ಬೆಳೆಸಿದ್ದ ಆರೋಪಿ, ಗುಜರಾತಿಗೆ ಕರೆದೊಯ್ದು ಎರಡು ದಿನ ಅತ್ಯಾಚಾರ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿ ಮರಳಿ ಬೆಳಗಾವಿಗೆ ಬಂದು ತಂದೆಗೆ ಫೋನ್ ಮಾಡಿದ ನಂತರ ವಿಷಯ ಗೊತ್ತಾಗಿದೆ. ಅಹಮದಾಬಾದ್‌ಗೆ ಹೋಗಿದ್ದ ಖಡೇಬಜಾರ್ ಎಸಿಪಿ ಚಂದ್ರಪ್ಪ ನೇತೃತ್ವದ ತಂಡ, ಆರೋಪಿಯನ್ನು ಬಂಧಿಸಿದೆ. ಪೋಕ್ಸೊ ಕಾಯ್ದೆಯಡಿ ಕ್ಯಾಂಪ್ ಪ್ರಕರಣ ದಾಖಲಾಗಿದೆ.

ವೃದ್ಧೆ ಮೇಲೆ ಅತ್ಯಾಚಾರ: ದೂರು

ಹೊನ್ನಾಳಿ: ಸ್ವಗ್ರಾಮದ 30 ವರ್ಷದ ವ್ಯಕ್ತಿಯೊಬ್ಬ ತಮ್ಮ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ತಾಲ್ಲೂಕಿನ ಗ್ರಾಮವೊಂದರ 80 ವರ್ಷ ವಯಸ್ಸಿನ ವೃದ್ಧೆಯೊಬ್ಬರು ಇಲ್ಲಿನ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಆರೋಪಿ ಎಸ್.ರವಿ (30) ಘಟನೆ ನಡೆದ ನಂತರ ಪರಾರಿಯಾಗಿದ್ದಾನೆ. 'ಶನಿವಾರ ಬೆಳಗಿನ ಜಾವ ಮನೆಯೊಳಗೆ ನುಗ್ಗಿದ ಆರೋಪಿ, ಅಡುಗೆ ಕೋಣೆಗೆ ಎಳೆದೊಯ್ದು. ನಾನು ಎಷ್ಟೇ ಕೂಗಿದರೂ ಬಿಡದೆ, ಅತ್ಯಾಚಾರ ಎಸಗಿದ' ಎಂದು ವೃದ್ಧೆಯು ದೂರಿನಲ್ಲಿ ವಿವರಿಸಿದ್ದಾರೆ.

20 ವರ್ಷಗಳ ಹಿಂದೆ ವೃದ್ಧೆಯ ಪತಿ ತೀರಿಕೊಂಡಿದ್ದು, ಮಕ್ಕಳಿಲ್ಲದ್ದರಿಂದ ಒಂಟಿ ಜೀವನ ನಡೆಸುತ್ತಿದ್ದಾರೆ. 'ವೃದ್ಧೆಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಆರೋಪಿ ಪತ್ತೆಗೆ ಬಲೆ ಬೀಸಿದ್ದೇವೆ' ಎಂದು ಸಿಪಿಐ ಎಚ್.ಎಂ.ಸಿದ್ದೇಗೌಡ ಹೇಳಿದ್ದಾರೆ.

ವಿಚಾರಣೆಗೆ ಕರೆದೊಯ್ದಿದ್ದ ವ್ಯಕ್ತಿ ಶವವಾಗಿ ಪತ್ತೆ

ತುಮಕೂರು: ಸೈಕಲ್ ಕಳ್ಳತನ ಪ್ರಕರಣದಲ್ಲಿ ವಿಚಾರಣೆಗಾಗಿ ಭಾನುವಾರ ಇಲ್ಲಿಯ ಜಯನಗರ ಪೊಲೀಸ್ ಠಾಣೆಗೆ ಹೋಗಿದ್ದ ಗಾರೆ ಕಾರ್ಮಿಕ ಶವವಾಗಿ ಪತ್ತೆಯಾಗಿದ್ದಾರೆ.

ಶೆಟ್ಟಿಹಳ್ಳಿ ಬಳಿಯ ನಾಯಕರ ಬೀದಿಯ ನಿವಾಸಿ ಹನುಮಂತ ರಾಯಪ್ಪ (58) ಮೃತಪಟ್ಟವರು. ಪೊಲೀಸರ ಥಳಿತದಿಂದ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಕುಟುಂಬ ಸದಸ್ಯರು ಮತ್ತು ಸ್ಥಳೀಯರು ಭಾನುವಾರ ರಾತ್ರಿ ರಿಂಗ್ ರಸ್ತೆಯಲ್ಲಿ ಪ್ರತಿಭಟನೆ ಆರಂಭಿಸಿದ್ದಾರೆ.

ಸೈಕಲ್ ಕಳ್ಳತನ ದೂರಿನ ಸಂಬಂಧ ಶನಿವಾರ ರಾತ್ರಿ ವಿಚಾರಣೆಗೆ ಠಾಣೆಗೆ ಕರೆದುಕೊಂಡು ಹೋಗಲಾಗಿತ್ತು. ಮತ್ತೆ ಭಾನುವಾರವು ಕರೆದುಕೊಂಡು ಹೋಗಿದ್ದರು. ಸಂಜೆ 6.30ರ ವೇಳೆಗೆ ಶೆಟ್ಟಿಹಳ್ಳಿ ರಿಂಗ್ ರಸ್ತೆಯ ಬಳಿ ಬಿಟ್ಟು ಹೋಗಿದ್ದು, ಅಲ್ಲಿಯೇ ಹನುಮಂತ ರಾಯಪ್ಪ ಸತ್ತಿದ್ದು, ಶಂಕಾಸ್ಪದವಾಗಿದೆ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

MESCOM

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು-575004

ದೂರವಾಣಿ: 0824-2885795 CIN: U40109 KA 2002 SGC 030425

ಸಂಖ್ಯೆ: File No.MESCOM/PROC/PURC/176/2022-PROC ದಿನಾಂಕ: 02.12.2022

ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

ಮ.ವಿ.ಸ.ಕಂಯು ಈ ಕೆಳಗಿನ ಸಾಮಾಗ್ರಿಯ ತಯಾರಿಕೆ ಹಾಗೂ ಸರಬರಾಜಿಗಾಗಿ ಟೆಂಡರನ್ನು ಆಹ್ವಾನಿಸುತ್ತದೆ.

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಾಗ್ರಿಯ ವಿವರ	ಪ್ರಮಾಣ
MESCOM/ 2022-23/IND899	1.1 ಕೆವಿ ಪಿನ್ ಇನ್ಸುಲೇಟರ್ ಶೆಲ್‌ಗಳಿಗೆ ಹೊಂದುವ ಜಿ.ಐ. ಪಿನ್‌ಗಳು	1,50,000 ಸಂಖ್ಯೆಗಳು
MESCOM/ 2022-23/IND900	1.1 ಕೆವಿ ಪಿನ್ ಇನ್ಸುಲೇಟರ್ ಶೆಲ್ಸ್	1,50,000 ಸಂಖ್ಯೆಗಳು

ಆಸಕ್ತ ಅರ್ಹ ಬಿಡ್ದುದಾರರು ದಿನಾಂಕ 05.12.2022 ಅಥವಾ ನಂತರ ವೆಬ್‌ಸೈಟ್ www.eproc.karnataka.gov.in ಗೆ ಲಾಗಾನ್ ಮಾಡಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ), ಕಾರ್ಪೊರೇಟ್ ಕಚೇರಿ

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ, 2ನೇ ಹಂತ, ಬಿ.ಎಂ.ಟಿ.ಸಿ, ಬಸ್ ಡಿಪೋ ಹತ್ತಿರ, ಬೆಂಗಳೂರು-38

ದೂರವಾಣಿ: 080-25196124-129 ಫ್ಯಾಕ್ಸ್: 25196110

ವೆಬ್‌ಸೈಟ್: www.kuidfc.com ಇ-ಮೇಲ್: info@kuidfc.com

ಸಂ: ಕೆಯುಐಡಿಎಫ್‌ಸಿ/ಆಡಳಿತ/ಯುಐಬಿ/Lift-CAMC/2022-23 ದಿ: 05.12.2022

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯಲ್ಲಿ 3 ವರ್ಷಗಳ ಕಾಲ 13 ವ್ಯಕ್ತಿಗಳ/884ಕೆಜಿ ಸಾಮರ್ಥ್ಯದ 03 ಸಂಖ್ಯೆ ಪ್ಯಾಸೆಂಜರ್ ಲಿಫ್ಟ್‌ಗಳ ಸಮಗ್ರ ವಾರ್ಷಿಕ ನಿರ್ವಹಣೆಯನ್ನು ಒದಗಿಸುವ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ವೆಬ್‌ಸೈಟ್ ವಿಳಾಸ: https://www.eproc.karnataka.gov.in ರಲ್ಲಿ ದಿನಾಂಕ: 05.12.2022 ರಿಂದ 20.12.2022 ರ 17:30 ಗಂಟೆಯ ವರೆಗೆ ಲಭ್ಯವಿರುತ್ತದೆ. ಆಸಕ್ತ ಬಿಡ್ದುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರವೇ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ. ಇದರ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೂರ್ಟಲ್ ನಲ್ಲಿ ತಿಳಿದುಕೊಳ್ಳಬಹುದು.

ಸಹಿ/- ಪ್ರಧಾನ ವ್ಯವಸ್ಥಾಪಕರು (ಆಡಳಿತ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಆಸ್ತಿ ಅಧಿಕಾರಿಗಳು, ಕೃವಿವಿ, ರಾಯಚೂರು.

ನಂ. ಆಅ/ಕೃವಿವಿರಾ/ಟೆ.ನೋ.-154/2022-23 ದಿನಾಂಕ. 29-11-2022.

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ ಸಾಮಾನ್ಯ ಇನ್ಕುಬೇಷನ್ ಕೇಂದ್ರಗಳಿಗೆ PM-FME Scheme ಮುಖಾಂತರ O & M ಆಪರೇಟರ್ ಏಜೆನ್ಸಿಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ರನ್ನು ಆಹ್ವಾನಿಸಲಾಗಿದೆ ಟೆಂಡರ್ ಪ್ರಕಟಣೆಯ ಹೆಚ್ಚಿನ ವಿವರಗಳು ವೆಬ್‌ಸೈಟ್ ವಿಳಾಸ https://eproc.karnataka.gov.in ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ವೇಳಾ ಪಟ್ಟಿ

1	ತುಂಬಿದ ಟೆಂಡರನ್ನು ವೆಬ್‌ಸೈಟ್‌ನ ಮೂಲಕ ಸಲ್ಲಿಸುವ ಕೊನೆಯ ದಿನಾಂಕ	13-12-2022	ಸಾಯಂಕಾಲ 5.00 ಘಂಟೆಯವರಿಗೆ
2	ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ	14-12-2022	ಸಾಯಂಕಾಲ 5.10 ಘಂಟೆಗೆ
3	ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ.	24-12-2022	ಬೆಳಗ್ಗೆ 10 ಘಂಟೆಗೆ

ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನಗಳಂದು ಸದರಿ ಕಛೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು (Ph. No. 08532 - 220640) ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ https://eproc.karnataka.gov.in ನಲ್ಲಿ ಇಲ್ಲವೆ ಹೆಲ್ಪಡೆಸ್ಕನಿಂದ (ಸಹಾಯಕ ದೂರವಾಣಿ ಸಂಖ್ಯೆ : 080-25501216 ಮತ್ತು 25501227) ಪಡೆಯಬಹುದು.

ಸಹಿ/- ಆಸ್ತಿ ಅಧಿಕಾರಿಗಳು, ಕೃಷಿ ವಿ.ವಿ.ವಿ ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/450/ಎಂ.ಸಿ.&ಎ/2022-23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಚೇರಿ

(ಕಾವೇರಿ-ಕಾರ್ಯಾಚರಣೆ ಮತ್ತು ನಿರ್ವಹಣೆ), 6ನೇ ಮಹಡಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು - 560 009

ಸಂಖ್ಯೆ:ಬೆಂಜಮಂ/ಮುಅ(ಕಾ-ಕಾ&ನಿ)ಟಿಇ/ತಾಂಅ-01/57/2022/869/2022-23 ದಿನಾಂಕ: 30.11.2022

ಟೆಂಡರ್‌ಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರುದಾರರಿಂದ ಸಿಡಬ್ಲ್ಯೂಎಸ್‌ಎಸ್ 4ನೇ ಹಂತ, 2ನೇ ಘಟ್ಟದ ಟಿ.ಕೆ ಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿಯಲ್ಲಿನ ಪಂಪಿಂಗ್ ಸ್ಟೇಷನ್‌ಗಳಿಗೆ 2300 ಕೆಡಬ್ಲ್ಯೂ, 11 ಕೆವಿ ಸ್ಕ್ವೆರಲ್ (Squirrel) ಕೇಜ್ ಇಂಡಕ್ಷನ್ ಮೋಟಾರ್‌ಗಳನ್ನು (3 ಸಂಖ್ಯೆಗಳು) ಸರಬರಾಜು ಮಾಡಲು ದ್ವಿ ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಗಿಟ್ಟ ಅಂದಾಜು ಮೊತ್ತ: ₹ 288 ಲಕ್ಷಗಳು. ಇಎಂಡಿ: ₹ 5.10 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 03.01.2023ರ ಮಧ್ಯಾಹ್ನ 3:00 ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ: 05.01.2023ರ ಸಂಜೆ 4:00 ಗಂಟೆಗೆ ತೆರೆಯಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರರು (ಕಾ-ಕಾ&ನಿ)

ವಾ.ಸಾ.ಸಂ.ಇ/3374/2022-23

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಇತಿಹಾಸ ಸಂಶೋಧಕ ಪ್ರೊ. ಕೃಷ್ಣ ಕೊಲ್ಹಾರ ಕುಲಕರ್ಣಿ

‘ಮತೀಯ ದ್ವೇಷವಿಲ್ಲದ ಆದಿಲ್‌ಶಾಹಿ ಆಡಳಿತ’

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ವಿಜಯಪುರವನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಮಹಾರಾಷ್ಟ್ರದ ಮುಂಬೈನಿಂದ ಕೇರಳದ ಕಣ್ಣೂರಿನವರೆಗೆ ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದ ಆದಿಲ್‌ಶಾಹಿಗಳ ಆಡಳಿತದ ಅವಧಿಯಲ್ಲಿ ಮತೀಯ ದ್ವೇಷದ ಗಲಭೆಗಳು ನಡೆದ ಕುರುಹುಗಳೇ ಇಲ್ಲ ಎಂದು ಇತಿಹಾಸ ಸಂಶೋಧಕ ಪ್ರೊ. ಕೃಷ್ಣ ಕೊಲ್ಹಾರ ಕುಲಕರ್ಣಿ ಹೇಳಿದರು.



ಪ್ರೊ. ಕೃಷ್ಣ ಕೊಲ್ಹಾರ ಕುಲಕರ್ಣಿ

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಭಾನುವಾರ ‘ಆದಿಲ್‌ಶಾಹಿಗಳ ಸಾಮ್ರಾಜ್ಯ’ ಕುರಿತು ಮಾತನಾಡಿದ ಅವರು, ‘ಕರ್ನಾಟಕದಲ್ಲಿ ಟಿಪ್ಪು ಸುಲ್ತಾನ್ ಕುರಿತು ಹೆಚ್ಚು ಚರ್ಚೆ ನಡೆಯುತ್ತದೆ. ಆದರೆ, ಟಿಪ್ಪುವಿನ ಸಾಮ್ರಾಜ್ಯದ ಹಲವು ಪಟ್ಟು ದೊಡ್ಡದಾಗಿದ್ದ ಮತ್ತು ದೀರ್ಘಕಾಲ ಆಳ್ವಿಕೆ ನಡೆಸಿದ್ದ ಆದಿಲ್‌ಶಾಹಿಗಳ ಕುರಿತು ಚರ್ಚೆಯೇ ನಡೆಯುವುದಿಲ್ಲ. ಈ ತಲೆಮಾರಿನ ಕನ್ನಡಿಗರಿಗೆ ಆದಿಲ್‌ಶಾಹಿ ಆಡಳಿತದ ಬಗ್ಗೆ ತಿಳಿದೇ ಇಲ್ಲ’ ಎಂದರು.

ಆದಿಲ್‌ಶಾಹಿ ಸಾಮ್ರಾಜ್ಯದ ಅವಧಿಯಲ್ಲಿ ಹಿಂದೂ– ಮುಸ್ಲಿಮರ ನಡುವೆ ಗಲಭೆಗಳು ನಡೆದೇ ಇರಲಿಲ್ಲ. ಆದರೆ, ಮುಸ್ಲಿಮರಲ್ಲೇ ಶಿಯಾ ಮತ್ತು ಸುನ್ನಿ ಪಂಗಡಗಳ ನಡುವೆ ಸಂಘರ್ಷ ನಡೆದ ಉಲ್ಲೇಖಗಳು ಇತಿಹಾಸದಲ್ಲಿ ಸಿಗುತ್ತವೆ ಎಂದು ಹೇಳಿದರು.

‘ಎಲ್ಲರೂ ಯುದ್ಧದ ಭಾಗವಾಗಿದ್ದರು’

ಗಿರೀಶ್ ಕಾರ್ನಾಡರ ‘ರಾಕ್ಷಸ ತಂಗಡಿ’ ನಾಟಕದಲ್ಲಿ ಉತ್ಪ್ರೇಕ್ಷೆಗಳಿವೆಯೆ? ಎಂಬ ಸಭಿಕರೊಬ್ಬರ ಪ್ರಶ್ನೆಗೆ ಉತ್ತರಿಸಿದ ಕೃಷ್ಣ ಕೊಲ್ಹಾರ ಕುಲಕರ್ಣಿ, ‘ಗಿರೀಶ್ ಅವರು ನಾಟಕ ಬರೆಯುವ ಮುನ್ನ ಸುದೀರ್ಘ ಕಾಲ ನನ್ನೊಂದಿಗೆ ಚರ್ಚಿಸಿದ್ದರು. ಕೃತಿಯಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಮುಸ್ಲಿಮರಿಂದಷ್ಟೇ ಯುದ್ಧಗಳಾಗುತ್ತ-ವೆ ಎಂದು ಏಕೆ ಭಾವಿಸಬೇಕು? ಆ ಕಾಲದಲ್ಲಿದ್ದ ಮುಸ್ಲಿಮರು– ಹಿಂದೂಗಳು ಎಲ್ಲರೂ ಯುದ್ಧದ ಭಾಗವಾಗಿದ್ದರು’ ಎಂದರು.

‘ನಾನು ಇತಿಹಾಸದಲ್ಲಿ ಆಸಕ್ತಿ ಹೊಂದಿದ್ದ ವ್ಯಕ್ತಿ. ಎರಡನೇ ಮಹಾಯುದ್ಧ, ಬಾಂಗ್ಲಾದೇಶದ ಇತಿಹಾಸ ಕುರಿತು ಬರೆದಿದ್ದೆ. ನನ್ನ ಮನೆ, ನನ್ನ ಪ್ರದೇಶದ ಇತಿಹಾಸ ತಿಳಿಯದೆ ಜಗತ್ತಿನ ಇತಿಹಾಸ ಅರಿತು ಏನು ಪ್ರಯೋಜನ ಅನಿಸಿತು. ಆ ಬಳಿಕ ಸ್ಥಳೀಯ ಇತಿಹಾಸದ ಕುರಿತು ಅಧ್ಯಯನ ಆರಂಭಿಸಿದೆ. ದಕ್ಷಿಣ ಭಾರತದ ಮೂರನೇ ಎರಡರಷ್ಟು ಭಾಗವನ್ನು ಆಳಿದ್ದ ಆದಿಲ್‌ಶಾಹಿಗಳ ಸಾಮ್ರಾಜ್ಯದ ಕುರಿತು ಅರಿಯಬೇಕೆಂದು ಅನ್ಯ ಭಾಷೆಗಳಲ್ಲಿದ್ದ ದಾಖಲೆಗಳು, ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆ ಕೈಗೆತ್ತಿಕೊಂಡಿದ್ದೆ’ ಎಂದು ತಮ್ಮ ಅನುಭವ ಕಥನವನ್ನು ವಿವರಿಸಿದರು.

ಆದಿಲ್‌ಶಾಹಿ ಸಾಮ್ರಾಜ್ಯದ ಕುರಿತು ಕನ್ನಡದಲ್ಲಿ ನಾಲ್ಕರಿಂದ ಆರು ಪುಟಗಳಷ್ಟು ಮಾಹಿತಿ ಮಾತ್ರ ಇತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಗೆಳೆಯ ಪ್ರೊ.ಎಂ.ಎಂ. ಕಲಬುರ್ಗಿ ಹಾಗೂ ಆಗ ಸಚಿವರಾಗಿದ್ದ ಎಂ.ಬಿ. ಪಾಟೀಲ ಅವರ ಆಸಕ್ತಿಯ ಕಾರಣದಿಂದ ರಾಜ್ಯ ಸರ್ಕಾರದ ಅನುದಾನದಲ್ಲಿ ಆದಿಲ್‌ಶಾಹಿಗಳ ಸಾಮ್ರಾಜ್ಯದ ಕುರಿತ ಹಲವು ಕೃತಿಗಳನ್ನು ಕನ್ನಡಕ್ಕೆ ತರುವ ಕೆಲಸ ಸಾಕಾರಗೊಂಡಿತು ಎಂದರು.

‘ಇಡೀ ಯೋಜನೆ ಒಂದು ಸವಾಲಿನ ಕೆಲಸವಾಗಿತ್ತು. ದೇಶದ ವಿವಿಧ ರಾಜ್ಯಗಳಲ್ಲಿ 21 ಕೃತಿಗಳು ಸಿಕ್ಕವು. ಇನ್ನೂ ಕೆಲವು ಕೃತಿಗಳು ವಿದೇಶಗಳಲ್ಲಿ ಲಭ್ಯವಾದವು. ಪರ್ಷಿಯನ್ ಭಾಷೆಯಲ್ಲಿದ್ದ ಕೆಲ ಕೃತಿಗಳನ್ನು ಉರ್ದು ಭಾಷೆಗೆ ಅನುವಾದಿಸಿ, ನಂತರ ಕನ್ನಡಕ್ಕೆ ತರಲಾಯಿತು’ ಎಂದು ವಿವರಿಸಿದರು.

ಆದಿಲ್‌ಶಾಹಿ ದೊರೆಗಳ ಯೋಚನಾ ಶೈಲಿಯೇ ವಿಭಿನ್ನವಾಗಿತ್ತು. ವಿಜಯಪುರದಲ್ಲಿ ಕುಳಿತು ನೆರೆಯ ರಾಜ್ಯಗಳು, ವಿದೇಶಗಳ ಜತೆ ಸಂಪರ್ಕ ಸಾಧಿಸಿದ್ದರು. ಆ ಕಾಲಕ್ಕೆ 13 ಲಕ್ಷ ಜನಸಂಖ್ಯೆ ಹೊಂದಿದ್ದ ಜನವಸತಿಗಳಿಗೆ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ ಮಾಡಿದ್ದರು. ದುಡಿಯುವ ಜನರಿಗೆ ಉದ್ಯೋಗದ ವ್ಯವಸ್ಥೆ ಮಾಡಿದ್ದರು ಎಂದರು.

ಜೈಲಿನಲ್ಲಿ ಊಟವನ್ನೂ ಕೊಡದೆ ಹಿಂಸೆ: ಕಫೀಲ್ ಖಾನ್

• ಸುಕೃತ ಎಸ್.

ಬೆಂಗಳೂರು: ‘ನನ್ನನ್ನು ಬೆತ್ತಲೆ ಮಾಡಲಾಗುತ್ತಿತ್ತು. ಕುಡಿದು ಬರುವ ಪೊಲೀಸರು ಬೆಲ್ಟು, ಕೋಲು, ರಾಡ್‌ನಿಂದ ಹೊಡೆಯುತ್ತಿದ್ದರು. ಅವರ ಮುಖದಲ್ಲಿ ನನ್ನ ವಿರುದ್ಧ ಅವರಿಗಿದ್ದ ದ್ವೇಷ ಕಾಣುತ್ತಿತ್ತು’ ಎಂದು ಕಾರಾಗೃಹದಲ್ಲಿ ಕಳೆದ ದಿನಗಳನ್ನು ಡಾ.ಕಫೀಲ್ ಖಾನ್ ಅವರು ನೆನಪಿಸಿಕೊಂಡರು.

ಬೆಂಗಳೂರಿನಲ್ಲಿ ನಡೆದ ‘ಬೆಂಗಳೂರು ಸಾಹಿತ್ಯ ಉತ್ಸವ’ದಲ್ಲಿ ತಮ್ಮ ಪುಸ್ತಕ ‘ದಿ ಗೋರಖಪುರ್ ಹಾಸ್ಪಿಟಲ್ ಟ್ರಾಜೆಡಿ’ ಕುರಿತು ಮಾತನಾಡಿದರು.

‘4–5 ದಿನಗಳ ವರೆಗೆ ನನಗೆ ಊಟ ಕೊಡುತ್ತಿರಲಿಲ್ಲ. ಹೊರಗಡೆ ಚಿಕನ್, ಕೇಕ್, ದೋಸೆ, ಇಡ್ಲಿ ಅಂತೆಲ್ಲಾ ಎಲ್ಲರೂ ತಿನ್ನುತ್ತಿದ್ದರು. ಆದರೆ, ನನಗೆ ಊಟ ಕೊಡುತ್ತಿರಲಿಲ್ಲ. ಹಸಿವಾದಾಗ ನನ್ನ ಅಂಗಿಯನ್ನು ಕಚ್ಚಿಕೊಳ್ಳುತ್ತಿದ್ದೆ. ನನ್ನ ಕೊಠಡಿಯ ಹೊರಗೆ ಬೆಳೆದಿದ್ದ ಹುಲ್ಲು ತಿನ್ನುತ್ತಿದ್ದೆ’ ಎಂದು ಹೇಳುತ್ತಾ ಭಾವುಕರಾದರು.

ಹಿಂದಿಗೆ ಅನುವಾದಗೊಂಡ ಪುಸ್ತಕವನ್ನು ಲಖನೌದಲ್ಲಿ ಬಿಡುಗಡೆಗೊಳಿಸಲಾಯಿತು. ಮರುದಿನವೇ ಮಾರುಕಟ್ಟೆಯಿಂದ 4 ಸಾವಿರ ಕೃತಿಗಳನ್ನು ಹಿಂಪಡೆದುಕೊಳ್ಳುವಂತೆ ಸಿ.ಎಂ. ಕಚೇರಿಯಿಂದ ಪ್ರಕಾಶಕರಿಗೆ ಕರೆ ಬಂದಿತು.

ಡಾ. ಕಫೀಲ್ ಖಾನ್

‘ಮೂತ್ರವಿಸರ್ಜನೆ ಮಾಡಿದರೆ, ನೀರು ಕೂಡ ಕೊಡುತ್ತಿರಲಿಲ್ಲ. ನನ್ನ ಕೈಯಲ್ಲಿ ಶೌಚಾಲಯ ತೊಳೆಸಿದರು, ನೆಲ ಸ್ವಚ್ಛ ಮಾಡಿಸಿದರು. 180 ಅಪರಾಧಿಗಳಿರುವ ಕೊಠಡಿಯಲ್ಲಿ ಮಲಗಲು ಹೇಳುತ್ತಿದ್ದರು. ಮಾಡಿರದ ತಪ್ಪಿಗಾಗಿ 500ಕ್ಕೂ ಹೆಚ್ಚು ದಿನಗಳ ವರೆಗೆ ಕಾರಾಗೃಹದಲ್ಲಿ ಕಷ್ಟ ಅನುಭವಿಸಿದೆ’ ಎಂದರು.

ಸಿಎಂ ಸ್ಥಾನ ಉಳಿಸಿಕೊಳ್ಳಬೇಕಿತ್ತು: ‘ಗೋರಖಪುರವು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಸ್ವಕ್ಷೇತ್ರ. ಹಿಂದೂ ಡಾಕ್ಟರ್ ಒಬ್ಬ ನನ್ನ ಸ್ಥಾನದಲ್ಲಿ ಇದ್ದರೂ ಯೋಗಿ ಅವರು ಹೀಗೆಯೇ ಮಾಡುತ್ತಿದ್ದರು. ಆದರೆ, ಹೆಸರಿನ ಮುಂದೆ ಖಾನ್ ಎಂದು ಇದ್ದರೆ ಅದೊಂದು ಉತ್ತಮ ಮಾರಾಟದ ಸರಕಷ್ಟೇ. ಅವರಿಗೆ ಅವರ ಸ್ಥಾನ ಉಳಿಸಿಕೊಳ್ಳಬೇಕಿತ್ತು’ ಎಂದು ಹೇಳಿದರು.

ರವಿ ಜೋಶಿ ಅವರು ಗೋಷ್ಠಿಯನ್ನು ನಿರ್ವಹಿಸಿದರು.

ಕಫೀಲ್ ಖಾನ್ ಯಾರು?

ಗೋರಖಪುರ ಸರ್ಕಾರಿ ಆಸ್ಪತ್ರೆಯೊಂದರಲ್ಲಿ 63 ಹಸುಳೆಗಳು ಆಮ್ಲಜನಕದ ಕೊರತೆಯಿಂದ ಮೃತಪಟ್ಟಿದ್ದರು. ಈ ವೇಳೆ ಕೆಲವು ಆಮ್ಲಜನಕ ಸಿಲಿಂಡರ್‌ಗಳನ್ನು ತಕ್ಷಣದಲ್ಲಿ ಹೊಂದಿಸಿದ ಕಫೀಲ್ ಖಾನ್ ಕೆಲವು ಮಕ್ಕಳ ಜೀವ ಉಳಿಸಿದ್ದಾಗಿ 2017ರಲ್ಲಿ ವರದಿಯಾಗಿತ್ತು. ಕಫೀಲ್ ಅವರ ನಿರ್ಲಕ್ಷ್ಯದಿಂದ ಆಮ್ಲಜನಕ ಕೊರತೆ ಆಗಿದೆ ಮತ್ತು ಇತರ ಆರೋಪಗಳನ್ನು ಹೊರಿಸಿ ಅವರನ್ನು ಪೊಲೀಸರು ಬಂಧಿಸಿದ್ದರು. ಪ್ರಕರಣದ ವಿಚಾರಣೆ ನಡೆಯುತ್ತಿದೆ.

ಮಾಧ್ಯಮಗಳ ಕುರಿತು ಬೇಸರ

ದೆಹಲಿ, ಮುಂಬೈಯಲ್ಲಿ ಕೂತ ದೊಡ್ಡ ದೊಡ್ಡ ಸುದ್ದಿವಾಹಿನಿಗಳ ಮುಖ್ಯಸ್ಥರಿಗೆ ನಿಜವಾಗಿ ಕಫೀಲ್ ಖಾನ್ ಯಾರು ಎಂದು ತಿಳಿಯುವ ಕುತೂಹಲ ಇರಲಿಲ್ಲ. ಸತ್ಯ ತಿಳಿಯಲು ಯಾರೂ ಗೋರಖಪುರಕ್ಕೆ ಬರಲಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಬಂದ ನನ್ನ ವಿರುದ್ಧದ ಸುಳ್ಳು ಸುದ್ದಿಗಳನ್ನು ಆಧರಿಸಿ ವರದಿ ಮಾಡಲಾಯಿತು’ ಎಂದು ಬೇಸರ ವ್ಯಕ್ತಪಡಿಸಿದರು.

ದೆಹಲಿ: ನಿರ್ಮಾಣ ಕಾಮಗಾರಿಗಳಿಗೆ ನಿಷೇಧ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯಲ್ಲಿ ವಾಯು ಗುಣಮಟ್ಟ ತೀವ್ರ ಕುಸಿತವಾಗಿರುವ ಕಾರಣ ಅನಿವಾರ್ಯವಲ್ಲದ ನಿರ್ಮಾಣ ಕಾಮಗಾರಿಗಳಿಗೆ ನಿಷೇಧ ಹೇರುವಂತೆ ವಾಯು ಗುಣಮಟ್ಟ ನಿರ್ವಹಣಾ ಆಯೋಗವು ಭಾನುವಾರ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ದೆಹಲಿಯಲ್ಲಿ ಭಾನುವಾರ 24 ಗಂಟೆಗಳ ಸರಾಸರಿ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯುಐ) 407ರಷ್ಟು ಇತ್ತು.

ನವೆಂಬರ್ 4ರ ನಂತರ ದೆಹಲಿಯಲ್ಲಿ ವಾಯು ಗುಣಮಟ್ಟವು ತೀವ್ರವಾಗಿ ಕುಸಿದಿದೆ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಜನ ಸಂಕಲ್ಪ ಯಾತ್ರೆಗೆ ಉತ್ತಮ ಪ್ರತಿಕ್ರಿಯೆ: ಸಿ.ಎಂ

ಹುಬ್ಬಳ್ಳಿ: ‘ರಾಜ್ಯದಲ್ಲಿ ಬಿಜೆಪಿಯ ಜನ ಸಂಕಲ್ಪ ಯಾತ್ರೆಗೆ ಅಭೂತಪೂರ್ವ ಬೆಂಬಲ ಸಿಗುತ್ತಿದೆ. ಡಿಸೆಂಬರ್‌ನಲ್ಲಿ ಯಾತ್ರೆಯನ್ನು ಮತ್ತಷ್ಟು ಚುರುಕುಗೊಳಿಸಲಿದ್ದೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚುನಾವಣಾ ವರ್ಷವಾದ ಕಾರಣ ಯಾತ್ರೆ ಮೂಲಕ ಜನರ ಬಳಿಗೆ ಹೋಗುತ್ತಿದ್ದೇವೆ. ಈಗಾಗಲೇ ಹೈದರಾಬಾದ್ ಕರ್ನಾಟಕ, ಮಧ್ಯ ಕರ್ನಾಟಕ, ಮುಂಬೈ ಕರ್ನಾಟಕ ಭಾಗದಲ್ಲಿ ನಡೆದಿದೆ. ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ’ ಎಂದರು.

‘ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಯಾತ್ರೆಯ ಅವಧಿಯಲ್ಲಿ ಜನರಿಗೆ ತಲುಪಿಸಿ, ಜನರ ವಿಶ್ವಾಸ ಗಳಿಸುತ್ತೇವೆ’ ಎಂದು ಅವರು ಹೇಳಿದರು..

ಸಿದ್ರಾಮುಲ್ಲಾ ಖಾನ್ ಭಾವನೆಗೆ ಕೊಟ್ಟ ಬಿರುದು: ಸಿ.ಟಿ.ರವಿ

ಚಿಕ್ಕಮಗಳೂರು: ‘ಸಿದ್ರಾಮುಲ್ಲಾ ಖಾನ್ (ಸಿದ್ದರಾಮಯ್ಯ) ಎಂದಾಕ್ಷಣ ಕಾಂಗ್ರೆಸ್‌ನವರಿಗೆ ಮೈಯೆಲ್ಲ ಉರಿಯುತ್ತಿದೆ. ಆ ಪದ ಬೈಗುಳವಲ್ಲ, ನಿಮ್ಮ ಭಾವನೆಗಳಿಗೆ ಕೊಟ್ಟ ಬಿರುದು ಅಂದುಕೊಳ್ಳಬಹುದು’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ನವರಿಗೆ ಇಷ್ಟು ಉರಿಯುತ್ತದೆ ಎಂದು ಗೊತ್ತಿದ್ದರೆ 10 ವರ್ಷ ಹಿಂದೆಯೇ ಹೀಗೆ ಹೇಳುತ್ತಿದ್ದೆ. ‘ರಾಜಾಹುಲಿ’, ‘ಹುಲಿಯಾ’ ಎಂಬಮತೆ ಇದನ್ನು ಬಿರುದು ಎಂದು ಭಾವಿಸಿಕೊಳ್ಳಬಹುದಿತ್ತು’ ಎಂದು ಪ್ರತಿಪಾದಿಸಿದರು.

‘ಶ್ರೀಮಂತಿಕೆಯ ದರ್ಪ ಬಿಡಿ’: ಸಿದ್ರಾಮುಲ್ಲಾ ಖಾನ್ ಎನ್ನುವುದನ್ನು ಸಿ.ಟಿ. ರವಿ ಮುಂದುವರಿಸಿದರೆ ಓಡಾಡುವುದು ಕಷ್ಟವಾಗಬಹುದು’ ಎಂದು ‘ಕೆಪಿಸಿಸಿ ಪ್ರಚಾರಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಹೇಳಿದ್ದಾರೆ. ‘ಅವರ ಬೆದರಿಕೆ, ಶ್ರೀಮಂತಿಕೆಯ ದರ್ಪ ನಡೆಯಲ್ಲ’ ಎಂದು ಪ್ರತಿಕ್ರಿಯಿಸಿದರು

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ದಲಿತ ಸಂಘಟನೆಗಳ ಐಕ್ಯತಾ ಸಮಾವೇಶ
ಭಾಗವಹಿಸುವವರು
ಸಂವಾದ
ನಟರಾಜ ಹುಳಿಯಾರ್ ಲೇಖಕ, ಪ್ರಾಧ್ಯಾಪಕ ಬೆಂಗಳೂರು ವಿವಿ
ಇಂದೂಧರ ಹೊನ್ನಾಪುರ ಪತ್ರಕರ್ತ, ದಸಂಸ ನಾಯಕ
ಬಂಜಗೆರೆ ಜಯಪ್ರಕಾಶ್ ಕವಿ, ಸಂಶೋಧಕ ಹಾರೋಹಳ್ಳಿ ರಾಮನಗರ
ಅಶ್ವಿನಿ ಮದನಕರ್ ವಕೀಲೆ, ಹೋರಾಟಗಾರ್ತಿ ಕಲಬುರಗಿ
ಮಧ್ಯಾಹ್ನ 12 ರಿಂದ 1
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3iBtpmc

ಬಿಲ್ ಪಾವತಿಸದೇ ಕೈಕೊಟ್ಟ ಸರ್ಕಾರ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲಿಕಾ ಚೇತರಿಕೆ’ ಹೆಸರಿನ ಶಿಕ್ಷಕರ ಕೈಪಿಡಿ ಮುದ್ರಣ ಮಾಡಿ ಬಿಲ್ ಸಲ್ಲಿಸಿದರೆ ಕೇವಲ 48 ಗಂಟೆಗಳೊಳಗೆ ಹಣ ಪಾವತಿ ಮಾಡುವುದಾಗಿ ಮುದ್ರಕರಿಗೆ ಭರವಸೆ ನೀಡಿದ್ದ ಸಮಗ್ರ ಶಿಕ್ಷಣ ಇಲಾಖೆ, 5 ತಿಂಗಳು ಕಳೆದರೂ ಹಣ ಪಾವತಿ ಮಾಡದೇ ಸತಾಯಿಸುತ್ತಿದೆ ಎಂದು ಪಠ್ಯ ಪುಸ್ತಕ ಮುದ್ರಕರು ದೂರಿದ್ದಾರೆ.

1 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಬೋಧಿಸಲು ಕಲಿಕಾ ಚೇತರಿಕೆ ಕೈಪಿಡಿ ಮುದ್ರಿಸಲು ಸಮಗ್ರ ಶಿಕ್ಷಣ ಇಲಾಖೆ ಏಪ್ರಿಲ್‌ನಲ್ಲಿ ಟೆಂಡರ್ ಕರೆದು ಕಾರ್ಯಾದೇಶ ನೀಡಿತ್ತು. 45 ದಿನಗಳಲ್ಲಿ ರಾಜ್ಯದಲ್ಲಿರುವ ಶಿಕ್ಷಕರಿಗೆ ಪೂರೈಕೆ ಮಾಡಬೇಕಿರುವುದರಿಂದ, ತಕ್ಷಣವೇ ಮುದ್ರಿಸಿಕೊಡಬೇಕು ಎಂದು ಇಲಾಖೆ ಒತ್ತಡ ಹೇರಿತ್ತು.

ತಮ್ಮ ಹೆಸರು ಬಹಿರಂಗಪಡಿಸಲು ಬಯಸದ ಮುದ್ರಕರ ಸಂಘದ ಪ್ರತಿನಿಧಿಯೊಬ್ಬರು ‘ಪ್ರಜಾವಾಣಿ’ ಜತೆ ಮಾತನಾಡಿ, ‘ಪುಸ್ತಕಗಳನ್ನು ತ್ವರಿತಗತಿಯಲ್ಲಿ ಹಂಚುವ ಉದ್ದೇಶದಿಂದ ಟೆಂಡರ್ ಕರೆದ ಅಧಿಕಾರಿಗಳು 48 ಗಂಟೆಗಳಲ್ಲಿ ಬಿಲ್ ಪಾವತಿ ಮಾಡುವ ಭರವಸೆ ನೀಡಿದ್ದರು. ಟೆಂಡರ್ ನಿಯಮಾವಳಿ ಪ್ರಕಾರ ಶೇ 80 ರಷ್ಟು ಹಣ ಪಾವತಿ ಮಾಡಿ, ಉಳಿದ ಶೇ 20 ರಷ್ಟು ಪಾವತಿ ಮಾಡುವ ಮೊದಲು ಅಗತ್ಯವಿರುವ ಎಲ್ಲ ವರದಿಗಳನ್ನು ತರಿಸಿಕೊಂಡು ಪೂರ್ತಿ ಚುಕ್ತಾ ಮಾಡಬೇಕು’ ಎಂದು ತಿಳಿಸಿದರು.

‘ಇಲಾಖೆ ಮಾತಿಗೆ ತಪ್ಪಿದ್ದರಿಂದ ಒತ್ತಡ ತರಬೇಕಾಯಿತು. ಬಳಿಕ ಕಷ್ಟದಿಂದ ಶೇ 40 ರಷ್ಟು ಪಾವತಿ ಮಾಡಿದರು. ಇನ್ನೂ ಶೇ 60 ರಷ್ಟು ಹಣ ಪಾವತಿ ಮಾಡಬೇಕಾಗಿದೆ. ಸುಮಾರು ₹67 ಕೋಟಿ ಪಾವತಿ ಮಾಡಬೇಕಾ ಗಿದೆ. ಬ್ಯಾಂಕ್‌ನಿಂದ ಸಾಲ ಮಾಡಿ ಮುದ್ರಣಕ್ಕೆ ಕೈ ಹಾಕಿದ್ದೇವೆ. ಒಟ್ಟು ಬಿಲ್ ಮೊತ್ತದಲ್ಲಿ ₹20 ಕೋಟಿ ಜಿಎಸ್‌ಟಿಯನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು. ಬ್ಯಾಂಕ್‌ಗೆ ನಿಗದಿತ ಸಮಯಕ್ಕೆ ಸಾಲ ಮರುಪಾವತಿ ಮಾಡದ ಕಾರಣ ಶೇ 10 ರಷ್ಟು ದಂಡವನ್ನೂ ಪಾವತಿಸಬೇಕಾಗಿದೆ. ಜಿಎಸ್‌ಟಿ ಪಾವತಿ ತಡವಾದರೆ ಅದಕ್ಕೂ ದಂಡ ಕಟ್ಟಬೇಕು’ ಎಂದು ಬೇಸರ ವ್ಯಕ್ತಪಡಿಸಿದರು.

‘ಇಲಾಖೆ ಟೆಂಡರ್‌ನಲ್ಲಿ ಸೂಚಿಸಿದ ದರ ಕೊಟ್ಟಿಲ್ಲ, ಇಲಾಖೆಯೇ ಒಂದು ದರ ನಿಗದಿ ಮಾಡಿ ಕಾರ್ಯಾದೇಶ ನೀಡಿದೆ. ಮುದ್ರಣ ಕಾಗದದ ಅಭಾವ ಮತ್ತು ಅದರ ದರವೂ ದುಬಾರಿ ಆಗಿರುವುದರಿಂದ ಮುದ್ರಕರಿಗೆ ವಿಪರೀತ ನಷ್ಟವುಂಟಾಗಿದೆ. ಸರ್ಕಾರ ಹಣ ಪಾವತಿ ಮಾಡುವುದು ತಡ ಮಾಡಿರುವುದರಿಂದ ನಷ್ಟಕ್ಕೆ ತುತ್ತಾಗಿದ್ದೇವೆ. ಹಣದ ಕೊರತೆಯಿದೆ ಎನ್ನುತ್ತಾರೆ’ ಎಂದು ಅಳಲು ತೋಡಿಕೊಂಡರು. ‘ಈಗಾಗಲೇ ಮೊದಲ ಕಂತಿನ ಹಣ ಬಿಡುಗಡೆ ಮಾಡಲಾಗಿದೆ. ಎರಡನೇ ಕಂತಿನ ಹಣ ಬಿಡುಗಡೆ ಮಾಡಬೇಕಾಗಿದೆ. ಆದಷ್ಟು ಬೇಗ ಪಾವತಿ ಮಾಡಲಾಗುವುದು’ ಎಂದು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಸಚಿವ ಬಿ.ಸಿ.ನಾಗೇಶ್ ಸಂಪರ್ಕಕ್ಕೆ ಸಿಗಲಿಲ್ಲ.

ಆರೋಗ್ಯ ಇಲಾಖೆಯಿಂದ 48 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಗುರಿ

ಮಿದುಳು ಜ್ವರ: ಲಸಿಕೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿದುಳು ಜ್ವರ ನಿಯಂತ್ರಣಕ್ಕೆ ಆರೋಗ್ಯ ಇಲಾಖೆಯು 1 ರಿಂದ 15 ವರ್ಷದೊಳಗಿನ ಮಕ್ಕಳಿಗೆ ‘ಜೆನವ್ಯಾಕ್ ಜೆಇ’ ಲಸಿಕೆ ವಿತರಣಾ ಅಭಿಯಾನವನ್ನು ಸೋಮವಾರದಿಂದ ಹಮ್ಮಿಕೊಂಡಿದೆ. ಈ ಅಭಿಯಾನದಲ್ಲಿ 48 ಲಕ್ಷ ಮಕ್ಕಳನ್ನು ತಲುಪುವ ಗುರಿ ಹಾಕಿಕೊಳ್ಳಲಾಗಿದೆ.

ಮಿದುಳು ಜ್ವರವನ್ನು ಜಪಾನೀಸ್ ಎನ್‌ಸೆಫಲೈಟಿಸ್’ (ಜೆಇ) ಪಿಡುಗು ಎಂದು ಗುರುತಿಸಲಾಗಿದೆ. ‘ಫ್ಲೇವಿವೈರಸ್’ ಎಂಬ ವೈರಾಣುವಿನಿಂದ ಬರುವ ಈ ಜ್ವರ, ಕ್ಯುಲೆಕ್ಸ್ ಸೊಳ್ಳೆಗಳ ಮೂಲಕ ಹರಡುತ್ತದೆ. ‘ರಾಜ್ಯದಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಬಳ್ಳಾರಿ, ರಾಯಚೂರು, ಕೊಪ್ಪಳ, ವಿಜಯಪುರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಧಾರವಾಡ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯನ್ನು ‘ಜೆಇ ಎಂಡೆಮಿಕ್’ ಜಿಲ್ಲೆಗಳು ಎಂದು ಗುರುತಿಸಲಾಗಿದೆ. ಈ ಜಿಲ್ಲೆಗಳಲ್ಲಿ ಮಕ್ಕಳಿಗೆ ಒಂಬತ್ತು ತಿಂಗಳು ತುಂಬಿದ ನಂತರ ಮೊದಲನೇ ಡೋಸ್, ವರ್ಷದ ಬಳಿಕ ಎರಡನೇ ಡೋಸ್ ಲಸಿಕೆ ನೀಡಲಾಗುತ್ತದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

‘ಕೇಂದ್ರ ಆರೋಗ್ಯ, ಕುಟುಂಬ ಕಲ್ಯಾಣ ಸಚಿವಾಲಯದ ನಿರ್ದೇಶನದಂತೆ ಹೆಚ್ಚುವರಿಯಾಗಿ ಬಾಗಲಕೋಟೆ, ದಕ್ಷಿಣ ಕನ್ನಡ, ಗದಗ, ಹಾಸನ, ಹಾವೇರಿ, ಕಲಬುರಗಿ, ತುಮಕೂರು, ರಾಮನಗರ, ಉಡುಪಿ, ಯಾದಗಿರಿಯಲ್ಲಿ ಅಭಿಯಾನ ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ’ ಎಂದಿದ್ದಾರೆ.

ಶಾಲೆಗಳಲ್ಲಿ ಲಸಿಕೆ ವಿತರಣೆ

ಡಿಸೆಂಬರ್ ಮೊದಲನೇ ವಾರ ಎಲ್ಲ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಲಸಿಕೆ ಹಾಕಲಾಗುವುದು. ನಂತರದ ಎರಡು ವಾರ ಎಲ್ಲ ಆರೋಗ್ಯ ಸಂಸ್ಥೆಗಳು, ಅಂಗನವಾಡಿ ಕೇಂದ್ರ ಹಾಗೂ ಸಮುದಾಯದ ಇನ್ನಿತರ ಪ್ರದೇಶಗಳಲ್ಲಿ ಲಸಿಕಾ ಅಭಿಯಾನಕ್ಕೆ ವ್ಯವಸ್ಥೆ ಮಾಡಲಾಗಿದೆ. ಕೇಂದ್ರ ಸರ್ಕಾರ ಉಚಿತವಾಗಿ ‘ಜೆನವ್ಯಾಕ್ ಜೆಇ’ ಲಸಿಕೆಗಳನ್ನು ಸರಬರಾಜು ಮಾಡಿದೆ. ‘ರೋಗ ಪತ್ತೆ ಮಾಡಲು ರಾಜ್ಯದಲ್ಲಿ ಸೆಂಟಿನಲ್ ಸರ್ವೆಲೆನ್ಸ್ ಲ್ಯಾಬೋರೇಟರಿಗಳನ್ನು (ಎಸ್‌ಎಸ್‌ಎಲ್) ಸಜ್ಜುಗೊಳಿಸಲಾಗಿದೆ. ಬೆಂಗಳೂರಿನಲ್ಲಿರುವ ನಿಮ್ಹಾನ್ಸ್-ಸ್ಟೇಟ್ ಅಪೆಕ್ಸ್ ಲ್ಯಾಬೋರೇಟರಿ, ಬಳ್ಳಾರಿಯ ವಿಮ್ಸ್, ಹುಬ್ಬಳ್ಳಿಯ ಕಿಮ್ಸ್, ಕೋಲಾರದ ಡಿಪಿಎಚ್‌ಎಲ್, ಉಡುಪಿಯ ಮಣಿಪಾಲ್ ಸೆಂಟರ್ ಫಾರ್ ವೈರಸ್ ರಿಸರ್ಚ್ ಹಾಗೂ ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಕೇಂದ್ರದಲ್ಲಿ ಪರೀಕ್ಷೆಗೆ ವ್ಯವಸ್ಥೆ ಮಾಡಲಾಗಿದೆ’ ಎಂದು ಡಾ.ಕೆ. ಸುಧಾಕರ್ ತಿಳಿಸಿದರು.

ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಮಾಹಿತಿ

ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆ: 44 ಅರ್ಜಿಗಳ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ಕೋರಿ 44 ಅರ್ಜಿಗಳು ಸಲ್ಲಿಕೆಯಾಗಿವೆ’ ಎಂದು ಕರ್ನಾಟಕದ ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹೇಳಿದರು.

ಕೇಂದ್ರ ವಾಣಿಜ್ಯ ಮತ್ತು ಆಹಾರ ಸಚಿವ ಪೀಯೂಷ್ ಗೋಯಲ್ ಅವರನ್ನು ಭೇಟಿ ಮಾಡಿದ ನಂತರ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ಈ ಕಾರ್ಖಾನೆಗಳ ಸ್ಥಾಪನೆಯಿಂದ ₹ 15 ಸಾವಿರ ಕೋಟಿಯಷ್ಟು ಹೂಡಿಕೆಯಾಗಲಿದೆ’ ಎಂದು ಹೇಳಿದರು.

‘ರಾಜ್ಯದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕಾರ್ಖಾನೆಗಳ ಸ್ಥಾಪನೆಗೆ ಅನುಮತಿ ಕೋರಲಾಗಿದೆ. ಅರ್ಜಿಗಳ ಪರಿಶೀಲನಾ ಕಾರ್ಯ ನಡೆಯುತ್ತಿದೆ’ ಎಂದು ಹೇಳಿದರು.

‘ಪ್ರಸ್ತುತ ರಾಜ್ಯದಲ್ಲಿ 78 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಎಲ್ಲ ಕಾರ್ಖಾನೆಗಳು ರೈತರಿಗೆ ಬಾಕಿ ಹಣವನ್ನು ಪಾವತಿಸಿವೆ’ ಎಂದು ಹೇಳಿದರು.

ಕಡಿಮೆ ಮೈಲೇಜ್: ಕಾರು ಮಾಲೀಕರಿಗೆ ₹ 3.10 ಲಕ್ಷ ಪರಿಹಾರ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಆಶ್ವಾಸನೆ ನೀಡಿದಂತೆ ಮೈಲೇಜ್ ನೀಡದ ಕಾರಣ ಕಾರು ಮಾಲೀಕರಿಗೆ ₹3.10 ಲಕ್ಷ ಪರಿಹಾರ ಪಾವತಿಸುವಂತೆ ಕಾರು ಡೀಲರ್ ಮತ್ತು ತಯಾರಕರಿಗೆ ಕೇರಳದ ಗ್ರಾಹಕ ಆಯೋಗ ಆದೇಶಿಸಿದೆ.

ಫೋರ್ಡ್ ಇಂಡಿಯಾ ಮತ್ತು ಅದರ ಡೀಲರ್ ಕೈರಳಿ ಫೋರ್ಡ್ ಅವರಿಗೆ ಅರ್ಜಿದಾರರಾದ ತ್ರಿಶ್ಶೂರ್ ನಿವಾಸಿ ಸೌದಾಮಿನಿ ಪಿ.ಪಿ.ಗೆ ಪರಿಹಾರ ಪಾವತಿಸುವಂತೆ ತ್ರಿಶ್ಶೂರ್ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ನಿರ್ದೇಶನ ನೀಡಿದೆ.

2014 ರಲ್ಲಿ ಖರೀದಿಸಿದ ₹ 8.9 ಲಕ್ಷ ಬೆಲೆಯ ಫೋರ್ಡ್ ಕ್ಲಾಸಿಕ್ ಡೀಸೆಲ್ ಕಾರು ಪ್ರತಿ ಲೀಟರ್‌ಗೆ 32 ಕಿಲೋ ಮೀಟರ್ ಮೈಲೇಜ್ ನೀಡುವುದಾಗಿ ಡೀಲರ್ ಮತ್ತು ತಯಾರಕರು ಭರವಸೆ ನೀಡಿದ್ದರು. ಆದರೆ, ಕೇವಲ 16 ಕಿಲೋ ಮೀಟರ್ ಮೈಲೇಜ್ ನೀಡಿದೆ ಎಂದು ಸೌದಾಮಿನಿ ಅವರು ದೂರಿನಲ್ಲಿ ತಿಳಿಸಿದ್ದಾರೆ.

‘ಮೈಲೇಜ್ ಪರೀಕ್ಷಾ ಪರಿಸ್ಥಿತಿಯಲ್ಲಿದೆ’ ಎಂದು ಡೀಲರ್ ಮತ್ತು ತಯಾರಕರು ಸಮರ್ಥಿಸಿಕೊಂಡ ಕಾರಣ ಆಯೋಗವು ಅದನ್ನು ಪರಿಶೀಲಿಸಲು ತಜ್ಞರನ್ನು ನೇಮಿಸಿತು. ತಜ್ಞರು ಪರಿಶೀಲಿಸಿದಾಗ ಪ್ರತಿ ಲೀಟರ್‌ಗೆ ಮೈಲೇಜ್ ಕೇವಲ 19.6 ಕಿಲೋ ಮೀಟರ್ ಬಂತು.

ಆರ್ಥಿಕ ನಷ್ಟಕ್ಕೆ ₹1.5 ಲಕ್ಷ ಪರಿಹಾರ, ದೂರುದಾರರು ಅನುಭವಿಸಿದ ಯಾತನೆ ಮತ್ತು ಕಷ್ಟಗಳಿಗೆ ₹1.5 ಲಕ್ಷ ಮತ್ತು ₹10,000 ಗಳನ್ನು ವ್ಯಾಜ್ಯ ವೆಚ್ಚವಾಗಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಶೇಕಡ 9 ರಷ್ಟು ಬಡ್ಡಿಯೊಂದಿಗೆ ನೀಡುವಂತೆ ಹೇಳಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಎ. ಡಿ. ಬೆನ್ನಿ, ‘ಭರವಸೆ ನೀಡಿದಂತೆ ಮೈಲೇಜ್ ನೀಡದ ವಾಹನಕ್ಕೆ ಪರಿಹಾರ ನೀಡಿರುವುದು ಅಪರೂಪದ ಆದೇಶ ಎಂದು ಪರಿಗಣಿಸಲಾಗಿದೆ’ ಎಂದು ತಿಳಿಸಿದರು.

‘ದ್ವೇಷ ಭಾಷಣ: ಕಾನೂನು ಕ್ರಮಕ್ಕೆ ಪೂರ್ವಾನುಮತಿ ಅಗತ್ಯ’

ನವದೆಹಲಿ (ಪಿಟಿಐ): ಬುದ್ಧ ಮತ್ತು ಬೌದ್ಧ ಸಮುದಾಯದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲಿಸಬೇಕೆಂದು ಕೋರಿದ್ದ ಅರ್ಜಿಯನ್ನು ಇಲ್ಲಿನ ನ್ಯಾಯಾಲಯ ವಜಾ ಮಾಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ, ‘ದ್ವೇಷ ಭಾಷಣ ಆರೋಪಗಳಿಗೆ ಸಂಬಂಧಿಸಿ ಎಫ್‌ಐಆರ್ ದಾಖಲಿಸುವಂತೆ ಕೋರ್ಟ್ ನಿರ್ದೇಶನ ನೀಡಬೇಕು ಎಂದಾದಲ್ಲಿ, ಕಾನೂನುಕ್ರಮಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಅಗತ್ಯ’ ಎಂದು ಹೇಳಿತು.

‘ಈ ಪ್ರಕರಣದಲ್ಲಿ ದೂರುದಾರರು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದ ಕಾರಣ ಅರ್ಜಿ ಸಮರ್ಥನೀಯವಲ್ಲ’ ಎಂದು ಹೇಳಿದ ನ್ಯಾಯಾಧೀಶ ಅಜಿತ್ ನಾರಾಯಣ್, ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದರು.

ವಕೀಲ ಸತ್ಯಪ್ರಕಾಶ್ ಗೌತಮ್ ಎಂಬುವವರು ಸ್ವಾಮಿ ರಾಮ್ ಭದ್ರಾಚಾರ್ಯ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು.

‘ಸ್ವಾಮಿ ರಾಮ್ ಭದ್ರಾಚಾರ್ಯ ಅವರು, ಬುದ್ಧ ಮತ್ತು ಬೌದ್ಧರ ವಿರುದ್ಧ ಅವಹೇಳನಕಾರಿ ಮತ್ತು ಆಕ್ಷೇಪಾರ್ಹ ಪದಗಳನ್ನು ಬಳಸಿದ್ದಾರೆ. ಇದರಿಂದ ಸಮಾಜದ ಸಾಮರಸ್ಯಕ್ಕೆ ಧಕ್ಕೆಯುಂಟಾಗಿದೆ’ ಎಂದು ವಕೀಲ ಸತ್ಯಪ್ರಕಾಶ್ ಗೌತಮ್ ಆರೋಪಿಸಿದ್ದರು.

ಹೆರಾಯಿನ್ ಸಹಿತ ಡ್ರೋನ್ ವಶ

ಚಂಡೀಗಢ (ಪಿಟಿಐ): ಪಂಜಾಬ್ ಪೊಲೀಸರು ಮತ್ತು ಗಡಿ ಭದ್ರತಾ ಪಡೆ ಜಂಟಿ ಕಾರ್ಯಾಚರಣೆ ನಡೆಸಿ ಪಂಜಾಬ್‌ನ ತರ್ನ್ ತರನ್ ಜಿಲ್ಲೆಯ ಭಾರತ-ಪಾಕಿಸ್ತಾನ ಗಡಿ ಬಳಿ ಮೂರು ಕೆ.ಜಿ ಹೆರಾಯಿನ್ ಸಹಿತ ಡ್ರೋನ್ ವಶಪಡಿಸಿಕೊಳ್ಳಲಾಗಿದೆ.

‘ರಾಜಕೀಯಪ್ರೇರಿತ ನಡೆ ಕೋರ್ಟ್‌ನಲ್ಲಿ ನಿಲ್ಲದು’

ರಾಯಪುರ (ಪಿಟಿಐ): ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಗೂ ಮುನ್ನ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲಿ ಶೇ 76ರಷ್ಟು ಮೀಸಲಾತಿ ಏರಿಕೆ ಮಾಡುವ ಛತ್ತೀಸಗಢ ಸರ್ಕಾರದ ಕ್ರಮವು ರಾಜಕೀಯ ಪ್ರೇರಿತವಾಗಿದ್ದು, ಇದು ನ್ಯಾಯಾಲಯದಲ್ಲಿ ನಿಲ್ಲದು ಎಂದು ರಾಜಕೀಯ ಹಾಗೂ ಕಾನೂನು ತಜ್ಞರು ವಿಶ್ಲೇಷಿಸಿದ್ದಾರೆ.

ಛತ್ತೀಸಗಡ ಹೈಕೋರ್ಟ್ ಈಗಾಗಲೇ ಮೀಸಲಾತಿಯ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚು ಮಾಡುವಂತಿಲ್ಲ ಎಂದು ಎರಡು ಬಾರಿ ಹೇಳಿದೆ. ಮತ್ತೀಗ ಅದೇ ಮಾತು ಪುನರುಚ್ಚರಿಸುವ ಸಾಧ್ಯತೆ ಇದೆ ಎಂದೂ ತಜ್ಞರು ಹೇಳಿದ್ದಾರೆ.

ಪರಿಶಿಷ್ಟ ಪಂಗಡದ (ಎಸ್.ಟಿ) ಅಭ್ಯರ್ಥಿಗಳಿಗೆ ಮೀಸಲಾಗಿರುವ ಭಾನುಪ್ರತಾಪ್‌ಪುರ ವಿಧಾನಸಭಾ ಕ್ಷೇತ್ರದಲ್ಲಿ ಸೋಮವಾರ ನಡೆಯಲಿರುವ ಉಪಚುನಾವಣೆಗೂ ಮುನ್ನ ಸರ್ಕಾರ ಮೀಸಲಾತಿ ಹೆಚ್ಚಳ ಮಾಡಿದೆ.

ರಾಜ್ಯದ ವಿವಿಧ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಉದ್ಯೋಗದಲ್ಲಿ ನೇಮಕ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಸಂಬಂಧಿಸಿದ ಎರಡು ತಿದ್ದುಪಡಿ ಮಸೂದೆಗಳನ್ನು ಛತ್ತೀಸಗಡ ವಿಧಾನಸಭೆ ಶುಕ್ರವಾರ ಅಂಗೀಕರಿಸಿತ್ತು. ಒಟ್ಟು ಮೀಸಲಾತಿಯ ಪ್ರಮಾಣವನ್ನು ಶೇ 76ಕ್ಕೆ ಏರಿಕೆ ಮಾಡಿದೆ.

ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಸ್ಪಷ್ಟನೆ

‘ಭಾರತ್ ಜೋಡೊ ಯಶಸ್ಸಿಗೆ ಪಕ್ಷ ಸಜ್ಜು’

ನವದೆಹಲಿ (ಪಿಟಿಐ): ರಾಜಸ್ಥಾನದಲ್ಲಿ ಕಾಂಗ್ರೆಸ್ ಪಕ್ಷದ ಆಂತರಿಕ ಭಿನ್ನಮತ ‘ಭಾರತ್ ಜೋಡೊ’ ಯಾತ್ರೆಯ ಮೇಲೆ ಪರಿಣಾಮ ಬೀರಬಹುದು ಎಂಬ ಆತಂಕವನ್ನು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ.

‘ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಪೂರ್ಣ ಒಗ್ಗಟ್ಟಾಗಿದೆ. ಭಾರತ್ ಜೋಡೊ ಯಾತ್ರೆಯನ್ನು ಪೂರ್ಣವಾಗಿ ಯಶಸ್ವಿಗೊಳಿಸಲು ಗಮನವನ್ನು ಕೇಂದ್ರೀಕರಿಸಿದೆ’ ಎಂದು ಪೈಲಟ್ ಹೇಳಿದ್ದು, ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ.

‘ತಮ್ಮ ಮತ್ತು ಮುಖ್ಯಮಂತ್ರಿ ನಡುವಣ ಭಿನ್ನಾಭಿಪ್ರಾಯದ ಲಾಭ ಪಡೆಯಲು ಬಿಜೆಪಿ ಹವಣಿಸಿತ್ತು. ವಾಸ್ತವವಾಗಿ ಬಿಜೆಪಿಯಲ್ಲಿಯೇ ಸಾಕಷ್ಟು ಭಿನ್ನಮತವಿದೆ. ಆ ಪಕ್ಷದಲ್ಲಿ ಮುಖ್ಯಮಂತ್ರಿ ಸ್ಥಾನದ ಮೇಲೆ ಕನಿಷ್ಠ 12 ಜನ ಕಣ್ಣಿಟ್ಟಿದ್ದಾರೆ’ ಎಂದರು.

‘ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಬಲ ವಿರೋಧಪಕ್ಷವಾಗಲೂ ಬಿಜೆಪಿಗೆ ಸಾಧ್ಯವಾಗಿಲ್ಲ’ ಎಂದು ಸಂದರ್ಶನದಲ್ಲಿ ಟೀಕಿಸಿದರು.

ಮಧ್ಯಪ್ರದೇಶದ ಜಲಾವರ್‌ನಲ್ಲಿ ಭಾನುವಾರ ‘ಭಾರತ್ ಜೋಡೊ’ ಯಾತ್ರೆಯಲ್ಲಿ ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಹಾಗೂ ಬುಡಕಟ್ಟು ಕಲಾವಿದರೊಂದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಿಟಿಐ ಚಿತ್ರ

‘ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಗೆ ಸಂಬಂಧಿಸಿದಂತೆ ಪಕ್ಷದಲ್ಲಿ ಪೂರ್ಣ ಒಗ್ಗಟ್ಟಿದೆ. ಅದರ ಪೂರ್ಣ ಯಶಸ್ಸಿಗೆ ನಾವು ಸಜ್ಜಾಗಿದ್ದೇವೆ. ಒಂದು ಪಕ್ಷವಾಗಿ ಕೆಲಸ ಮಾಡುತ್ತೇವೆ’ ಎಂದು ಹೇಳಿದರು.

ಭಾನುವಾರ ಸಂಜೆ ಯಾತ್ರೆ ರಾಜಸ್ಥಾನ ಪ್ರವೇಶಿಸಿತು

‘ಹೊಗಳಿಕೆಯಿಂದ ವೈಯಕ್ತಿಕ ದಾಳಿಗೆ’ ವಿಡಿಯೊ ಹಂಚಿಕೊಂಡ ರಾಹುಲ್

ನವದೆಹಲಿ (ಪಿಟಿಐ): ತಾವು ರಾಜಕೀಯ ಪ್ರವೇಶಿಸಿದ ಆರಂಭಿಕ ವರ್ಷದಲ್ಲಿ ತಮ್ಮನ್ನು ಹೊಗಳುತ್ತಿದ್ದ ಮಾಧ್ಯಮಗಳು ಈಗ ಅದನ್ನೇ ವೈಯಕ್ತಿಕ ದಾಳಿಯಾಗಿ ಬದಲಾಯಿಸಿಕೊಂಡಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಅಲ್ಲದೆ ತಮ್ಮನ್ನು ಮಾಧ್ಯಮಗಳು ಬಿಂಬಿಸಿರುವ ಕುರಿತು ಸತ್ಯ ಹೇಳಿರುವುದಾಗಿ ಭಾನುವಾರ ಸಾಮಾಜಿಕ ಜಾಲತಾಣದಲ್ಲಿ 2.15ನಿಮಿಷದ ವಿಡಿಯೊಹಂಚಿಕೊಂಡಿದ್ದಾರೆ.

‘ಮಾಧ್ಯಮದಲ್ಲಿ ನನ್ನ ಚಿತ್ರಣದ ನಿಜವಾದ ಸತ್ಯ‘ ಎಂಬ ವಿಡಿಯೊದಲ್ಲಿ ರಾಹುಲ್ ಅವರು, ನನ್ನ ವ್ಯಕ್ತಿತ್ವ ನಾಶಪಡಿಸುವುದಕ್ಕಾಗಿ ಕೆಲ ವರ್ಷಗಳಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ವ್ಯಯಿಸಲಾಗಿದೆ. 2004ರಲ್ಲಿ ರಾಜಕೀಯ ಪ್ರವೇಶಿಸಿದೆ. 2008–09ರ ವರೆಗೆ ದೇಶದಾದ್ಯಂತದ ಎಲ್ಲ ಮಾಧ್ಯಮಗಳು 24 ಗಂಟೆ ನನ್ನನ್ನು ಹೊಗಳುತ್ತಿದ್ದವು. ನಾನು ನಿಯಮಗಿರಿ ಮತ್ತು ಭಟ್ಟ ಪರ್ಸಾಲ್ (ಭೂಸ್ವಾಧೀನ ವಿಷಯ) ವಿಷಯ ಪ್ರಸ್ತಾಪಿಸಿ, ಬಡವರ ಹಕ್ಕು ರಕ್ಷಣೆಗೆ ಕಾರ್ಯೋನ್ಮುಖನಾಗುತ್ತಿದ್ದಂತೆ ಮಾಧ್ಯಮದಲ್ಲಿ ನನ್ನನ್ನು ಲೇವಡಿ ಮಾಡಲು ಆರಂಭಿಸಿದವು ಎಂದೂ ರಾಹುಲ್ ಗಾಂಧಿ ಅವರು ಆರೋಪಿಸಿದ್ದಾರೆ.

‘ನನ್ನ ವ್ಯಕ್ತಿತ್ವ ನಾಶಕ್ಕೆ ಅವರು ಮಾಡುವ ಕ್ರಿಯೆ ಎಲ್ಲವೂ ನನಗೆ ಶಕ್ತಿ ತುಂಬುತ್ತವೆ. ಏಕೆಂದರೆ ಸತ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ. ದೊಡ್ಡ ಶಕ್ತಿಯ ವಿರುದ್ಧ ಹೋರಾಡಲು ಅಡಿ ಇಟ್ಟಾಗ ವೈಯಕ್ತಿಕ ದಾಳಿ ನಡೆಯುತ್ತದೆ. ಅಂದರೆ ನಾನು ಸರಿಯಾದುದ್ದನ್ನೇ ಮಾಡುತ್ತಿದ್ದೇನೆ ಎಂದರ್ಥ’ ಎಂದಿದ್ದಾರೆ.

12 ಚೀತಾಗಳ ಆಗಮನ ಇನ್ನಷ್ಟು ವಿಳಂಬ

ಏರ್ಪಡದ ಒಡಂಬಡಿಕೆ: ‘ಕ್ವಾರಂಟೈನ್’ನಲ್ಲಿ ವನ್ಯಜೀವಿಗಳು

ಭೋಪಾಲ್ (ಪಿಟಿಐ): ಭಾರತಕ್ಕೆ ಕರೆತರಬೇಕಾಗಿದ್ದ 12 ಚೀತಾಗಳು ನಾಲ್ಕು ತಿಂಗಳಿನಿಂದ ದಕ್ಷಿಣ ಆಫ್ರಿಕಾದಲ್ಲಿಯೇ ‘ಕ್ವಾರಂಟೈನ್’ನಲ್ಲಿವೆ. ಇದರಿಂದ ಅವುಗಳ ದೈಹಿಕ ಸಾಮರ್ಥ್ಯದಲ್ಲಿಯೂ ವ್ಯತ್ಯಾಸವಾಗಿದೆ.

ದಕ್ಷಿಣ ಆಫ್ರಿಕಾದಿಂದ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಇವುಗಳನ್ನು ಸ್ಥಳಾಂತರಿಸಲು ಒಪ್ಪಂದ ಏರ್ಪಡುವುದು ವಿಳಂಬವಾಗಿರುವುದರಿಂದ ಈ ಚೀತಾಗಳು ಕ್ವಾರಂಟೈನ್‌ನಲ್ಲಿವೆ.

ಜುಲೈ 15ರಿಂದ ಇವು ಬಂಧನದಲ್ಲಿದ್ದು, ಮಾಂಸಕ್ಕಾಗಿ ಸ್ವತಃ ಬೇಟೆಯಾಡದ ಕಾರಣ ದೈಹಿಕ ಸಾಮರ್ಥ್ಯ ಕುಗ್ಗಿದೆ. ಒಂದೇ ಕಡೆ ಜಡವಾಗಿದ್ದಲ್ಲಿ ಮನುಷ್ಯರಂತೆ ಇವೂ ತೂಕ ಪಡೆದುಕೊಳ್ಳುತ್ತವೆ ಎನ್ನುತ್ತಾರೆ ಪರಿಣತರು.

ಸುದೀರ್ಘ ಕಾಲ ಬಂಧನದಲ್ಲಿರುವುದು ಚೀತಾಗಳ ದೇಹಸಾಮರ್ಥ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ನಮೀಬಿಯಾದಿಂದ ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಕರೆತರಲಾಗಿರುವ 8 ಚೀತಾಗಳ ಜೊತೆಗೆ ದಕ್ಷಿಣ ಆಫ್ರಿಕಾದ ಈ 12 ಚೀತಾಗಳು ಸೇರಿಕೊಳ್ಳಬೇಕಾಗಿದೆ.

ಭಾರತಕ್ಕೆ ಸ್ಥಳಾಂತರಿಸಲು ಉದ್ದೇಶಿಸಿರುವ 12 ಚೀತಾಗಳಲ್ಲಿ ಐದು ಹೆಣ್ಣು ಚೀತಾಗಳಿವೆ. ಮೂರನ್ನು ದಕ್ಷಿಣ ಆಫ್ರಿಕಾದ ಕ್ವಾಜುಲು ನಟಲ್ ಪ್ರಾಂತ್ಯ, ಉಳಿದ ಒಂಭತ್ತನ್ನು ಲಿಂಪೊಪೊ ಪ್ರಾಂತ್ಯದಲ್ಲಿ ಸೆರೆಯಲ್ಲಿಡಲಾಗಿದೆ.

’ಚೀತಾಗಳ ಸ್ಥಳಾಂತರ ಯೋಜನೆ ಕುರಿತಂತೆ ಎಲ್ಲವೂ ಸಕಾರಾತ್ಮಕವಾಗಿವೆ. ಕುನೊ ಉದ್ಯಾನದಲ್ಲಿ ಆಗಿರುವ ಸಿದ್ಧತೆಗಳನ್ನು ಕುರಿತು ಭೇಟಿ ನೀಡಿದ್ದ ದಕ್ಷಿಣ ಆಫ್ರಿಕಾದ ನಿಯೋಗ ತೃಪ್ತಿ ವ್ಯಕ್ತಪಡಿಸಿದೆ. ಭಾರತ–ದಕ್ಷಿಣ ಆಫ್ರಿಕಾ ನಡುವೆ ಮಾಸಾಂತ್ಯದೊಳಗೆ ಒಡಂಬಡಿಕೆ ಏರ್ಪಡುವ ಸಂಭವವಿದೆ’ ಎನ್ನುತ್ತಾರೆ ಪರಿಣತರು.

ಚೀತಾಗಳನ್ನು ಬರಮಾಡಿಕೊಳ್ಳಲು ನಾವು ಸಿದ್ಧವಿದ್ದು, ಶೀಘ್ರ ಒಡಂಬಡಿಕೆ ಏರ್ಪಡುವ ನಿರೀಕ್ಷೆಯಿದೆ ಎಂದು ಮಧ್ಯಪ್ರದೇಶದ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಜೆ.ಎಸ್. ಚೌಹಾಣ್ ಪ್ರತಿಕ್ರಿಯಿಸಿದರು.

ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ಬಿ.ಎಸ್ಸಿ ಮುಗಿದಿದೆ. ಈಗ, ಎಂಸಿಎ ಮಾಡಬೇಕಾದರೆ ಹೇಗೆ ಸಿದ್ಧತೆ ಮಾಡಬೇಕು? ಮಾಹಿತಿ ಕೊಡಿ.

ಹರಿಪ್ರಸಾದ್, ಹಾಸನ.

ನೀವು ಪಿಯುಸಿ/ಪದವಿಯಲ್ಲಿ ಗಣಿತವನ್ನು ಓದಿ, ಕನಿಷ್ಠ ಶೇ 50 ಅಂಕ ಗಳಿಸಿದ್ದರೆ, ಎಂಸಿಎ ಮಾಡಿ ಸಾಫ್ಟ್‌ವೇರ್ ವೃತ್ತಿಯನ್ನು ಅರಸಬಹುದು. ಈಗ, ಎಂಸಿಎ ಎರಡು ವರ್ಷದ ಕೋರ್ಸ್ ಆಗಿರುತ್ತದೆ. ಮೊದಲಿಗೆ, ನೀವು ಯಾವ ವಿಶ್ವವಿದ್ಯಾಲಯದಲ್ಲಿ ಎಂಸಿಎ ಮಾಡಬೇಕೆಂದು ನಿರ್ಧರಿಸಿ. ಅದಕ್ಕೆ ಅನುಗುಣವಾಗುವ ಪ್ರವೇಶ ಪರೀಕ್ಷೆಯ ಮಾದರಿಯನ್ನು ಅರ್ಥಮಾಡಿಕೊಂಡು, ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನದಲ್ಲಿಟ್ಟುಕೊಂಡು, ಸೂಕ್ತ ಕಾರ್ಯತಂತ್ರವನ್ನು ರೂಪಿಸಿ. ಈ ಪರೀಕ್ಷೆಗಳಲ್ಲಿ ಯಶಸ್ವಿಯಾಗಲು ಗಣಿತ, ಸಂಖ್ಯಾಶಾಸ್ತ್ರ ಮತ್ತು ಕಂಪ್ಯೂಟರ್ ಸಿದ್ಧಾಂತಗಳ ಬಗ್ಗೆ ಪರಿಣತಿಯಿರಬೇಕು. ಅಗತ್ಯ ಪುಸ್ತಕಗಳನ್ನು ಖರೀದಿಸಿ, ಸ್ವತಂತ್ರವಾಗಿ ತಯಾರಾಗಬಹುದು ಅಥವಾ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಕೋಚಿಂಗ್ ಇನ್‌ಸ್ಟಿಟ್ಯೂಟ್ ಸೇರಬಹುದು. ಪರಿಣಾಮಕಾರಿ ಓದುವಿಕೆಯ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: **https://www.youtube.com/watch?v=3PzmKRaJHmk**

2. ಎಂಜಿನಿಯರಿಂಗ್ ಕೋರ್ಸ್‌ನಲ್ಲಿ ಯಾವುದು ಉತ್ತಮ? ಸಿಎಸ್‌ಇ ಅಥವಾ ಐಎಸ್‌ಇ?

ಹೆಸರು, ಊರು ತಿಳಿಸಿಲ್ಲ.

ಸಿಎಸ್‌ಇ (ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್) ಮತ್ತು ಐಎಸ್‌ಇ (ಇನ್‌ಫರ್ಮೇಷನ್ ಸೈನ್ಸ್ ಎಂಜಿನಿಯರಿಂಗ್) ಎರಡೂ ವಿಭಾಗಗಳಲ್ಲಿ ಸಾಫ್ಟ್‌ವೇರ್ ಕಲಿಕೆಯಾಗುತ್ತದೆ. ಹಾಗಾಗಿ, ಎರಡೂ ವಿಭಾಗಗಳು ಬೇಡಿಕೆಯಲ್ಲಿವೆ. ಸಿಎಸ್‌ಇ ವಿಭಾಗದಲ್ಲಿ ಸಾಫ್ಟ್‌ವೇರ್ ಜೊತೆಗೆ ಹಾರ್ಡ್‌ವೇರ್ ಕಲಿಕೆಯೂ ಆಗುವುದರಿಂದ, ಸಿಎಸ್‌ಇ ವಿಭಾಗಕ್ಕೆ ವಿದ್ಯಾರ್ಥಿಗಳು ಹೆಚ್ಚಿನ ಒಲವನ್ನು ತೋರಿಸುತ್ತಿದ್ದಾರೆ.

3. ನಾನು ಪ್ರಥಮ ವರ್ಷದ ಬಿಸಿಎ ಕಲಿಯುತ್ತಿದ್ದು, ಕೆಲವೊಂದು ಸರ್ಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ದ್ದೇನೆ. ಹಾಗಾಗಿ, ಕಾಲೇಜಿನ ಕಲಿಕೆಯ ಜೊತೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯಾವ ರೀತಿ ತಯಾರಿ ನಡೆಸಬೇಕೆಂದು ಮಾಹಿತಿ ನೀಡಿ, ಸರ್

ಅರುಣ್, ಮಂಗಳೂರು

ಉತ್ಸಾಹಭರಿತ ಮನಸ್ಸು, ಗುರಿ ಸೇರುವ ಸಂಕಲ್ಪ, ನಿಮ್ಮ ಸಾಮರ್ಥ್ಯದಲ್ಲಿ ಅಚಲವಾದ ಆತ್ಮವಿಶ್ವಾಸ ಮತ್ತು ಪರಿಣಾಮಕಾರಿ ಕಾರ್ಯತಂತ್ರವಿದ್ದರೆ, ನಿಮ್ಮನ್ನು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯ ಯಶಸ್ಸಿನತ್ತ ಕೊಂಡೊಯ್ಯುತ್ತದೆ. ಜೊತೆಗೆ, ಈ ಸಲಹೆಗಳನ್ನು ಅನುಸರಿಸಿ.

- ಪರೀಕ್ಷೆಯ ಮಾದರಿ, ಪಠ್ಯಕ್ರಮ ಇತ್ಯಾದಿಗಳನ್ನು ಗಮನಿಸಿ.
- ಪರೀಕ್ಷೆಯಲ್ಲಿ ಅಪೇಕ್ಷಿತ ಶೇಕಡಾವಾರು ಗುರಿಯನ್ನು ನಿರ್ಧರಿಸಿ.
- ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ತಿಳಿದು ಸೂಕ್ತವಾದ ಕಾರ್ಯತಂತ್ರವನ್ನು ರೂಪಿಸಿ.
- ಅಣಕು ಪರೀಕ್ಷೆಗಳನ್ನು ಪ್ರತ್ಯೇಕವಾಗಿ ಮತ್ತು ಸಹಪಾಠಿಗಳೊಡನೆ ಅಭ್ಯಾಸ ಮಾಡಿ.
- ಪ್ರಶ್ನೆಪತ್ರಿಕೆಯಲ್ಲಿನ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿ.
- ಪ್ರಶ್ನೆಗಳನ್ನು ಉತ್ತರಿಸುವಾಗ ವೇಗ ಮತ್ತು ನಿಖರತೆ ಯಲ್ಲಿ ಸಮತೋಲನವಿರಲಿ.
- ತಪ್ಪುದಾರಿಗೆಳೆಯಬಹುದಾದ ತಂತ್ರಗಾರಿಕೆಯ ಪ್ರಶ್ನೆಗಳ ಬಗ್ಗೆ ಎಚ್ಚರವಿರಲಿ.
- ಪರೀಕ್ಷೆಯ ದಿನದಂದು ಆದಷ್ಟು ಶಾಂತಚಿತ್ತದಿಂದಿರುವುದರಿಂದ ಒತ್ತಡ ಕಡಿಮೆಯಾಗಿ, ಫಲಿತಾಂಶ ಉತ್ತಮವಾಗುತ್ತದೆ.
- ನಿಮ್ಮ ಆಸಕ್ತಿ, ಅಭಿರುಚಿ ಕುರಿತ ಪ್ರಶ್ನೆಗಳನ್ನು ಪ್ರಾಮಾಣಿಕವಾಗಿಉತ್ತರಿಸಿ.
- ತಿಳಿಯದ ಬಹು ಆಯ್ಕೆ ಪ್ರಶ್ನೆಗಳನ್ನು ಉತ್ತರಿಸುವಾಗ, ಖಚಿತವಾದ ತಪ್ಪು ಆಯ್ಕೆಗಳನ್ನು ತೆಗೆದುಹಾಕಿ ಜಾಣತನದಿಂದ ಊಹಿಸಿ.

ಈಗ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿಯೂ ಬರೆಯಬಹುದು. ಕಾರ್ಯತಂತ್ರಗಳನ್ನು ರೂಪಿಸುವ ಮಾರ್ಗದರ್ಶನಕ್ಕಾಗಿ ಗಮನಿಸಿ: **http://www.vpradeepkumar.com/how-to-succeed-in-entrance-exams/**

4. ಬಿಇ (ಮೆಕ್ಯಾನಿಕಲ್ ಎಂಜಿನಿಯರಿಂಗ್) ಮುಗಿಸಿದ್ದೇನೆ. ಬಿ.ಇಡಿ ಮಾಡಿ ಶಿಕ್ಷಕ ವೃತ್ತಿಯನ್ನು ಅರಸಬೇಕೆಂದಿದ್ದೇನೆ. ಇದಕ್ಕೆ, ಮತ್ತೆ ಬಿಎ ಮಾಡುವ ಅಗತ್ಯವಿದೆಯೇ?

ಊರು, ಹೆಸರು ತಿಳಿಸಿಲ್ಲ.

ಎಂಜಿನಿಯರಿಂಗ್ ಪದವೀಧರರು ಬಿ.ಇಡಿ ಮಾಡುವ ಅಗತ್ಯವಿಲ್ಲದೆ ಕರ್ನಾಟಕ ಸರ್ಕಾರದ ಟಿಇಟಿ ಪರೀಕ್ಷೆಯ ಮುಖಾಂತರ ಶಾಲೆಗಳಲ್ಲಿ ವಿಜ್ಞಾನ ಮತ್ತು ಗಣಿತದ ವಿಷಯಗಳನ್ನು ಬೋಧಿಸುವ ವ್ಯವಸ್ಥೆ ಈಗ ಜಾರಿಯಾಗುತ್ತಿದೆ. ಅನ್ಯ ವಿಷಯಗಳನ್ನು ಬೋಧಿಸುವ ಆಸಕ್ತಿಯಿದ್ದರೆ, ಆ ವಿಷಯಗಳನ್ನು ಪದವಿಯಲ್ಲಿ ಓದಿರಬೇಕು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: **https://www.schooleducation.kar.nic.in/index.html**

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ
https://www.prajavani.net/education-career

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕ್ರೆಡಿಟ್ ಸ್ವಿಸ್ ಸ್ಕಾಲರ್‌ಷಿಪ್ 2022

ಎಂಬಿಎ/ಎಂಎ(ಅರ್ಥಶಾಸ್ತ್ರ) ಪದವಿಗೆ ದಾಖಲಾಗಿರುವ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲ ನೀಡುವುದಕ್ಕಾಗಿ 'ಕ್ರೆಡಿಟ್ ಸ್ವಿಸ್ ಸ್ಕಾಲರ್‌ಷಿಪ್ 2022' ವಿದ್ಯಾರ್ಥಿ ವೇತನ ಕಾರ್ಯಕ್ರಮ ರೂಪಿಸಲಾಗಿದೆ. ಈ ಸಂಬಂಧ ಆಸಕ್ತ ವಿದ್ಯಾರ್ಥಿಗಳಿಂದ 'ಬಡ್ಡಿ4ಸ್ಟಡಿ' ಸಂಸ್ಥೆಯು ಅರ್ಜಿಗಳನ್ನು ಆಹ್ವಾನಿಸಿದೆ.

- **ಅರ್ಹತೆ:** ಅರ್ಜಿದಾರ ವಿದ್ಯಾರ್ಥಿಗಳು ಎಂಬಿಎ ಅಥವಾ ಎಂಎ ನಲ್ಲಿ ಅರ್ಥಶಾಸ್ತ್ರ ಕೋರ್ಸ್‌ಗೆ ದಾಖಲಾಗಿರಬೇಕು. 12ನೇ ತರಗತಿಯಲ್ಲಿ ಶೇ 60 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ ₹5 ಲಕ್ಷ ಮೀರಿರಬಾರದು(ಬಡ್ಡಿ4ಸ್ಟಡಿ ಮೂಲಕ ಪರಿಶೀಲನೆಗೆ ಒಳಪಟ್ಟಿರುತ್ತದೆ).
- **ಆರ್ಥಿಕ ನೆರವು:** ಒಟ್ಟು ಶುಲ್ಕದ ಶೇ 80ವರೆಗೆ ಅಥವಾ ₹ 2 ಲಕ್ಷ , ಯಾವುದು ಕಡಿಮೆಯೋ ಅದು.
- **ಅರ್ಜಿ ಸಲ್ಲಿಸಲು ಕೊನೆ ದಿನ:** ಡಿ.24, 2022
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್
- **ಹೆಚ್ಚಿನ ಮಾಹಿತಿಗೆ:** www.b4s.in/praja/CSE4

ಕೀಪ್ ಇಂಡಿಯಾ ಸ್ಮೈಲಿಂಗ್ ಸ್ಕಾಲರ್‌ಷಿಪ್ ಪ್ರೋಗ್ರಾಮ್

ಹತ್ತನೇ ತರಗತಿ ಅಥವಾ ಪಿಯುಸಿ ನಂತರ ಶಿಕ್ಷಣ ಮುಂದುವರಿಸಲು ಹಣಕಾಸಿನ ಮುಗ್ಗಟ್ಟು ಎದುರಿಸುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲು ಕೋಲ್ಗೇಟ್-ಪಾಮೋಲಿವ್(ಇಂಡಿಯಾ) ಕಂಪನಿ ಮುಂದಾಗಿದೆ. ಈ ಸಂಬಂಧ ಕೀಪ್ ಇಂಡಿಯಾ ಸ್ಮೈಲಿಂಗ್ ಫೌಂಡೇಷನ್ ಸ್ಕಾಲರ್‌ಷಿಪ್ ಪ್ರೋಗ್ರಾಂ ರೂಪಿಸಿದೆ. ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

- **ಅರ್ಹತೆ:** ಎಸ್ಸೆಸ್ಸೆಲ್ಸಿಯಲ್ಲಿ ಶೇ 75 ಅಂಕಗಳೊಂದಿಗೆ ಅಥವಾ ಪಿಯುಸಿಯಲ್ಲಿ 12ನೇ ತರಗತಿಯಲ್ಲಿ ಶೇ 60 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಪದವಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಪದವಿ ಮತ್ತು ನಾಲ್ಕು ವರ್ಷದ ವೃತ್ತಿಪರ ಕೋರ್ಸ್‌ಗಳಿಗೆ(ಎಂಜಿನಿಯರಿಂಗ್/ಎಂಬಿಬಿಎಸ್/ಬಿಡಿಎಸ್ ಡೆಂಟಲ್) ದಾಖಲಾಗುವವರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹5 ಲಕ್ಷಗಳಿಗಿಂತ ಕಡಿಮೆಯಿರಬೇಕು.
- **ಆರ್ಥಿಕ ಸಹಾಯ:** ವರ್ಷಕ್ಕೆ ₹50 ಸಾವಿರದಂತೆ 4 ವರ್ಷ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 31-12-2022
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/KISF6

ಕೃಪೆ: buddy4study.com

ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಭೌತಶಾಸ್ತ್ರ

9) ಯಾವುದೇ ದ್ವಿಧ್ರುವದ ವಿದ್ಯುತ್ ಮತ್ತು ಬಿಂದು ಆವೇಶದ ವಿದ್ಯುತ್ ವಿಭವದ ತುಲನಾತ್ಮಕ ಮಹತ್ವಪೂರ್ಣ ಲಕ್ಷಣ ಸಮೀಕರಣಗಳಿಂದ ಏನು ಸ್ಪಷ್ಟವಾಗುತ್ತದೆ?

ಉತ್ತರ:- ಯಾವುದೇ ದ್ವಿಧ್ರುವದ ವಿದ್ಯುತ್ ಮತ್ತು ಬಿಂದು ಆವೇಶದ ವಿದ್ಯುತ್ ವಿಭವದ ತುಲನಾತ್ಮಕ ಮಹತ್ವಪೂರ್ಣ ಲಕ್ಷಣ ಸಮೀಕರಣಗಳಿಂದ ಸ್ಪಷ್ಟವಾಗುವುದೇನೆಂದರೆ:-

(i) ಯಾವುದೇ ವಿದ್ಯುತ್ ದ್ವಿಧ್ರುವದ ಕಾರಣ ಉಂಟಾದ ವಿಭವವು ಕೇವಲ ದೂರ r ನ ಮೇಲೆ ಮಾತ್ರವೇ ಅವಲಂಭಿಸಿರುದಿಲ್ಲ .ಸ್ಥಿತಿ ಸದಿಶ r ಮತ್ತು ದ್ವಿಧ್ರುವ ಭ್ರಾಮಕ ಸದಿಶ Pನ ಮಧ್ಯೆಇರುವ ಕೋನವನ್ನು ಸಹ ಅವಲಂಬಿಸಿರುತ್ತದೆ. (ಅದರೂ ಇದು P ಯ ಅಕ್ಷೀಯ ಸಮ್ಮಿತಿಯಲ್ಲಿರುತ್ತದೆ) ಆದ್ದರಿಂದ 0ವನ್ನು ಸ್ಥಿರವಾಗಿಟ್ಟುಕೊಂಡು ಸ್ಥಾನ ಸದಿಶ ಡಿನ್ನು Pಯ ಸುತ್ತ ತಿರುಗಿಸಿದಾಗ ಬಿಂದು Pನಿಂದ ಉಂಟಾದ ಶಂಖು ಆಕೃತಿಯ ಮೇಲಿನ ಎಲ್ಲಾ ಬಿಂದುವಿನಲ್ಲಿ ಬಿಂದು Pನಲ್ಲಿ ಇರುವಷ್ಟೇ ವಿಭವವು ಇರುತ್ತದೆ.

(ii) ಅಧಿಕ ಅಂತರದಲ್ಲಿರುವ ವಿದ್ಯುತ್ ದ್ವಿಧ್ರುವದ ಕಾರಣ ವಿಭವ $1/r^2$ ನ ಅನುಪಾತದಲ್ಲಿ ಕಡಿಮೆಯಾಗುತ್ತದೆ 1/rನ ಅನುಪಾತದಲ್ಲಿ ಇದು ಬಿಂದು ಆವೇಶದ ಕಾರಣ ಉಂಟಾದ ವಿಭವದ ಒಂದು ಲಕ್ಷಣವಾಗಿದೆ.

10) ಒಂದು ವಿದ್ಯುತ್ ಟೋಸ್ಟರ್ ಅದರ ಶಾಖದ ಘಟಕದಲ್ಲಿ ನಿಕ್ರೋಮ್ ಉಪಯೋಗಿಸುತ್ತದೆ. ಒಂದು ನಿರ್ಲಕ್ಷಿಸಬಹುದಾದ ಸಣ್ಣ ಪ್ರಮಾಣದ ವಿದ್ಯುತ್ ಅದರಲ್ಲಿ ಹರಿದಾಗ ಕೊಠಡಿಯ ತಾಪಮಾನದಲ್ಲಿ (27.0^0 c ಅದರ ರೋಧವು 75.3 Ωಆಗಿ ಕಂಡುಬರುತ್ತದೆ. ಟೋಸ್ಟರ್‌ನ್ನು ಒಂದು 230V ಮೂಲಕ್ಕೆ ಜೋಡಿಸಿದಾಗ ಕೆಲವು ಕ್ಷಣಗಳ ನಂತರ ಪ್ರವಾಹವು ಒಂದು ಸ್ಥಿಮಿತ ಮೌಲ್ಯ 2.68A ನಿಲ್ಲುತ್ತದೆ. ಹಾಗಾದರೆ ನೈಕ್ರೋಮ್ ಘಟಕದ ಸ್ಥಿರ ಉಷ್ಣಾಂಶ ಎಷ್ಟು? (ಒಳಪಡುವ ಉಷ್ಣಾಂಶದ ಶ್ರೇಣಿಯಲ್ಲಿ ನೈಕ್ರೋಮ್‌ನ ಸರಾಸರಿ ಉಷ್ಣತಾ ಗುಣಾಂಕ $1.70 \times 10^{-4}\ ^0c^{-1}$.)

ಪರಿಹಾರ : ತಂತಿಯಲ್ಲಿ ಪ್ರವಾಹದ ಪ್ರಮಾಣ ಕಡಿಮೆಯಿದ್ದಾಗ, ಶಾಖದ ಪರಿಣಾಮಗಳನ್ನು ನಿರ್ಲಕ್ಷಿಸಬಹುದು ಮತ್ತು ತಂತಿಯ ಉಷ್ಣಾಂಶ T_1 ಕೊಠಡಿಯ ಉಷ್ಣಾಂಶಕ್ಕೆ ಸಮವಾಗಿರುತ್ತದೆ. ಮೂಲಕ್ಕೆ ಟೋಸ್ಟರ್‌ನ್ನು ಜೋಡಿಸಿದಾಗ ಅದರಲ್ಲಿನ ಪ್ರಾರಂಭಿಕ ಪ್ರವಾಹವು ಅದರ ಸ್ಥಿರ ಮೌಲ್ಯವಾದ 2.68A ಗಿಂತ ಸ್ವಲ್ಪ ಹೆಚ್ಚಾಗಿರುತ್ತದೆ. ಆದರೆ ಪ್ರವಾಹ ಶಾಖ ಪರಿಣಾಮದಿಂದ ಉಷ್ಣಾಂಶ ಹೆಚ್ಚುತ್ತದೆ. ಇದರಿಂದ ರೋಧದ ಹೆಚ್ಚಳ ಮತ್ತು ಪ್ರವಾಹವು ಸಣ್ಣ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ಕೆಲವು ಕ್ಷಣಗಳಲ್ಲಿ ಉಷ್ಣಾಂಶ ಇನ್ನೂ ಹೆಚ್ಚಾಗದ ಒಂದು ಸ್ಥಿಮಿತ ಸ್ಥಿತಿಯನ್ನು ತಲುಪುತ್ತದೆ. ತಂತಿಯ ರೋಧ ಮತ್ತು ಎಳೆಯಲ್ಪಡುವ ವಿದ್ಯುತ್ ಪ್ರವಾಹವು ಸ್ಥಿಮಿತ ಮೌಲ್ಯ ತಲುಪುತ್ತದೆ ಸ್ಥಿಮಿತ ಉಷ್ಣಾಂಶ T_2 ದಲ್ಲಿ ರೋಧ R_2

$$R_2 = \frac{230\,V}{2.68\,A} = 85.8\,\Omega$$

ಸಂಬಂಧವನ್ನು $R_2 = R_1 [1 + \alpha (T_2 - T_1)]$ ಉಪಯೋಗಿಸಿಕೊಂಡು

ಇದರಲ್ಲಿ $\alpha = 1.70 \times 10^{-4}\ ^\circ C^{-1}$

$$T_2 - T_1 = \frac{(85.8 - 75.3)}{(75.3) \times 1.70 \times 10^{-4}} = 820\ ^\circ C$$

ಅಂದರೆ $T_2 = (820 + 27.0)\ ^\circ C = 847\ ^\circ C$

ಆದುದರಿಂದ ಶಾಖದ ತಂತಿಯ ಸ್ಥಿಮಿತ ಉಷ್ಣಾಂಶ 847^0C ಅಗಿರುತ್ತದೆ. (ಪ್ರವಾಹದಿಂದಾಗುವ ಶಾಖದ ಪರಿಣಾಮ ಪರಿಸರಕ್ಕಾಗುವ ಶಾಖದ ನಷ್ಟಕ್ಕೆ ಸಮವಾಗಿದ್ದಾಗ).

11) ಅರೋರಾ ಬೊರಿಯಾಲಿಸ್ ಬಗ್ಗೆ ಬರೆಯಿರಿ.

ಉತ್ತರ:- ಸೌರಜ್ವಾಲೆಗಳ ಉಂಟಾದಾಗ, ದೊಡ್ಡ ಪ್ರಮಾಣದಲ್ಲಿ ಎಲೆಕ್ಟ್ರಾನ್ ಮತ್ತು ಪ್ರೋಟಾನ್‌ಗಳು ಸೂರ್ಯನಿಂದ ಹೊರಹಾಕಲ್ಪಡುತ್ತವೆ. ಕೆಲವೊಂದು ಭೂಮಿಯ ಕಾಂತಕ್ಷೇತ್ರದಲ್ಲಿ ಸಿಕ್ಕಿಬಿದ್ದು, ಕ್ಷೇತ್ರ ರೇಖೆಗಳೊಂದಿಗೆ ಸುರುಳಿಯ ಪಥದಲ್ಲಿ ಚಲಿಸುತ್ತವೆ. ಭೂಮಿಯ ಕಾಂತೀಯ ಧ್ರುವಗಳ ಸಮೀಪ ಕ್ಷೇತ್ರ ರೇಖೆಗಳು ಪರಸ್ಪರ ಹತ್ತಿರ ಬರುತ್ತವೆ. ಆದ್ದರಿಂದ ಧ್ರುವಗಳಲ್ಲಿ ಆವೇಶಗಳ ಸಾಂದ್ರತೆ ಹೆಚ್ಚುತ್ತದೆ. ಈ ಕಣಗಳು ವಾತಾವರಣದಲ್ಲಿರುವ ಪರಮಾಣುಗಳು ಮತ್ತ ಅಣುಗಳೊಂದಿಗೆ ಡಿಕ್ಕಿ ಹೊಡೆಯುತ್ತವೆ. ಉದ್ರೇಚಿತ ಆಮ್ಲಜನಕ ಪರಮಾಣುಗಳಿಂದ ಹಸಿರು ಬಣ್ಣ ಮತ್ತು ಉದ್ರೇಚಿತ ಸಾರಜನಕ ಪರಮಾಣುಗಳಿಂದ ಗುಲಾಬಿ ಬಣ್ಣ ಉತ್ಸರ್ಜಿಸಲ್ಪಡುತ್ತದೆ. ಭೌತಶಾಸ್ತ್ರದಲ್ಲಿ ಈ ವಿದ್ಯಮಾನವನ್ನು ಅರೋರಾ ಬೊರಿಯಾಲಿಸ್ ಎನ್ನುತ್ತಾರೆ.

12) ಸೈಕ್ಲೋಟ್ರಾನ್ ಯಂತ್ರದ ಬಗ್ಗೆ ಬರೆಯಿರಿ

ಉತ್ತರ:- ಆವೇಶ ಕಣಗಳಿಗೆ ಅಥವಾ ಅಯಾನುಗಳಿಗೆ ಹೆಚ್ಚಿನ ಶಕ್ತಿಯನ್ನು ಪಡೆಯಲು ವೇಗವನ್ನು ಹೆಚ್ಚಿಸುವ ಯಂತ್ರವನ್ನು ಸೈಕ್ಲೋಟ್ರಾನ್ ಎನ್ನುತ್ತಾರೆ. 1934ರಲ್ಲಿ ಈ. ಓ. ಲಾರೆನ್ಸ್ ಮತ್ತು ಎಂ. ಎಸ್. ಲಿವಿಂಗ್‌ಸ್ಟನ್ ಬೈಜಿಕ ರಚನೆಯನ್ನು ಅಧ್ಯಯನ ಮಾಡಲು ಇದನ್ನು ಕಂಡುಹಿಡಿದರು. ಸೈಕ್ಲೋಟ್ರಾನ್‌ನಲ್ಲಿ ವಿದ್ಯುತ್ ಮತ್ತು ಕಾಂತಕ್ಷೇತ್ರಗಳೆರಡರ ಸಂಯೋಜನೆಯನ್ನು ಬಳಸಿ ಆವೇಶ ಕಣಗಳ ಶಕ್ತಿಯನ್ನು ಹೆಚ್ಚಿಸಲಾಗುತ್ತದೆ. ಕ್ಷೇತ್ರಗಳು ಪರಸ್ಪರ ಲಂಬವಾಗಿರುವುದರಿಂದ ಇವುಗಳನ್ನು ಅಡ್ಡಹಾಯು ಕ್ಷೇತ್ರಗಳು ಎನ್ನುತ್ತಾರೆ. ಆವೇಶ ಕಣದ ಪರಿಭ್ರಮಣೆಯ ಆವೃತ್ತಿಯು, ಅದರ ಶಕ್ತಿಯ ಮೇಲೆ ಅವಲಂಬಿತವಾಗದಿರುವ ಅಂಶವನ್ನು ಸೈಕ್ಲೋಟ್ರಾನ್‌ನಲ್ಲಿ ಬಳಸುತ್ತಾರೆ.

1953ರಲ್ಲಿ ಕೊಲ್ಕತ್ತದ ಸಹಾ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯಾರ್ ಫಿಸಿಕ್ಸ್‌ಲ್ಲಿ, ಡಾ. ಮೇಘನಾಥ್ ಸಹಾ ಇವರ ಕಲ್ಪನೆಯಿಂದಾಗಿ ಸೈಕ್ಲೋಟ್ರಾನ್ ನಿರ್ಮಿಸಲಾಯಿತು. ನಂತರ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ (TIFR), ಮುಂಬೈ, ಅಲಿಗಡ ಮುಸ್ಲಿಂ ಯುನಿವರ್ಸಿಟಿ (AMU), ಅಲಿಗಡ್ಡ್, ಬೋಸ್ ಇನ್‌ಸ್ಟಿಟ್ಯೂಟ್, ಕೊಲ್ಕತ್ತ ಮತ್ತು ಆಂಧ್ರ ಯುನಿವರ್ಸಿಟಿ, ವಾಲ್ಟೈರ್‌ಗಳಲ್ಲಿ ಕಾಕ್ರೋಫ್ಟ್ - ವಾಲ್ಟನ್ ಮಾದರಿಯ ವೇಗೋತ್ಕರ್ಷಕಗಳ ಸರಣಿಯನ್ನು ನಿರ್ಮಿಸಲಾಯಿತು.

ಪ್ರಜಾವಾಣಿ ನೋಡಿಯೊ

ಪಿಯುಸಿ ಗಣಿತವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಮಾದರಿ ಪ್ರಶ್ನೋತ್ತರ–

11) $x^2 + 2x + 1$. ಬಹುಪದೋಕ್ತಿಯ ಶೂನ್ಯವನ್ನು ಕಂಡುಹಿಡಿಯಿರಿ.

ಉತ್ತರ : $f(x) = x^2 + 2x + 1$.

$= X^2 + 1x + 1x + 1$

$= X(x+1) + 1(x+1)$

$= (x+1)(x+1)$

$= (x+1)^2$

$f(x) = 0$ ಆದಾಗ

$(x+1)^2 = 0$

$X + 1 = \sqrt{0}$

$X = 1 = 0$

$X = -1$

$x^2 + 2x + 1$. ಬಹುಪದೋಕ್ತಿಯ ಶೂನ್ಯವು –1 ಆಗಿದೆ.

12) Δ ABC, ದಲ್ಲಿ $\angle ABC = 90^\circ$, $BD \perp AC$. BD = 8 cm ಮತ್ತು AD = 4 cm ಆದಾಗ CD. ಯನ್ನು ಕಂಡಿಹಿಡಿಯಿರಿ.

ಉತ್ತರ :



$\angle ABC = 90^\circ$ $BD \perp AC$.

$\therefore BD^2 = AD \times CD \Rightarrow 8^2 = 4 \times CD$

$CD = \frac{64}{4} = 16$

$\therefore$ CD = 16 cm

13) ಈ ವೃತ್ತದಲ್ಲಿ "0" ಕೇಂದ್ರ PT ಸ್ಪರ್ಶಕ $\angle PTQ = 30^\circ$, ಇದ್ದರೆ $\angle POT$. ಯನ್ನು ಕಂಡುಹಿಡಿಯಿರಿ.



ಉತ್ತರ :

ತ್ರಿಜ್ಯ PT ಸ್ಪರ್ಶಕ

$\therefore \angle OPT = 90^0$

$\angle OPT + \angle PTO + \angle POT = 180^\circ$

$90^0 + 30^0 + \angle POT = 180^0$

$\angle POT = 180^0 - 120^0$

$\therefore \angle POT = 60^0$

14) 7ಸೆಂ/ಮೀ ತ್ರಿಜ್ಯವುಳ್ಳ ಒಂದು ಗೋಳದ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಉತ್ತರ : $= 4 \times \frac{22}{7} \times 7^2 = 22 \times 28 = 616\ cm^2$

III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

15) ಒಂದು ಸಮಾಂತರ ಶ್ರೇಢಿಯ 4ನೇ ಮತ್ತು 8ನೇ ಪದಗಳ ಮೊತ್ತವು 24 ಹಾಗೂ ಅದೇ ಶ್ರೇಢಿಯ 6ನೇ ಮತ್ತು 10ನೇ ಪದಗಳ ಮೊತ್ತವು 44 ಆಗಿದೆ. ಅದರ ಮೊದಲ 3 ಪದಗಳನ್ನು ಕಂಡುಹಿಡಿಯಿರಿ.

ಉತ್ತರ:– ದತ್ತ ಹೇಳಿಕೆಯಂತೆ,

$T_4 + T_8 = 24$ ಮತ್ತು	$T_6 + T_{10} + 44$
$a + 3d + a + 7d = 24$	$a + 5d + a + 9d = 44$
$2a + 10d = 24$	$2a + 14d = 44$
2 ರಿಂದ ಭಾಗಿಸಿದಾಗ	2 ರಿಂದ ಭಾಗಿಸಿದಾಗ
$a + 5d = 12$ .... (1)	$a + 7d = 22$ .... (2)

1 ನ್ನು 2 ರಿಂದ ಕಳೆದಾಗ

$a + 7d = 22$

$\underline{a \pm 5d = 12}$

$2d = 10$

$d = \frac{10}{2} = 5$

2 ರಿಂದ $a + 7d = 22$

$a + 7(5) = 22$

$a + 35 = 22$

$a = 22 - 35$

$a = -13$

$\therefore$ I ಪದ= a = - $\underline{13}$

II ಪದ = a + d = - 13 + 5 = - $\underline{8}$

III ಪದ = a + 2d

- 13 + 2(5) = - 13 + 10 = $\underline{-3}$

16) $5 - \sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.

ಉತ್ತರ : $5 - \sqrt{3}$ = a. ಆಗಿರಲಿ ಇಲ್ಲಿ a. ಒಂದು ಭಾಗಲಬ್ಧ ಸಂಖ್ಯೆಯಾಗಿರಲ್ಲಿ

$5 = a + \sqrt{3}$

ಎರಡು ಕಡೆಯ ವರ್ಗ ಮಾಡಿದಾಗ

$(5)^2 = (a + \sqrt{3})^2$

$25 = a^2 + 3 + 2\sqrt{3}\,.\,a$

$2\sqrt{3}\,a = 25 - a^2 - 3 \Rightarrow 2\sqrt{3}\,a = 22 - a^2$

$25 = a^2 + 3 + 2\sqrt{3}\,.\,a$

$2\sqrt{3}\,a = 25 - a^2 - 3 \Rightarrow 2\sqrt{3}\,a = 22 - a^2$

$\Rightarrow \sqrt{3} = \frac{22 - a^2}{2a}$

ಆದರೆ $\frac{22 - a^2}{2a}$ ಒಂದು ಭಾಗಲಬ್ಧ ಸಂಖ್ಯೆ ಆದರೆ $\sqrt{3}$ ಒಂದು ಅಭಾಗಲಬ್ಧ ಸಂಖ್ಯೆ.

$\therefore 5 - \sqrt{3}$ ಒಂದು ಭಾಗಲಬ್ಧ ಸಂಖ್ಯೆಯಾಗಲು ಸಾಧ್ಯವಿಲ್ಲ.

$\Rightarrow 5 - \sqrt{3}$ ಒಂದು ಅಭಾಗಲಬ್ಧ ಸಂಖ್ಯೆ.

(ಮುಂದುವರಿಯುವುದು.............)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

CMR UNIVERSITY
Private University Established in Karnataka State by Act No. 45 of 2013
BENGALURU
Recognised by UGC
CELEBRATING 30 YEARS
CMRIT
CMR INSTITUTE OF TECHNOLOGY, BENGALURU.
MBA (2 years Full time Programme)
MBA PGCET CODE
B150 (City Campus)
B395 (Main Campus)
Dual Specialization :
Finance, Marketing, HR, Digital Marketing,
Supply Chain Management, and Business Analytics
CMRU EDGE
» Ranked 21st among Emerging B-Schools of India by The Week
» Experiential Learning enabled through industry partnership
» Multiple Centres of Excellence mentored by industry leaders
» Industry integrated contemporary curriculum
» 100% placement assistance
admissions@cmr.edu.in www.cmr.edu.in

CMR INSTITUTE OF TECHNOLOGY
Approved by AICTE | Accredited A++ By NAAC | Permanent affiliation by VTU | Recognized by Govt. of Karnataka
MBA (2 years Full time Programme)
Dual Specialization : Marketing & Finance
Marketing & HR | Finance & HR
» Acquire Sufficient theoretical knowledge and ability to apply these to solve practical problems in business and other organizations/institutions of importance.
» Expert Talks, Industry Visits, Student Clubs, and Certification courses
» Experience overall growth and development through initiatives such as MOOCs, Mentoring, TYL, Mini Projects and 3D Skilling.
» Internships with reputed companies.
Accredited A++ by NAAC
MBA PGCET CODE B151
www.cmrit.ac.in admission@cmrit.ac.in
ADMISSIONS HELPLINE 9342900666

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸಾರ್ವಜನಿಕ ಬದುಕಿನಲ್ಲಿ ತೊಡಗಿರುವ ಪ್ರತಿಯೊಬ್ಬರೂ ಟೀಕೆ, ವಿಮರ್ಶೆ, ತಮಾಷೆಯನ್ನು ಎದುರಿಸಲು ಸಿದ್ಧರಾಗಿರಬೇಕು.

–ಪಿ.ಲಂಕೇಶ್

ಸಾರ್ವತ್ರಿಕ ಲಸಿಕೆ ಕಾರ್ಯಕ್ರಮ ಜಾರಿಯಲ್ಲಿ ಅಸಡ್ಡೆ ಸಲ್ಲದು

ದೇಶದ ವಿವಿಧ ಭಾಗಗಳಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿ ಮಕ್ಕಳಲ್ಲಿ ದಡಾರ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಏರಿಕೆ ವರದಿಯಾಗಿದೆ. ಇದು ಸಾರ್ವಜನಿಕ ಆರೋಗ್ಯಕ್ಕೆ ಬಹುದೊಡ್ಡ ಬೆದರಿಕೆಯಾಗಿ ಮಾರ್ಪಟ್ಟಿದೆ. ಮುಂಬೈ ಮತ್ತು ಅದರ ಉಪನಗರಗಳಲ್ಲಿ ಕೆಲವು ದಿನಗಳಲ್ಲಿ ಭಾರಿ ಸಂಖ್ಯೆಯಲ್ಲಿ ದಡಾರ ಪ್ರಕರಣಗಳು ದೃಢಪಟ್ಟಿವೆ ಮತ್ತು 13 ಮಕ್ಕಳು ಮೃತಪಟ್ಟಿದ್ದಾರೆ. 2021ರಲ್ಲಿ 10 ಪ್ರಕರಣಗಳಷ್ಟೇ ವರದಿಯಾಗಿದ್ದವು ಮತ್ತು ಒಂದು ಮಗು ಸಾವನ್ನಪ್ಪಿತ್ತು. 2020ರಲ್ಲಿ 29 ಪ್ರಕರಣಗಳು ವರದಿಯಾಗಿದ್ದವು ಮತ್ತು ಸಾವು ಸಂಭವಿಸಿಲ್ಲ. 2019ರಲ್ಲಿ 37 ಪ್ರಕರಣಗಳು ದೃಢಪಟ್ಟು ಮೂವರು ಮಕ್ಕಳು ಮೃತಪಟ್ಟಿದ್ದರು. ಗುಜರಾತ್, ಹರಿಯಾಣ, ಬಿಹಾರ, ಜಾರ್ಖಂಡ್ ಮತ್ತು ಕೇರಳದಲ್ಲಿಯೂ ದಡಾರ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಭೌಗೋಳಿಕವಾಗಿ ದೂರ ದೂರದ ಪ್ರದೇಶಗಳಲ್ಲಿ ಸಾಂಕ್ರಾಮಿಕವು ಕಾಣಿಸಿಕೊಂಡಿದೆ ಎಂಬುದನ್ನು ಇದು ತೋರಿಸುತ್ತದೆ. ಜಗತ್ತಿನ ವಿವಿಧ ಭಾಗಗಳಲ್ಲಿ ಕೂಡ ದಡಾರ ಪ್ರಕರಣಗಳು ಹೆಚ್ಚುತ್ತಿವೆ. ಲಸಿಕೆಯ ಕೊರತೆಯೇ ದಡಾರ ಪ್ರಕರಣಗಳು ಹೆಚ್ಚಲು ಕಾರಣ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. 2021ರಲ್ಲಿ ನಾಲ್ಕು ಕೋಟಿಗೂ ಹೆಚ್ಚು ಮಕ್ಕಳಿಗೆ ದಡಾರ ಲಸಿಕೆ ನೀಡಲು ಸಾಧ್ಯವಾಗಿಲ್ಲ. ಕೋವಿಡ್ ಸಾಂಕ್ರಾಮಿಕದಿಂದಾದ ತೊಂದರೆಗಳು ಇದಕ್ಕೆ ಕಾರಣ. ಕಡಿಮೆ ಮತ್ತು ಮಧ್ಯಮ ಆದಾಯದ ಕುಟುಂಬಗಳ ಮಕ್ಕಳು ಹೆಚ್ಚು ಬಾಧಿತವಾಗಿವೆ.

ಸೋಂಕಿತರಿಗೆ ಅತ್ಯುತ್ತಮ ಆರೈಕೆ, ಚಿಕಿತ್ಸೆ ಒದಗಿಸುವುದು ಮತ್ತು ಲಸಿಕೆ ಹಾಕಿಸುವಿಕೆಯನ್ನು ತ್ವರಿತಗೊಳಿಸುವುದು ಈಗ ನಮ್ಮ ಮುಂದೆ ಇರುವ ಅತ್ಯಂತ ಪರಿಣಾಮಕಾರಿ ಕ್ರಮಗಳಾಗಿವೆ

ಕಳೆದ ಎರಡು ವರ್ಷಗಳಲ್ಲಿ, ಆಶಾ ಕಾರ್ಯಕರ್ತೆಯರೂ ಸೇರಿದಂತೆ ಇಡೀ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಕೋವಿಡ್ ವಿರುದ್ಧದ ಹೋರಾಟ ಮತ್ತು ಅಭಿಯಾನದಲ್ಲಿ (?) ತೊಡಗಿಸಿಕೊಳ್ಳಲಾಗಿತ್ತು. ಈ ಪ್ರಕ್ರಿಯೆಯಲ್ಲಿ, ಸಾರ್ವತ್ರಿಕ ಲಸಿಕೆ ಕಾರ್ಯಕ್ರಮಗಳು ಸೊರಗಿದವು. ಲಸಿಕೆ ಹಾಕಿಸುವುದರ ಕುರಿತು ಹಿಂಜರಿಕೆ ಇದ್ದ ಅಡಚಣೆಯು ಮತ್ತೊಂದು ಕಾರಣ ಎನ್ನಲಾಗಿದೆ. ಎಲ್ಲ ಲಸಿಕೆ ಕಾರ್ಯಕ್ರಮಗಳೂ ತೊಂದರೆಗೆ ಒಳಗಾಗಿವೆ. ವಿಶೇಷವಾಗಿ, ಡಿಪಿಟಿ (ಗಂಟಲುಮಾರಿ, ನಾಯಿಕೆಮ್ಮು ಮತ್ತು ಧನುರ್ವಾಯು) ಹಾಗೂ ದಡಾರ ಲಸಿಕೆ ಕಾರ್ಯಕ್ರಮವನ್ನು ನಡೆಸಲು ಹೆಚ್ಚು ಸಮಸ್ಯೆ ಆಗಿತ್ತು. ಈಗ ಸುಧಾರಿಸುವ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆಯಾದರೂ ಸಾಧಿಸಬೇಕಾದುದು ಇನ್ನೂ ಬಹಳಷ್ಟಿದೆ. ದಡಾರ ವೈರಾಣುವು ಅತ್ಯಂತ ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ. ಲಸಿಕೆಯ ಮೂಲಕ ಇದನ್ನು ಸಂಪೂರ್ಣವಾಗಿ ತಡೆಯಬಹುದಾದರೂ ಸಮುದಾಯದಲ್ಲಿ ಇದರ ಹರಡುವಿಕೆ ತಡೆಗೆ ಶೇ 95ರಷ್ಟು ಲಸಿಕೆ ಹಾಕಿಸುವಿಕೆ ಅಗತ್ಯ. ಹಾಗಾಗಿಯೇ ಬಹುತೇಕ ಎಲ್ಲ ಮಕ್ಕಳಿಗೂ ಲಸಿಕೆ ಹಾಕಿಸುವುದು ಅಗತ್ಯ.

ಸೋಂಕಿತರಿಗೆ ಅತ್ಯುತ್ತಮ ಆರೈಕೆ, ಚಿಕಿತ್ಸೆ ಒದಗಿಸುವುದು ಮತ್ತು ಲಸಿಕೆ ಹಾಕಿಸುವಿಕೆಯನ್ನು ತ್ವರಿತಗೊಳಿಸುವುದು ಈಗ ನಮ್ಮ ಮುಂದೆ ಇರುವ ಅತ್ಯಂತ ಪರಿಣಾಮಕಾರಿ ಕ್ರಮಗಳಾಗಿವೆ. ಈಗ ದಡಾರಕ್ಕೆ ಒಳಗಾಗಿರುವ ಮಕ್ಕಳು ಲಸಿಕೆ ಹಾಕಿಸಿಕೊಂಡಿರಲಿಲ್ಲ ಎಂಬುದು ಗಮನಕ್ಕೆ ಬಂದಿದೆ. ದಡಾರ ಪ್ರಕರಣಗಳು ಹೆಚ್ಚಾಗಿ ಕಾಣಿಸಿಕೊಂಡ ಪ್ರದೇಶಗಳಲ್ಲಿ ಲಸಿಕೆ ಹಾಕಿಸಿದ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ ಎಂಬುದನ್ನೂ ಗಮನಿಸಲಾಗಿದೆ. ದಡಾರದಿಂದ ಅತಿ ಹೆಚ್ಚು ಬಾಧಿತವಾದ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಪರಿಣತರ ತಂಡಗಳನ್ನು ಕಳುಹಿಸಿದೆ. ದಡಾರ ಪ್ರಕರಣಗಳು ಹೆಚ್ಚಾಗಿ ಇರುವ ಪ್ರದೇಶಗಳಲ್ಲಿ, 9 ತಿಂಗಳಿಂದ 5 ವರ್ಷದವರೆಗಿನ ಎಲ್ಲ ಮಕ್ಕಳಿಗೆ ಹೆಚ್ಚುವರಿ ಒಂದು ಡೋಸ್ ಲಸಿಕೆ ಹಾಕಿಸುವ ಕುರಿತು ಯೋಚನೆ ಮಾಡುವಂತೆ ರಾಜ್ಯಗಳಿಗೆ ಸಲಹೆ ನೀಡಲಾಗಿದೆ. 9ರಿಂದ 12 ತಿಂಗಳ ಒಳಗೆ ನೀಡುವ ಮೊದಲ ಡೋಸ್ ಮತ್ತು 16–24 ತಿಂಗಳ ಒಳಗೆ ನೀಡುವ ಎರಡನೇ ಡೋಸ್ ಅಲ್ಲದೆ ಹೆಚ್ಚುವರಿ ಮೂರನೇ ಡೋಸ್ ನೀಡಬೇಕು ಎಂದು ಕೇಂದ್ರವು ಸ್ಪಷ್ಟಪಡಿಸಿದೆ. ಈ ಕ್ರಮವನ್ನು ರಾಜ್ಯಗಳು ಕೈಗೊಳ್ಳಬೇಕು ಮತ್ತು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಮರುಸ್ಥಾಪಿಸಬೇಕು ಎಂದು ಕೇಂದ್ರವು ಸೂಚಿಸಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿಯೇ ಇತರ ಲಸಿಕೆ ಕಾರ್ಯಕ್ರಮಗಳು ನಡೆಯುತ್ತಿಲ್ಲ ಎಂಬ ಕಳವಳ ಹಲವು ಬಾರಿ ವ್ಯಕ್ತವಾಗಿತ್ತು. ಈಗ, ಕೋವಿಡ್ ಸಾಂಕ್ರಾಮಿಕ ಸೃಷ್ಟಿಸಿದ ಸಮಸ್ಯೆಗಳಿಂದ ದೇಶವು ಬಹುಪಾಲು ಹೊರಗೆ ಬಂದಿದೆ. ಜನಜೀವನ, ವ್ಯಾಪಾರ–ವಹಿವಾಟು, ಸಂಚಾರ ಎಲ್ಲವೂ ಮರಳಿ ಹಳಿಗೆ ಬಂದಿವೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ಕೋವಿಡ್ ಸಾಂಕ್ರಾಮಿಕ ಉಂಟುಮಾಡಿದ್ದ ಒತ್ತಡವೂ ಕಡಿಮೆಯಾಗಿದೆ. ಹೀಗಾಗಿ, ಸಾರ್ವತ್ರಿಕ ಲಸಿಕೆ ಕಾರ್ಯಕ್ರಮಗಳ ಜಾರಿಯ ವಿಚಾರದಲ್ಲಿ ಇನ್ನೂ ಅಸಡ್ಡೆ ಸಲ್ಲದು.

ದಿನದ ಟ್ವೀಟ್

ವಿವಿಪ್ಯಾಟ್ ಏಕಿಲ್ಲ?

ದೆಹಲಿ ಮಹಾನಗರ ಪಾಲಿಕೆ ಚುನಾವಣೆಯು ವಿವಿಪ್ಯಾಟ್ ಮಷೀನ್ ಇಲ್ಲದೆ ನಡೆದಿದೆ... ರಾಜ್ಯ ಚುನಾವಣಾ ಆಯೋಗವು ಮತಯಂತ್ರಗಳಿಗೆ ವಿವಿಪ್ಯಾಟ್ ಅನ್ನು ಅಳವಡಿಸಲಿಲ್ಲವೇಕೆ? ಮತ ಒತ್ತಿ ಹೊರಡುವ ಹಳೆಯ ವ್ಯವಸ್ಥೆ... ಮತದಾರ ಯಾರಿಗೆ ಮತ ಹಾಕಿದ್ದೇನೆ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ.

ಜೆ.ಗೋಪಿಕೃಷ್ಣನ್, ಪತ್ರಕರ್ತ

ಕಿಡಿನುಡಿ

ಗುಜರಾತ್‌ನಲ್ಲಿ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಆದರೆ ಮತಗಳ ಖರೀದಿಗೆ ಅದೇ ಮದ್ಯವನ್ನು ಬಳಸಲಾಗಿದೆ. ಹಾಗಿದ್ದರೆ ಮದ್ಯ ನಿಷೇಧದಿಂದ ಪ್ರಯೋಜನವೇನು? ವಾಸ್ತವದಲ್ಲಿ, ಮದ್ಯ ನಿಷೇಧ ಎಂಬುದು ಒಂದು ಪ್ರಹಸನವಾಗಿ ಮಾರ್ಪಟ್ಟಿದೆ.

ಸುಧೀರ್ ಸೂರ್ಯವಂಶಿ, ಪತ್ರಕರ್ತ, ವಕೀಲ

25 ವರ್ಷಗಳ ಹಿಂದೆ

ಶುಕ್ರವಾರ, 5-11-1997

● ಫೆಬ್ರುವರಿ, ಮಾರ್ಚ್‌ನಲ್ಲಿ ಚುನಾವಣೆ

ನವದೆಹಲಿ, ಡಿಸೆಂಬರ್ 4– ಹನ್ನೊಂದನೆಯ ಲೋಕಸಭೆಯನ್ನು ರಾಷ್ಟ್ರಪತಿ ಇಂದು ವಿಧ್ಯುಕ್ತವಾಗಿ ವಿಸರ್ಜಿಸಿ ರಾಜಕೀಯ ಅನಿಶ್ಚಿತತೆಗೆ ತೆರೆ ಎಳೆದರು. ಅವಧಿ ಮುಗಿಸಲು ಮೂರೂವರೆ ವರ್ಷ ಕಾಲಾವಕಾಶ ಇದ್ದ ಪ್ರಸಕ್ತ ಲೋಕಸಭೆ ಹಠಾತ್ ಅಂತ್ಯಗೊಂಡ ಕಾರಣ ದೇಶ ಮತ್ತೊಮ್ಮೆ ಮಧ್ಯಂತರ ಚುನಾವಣೆ ಎದುರಿಸಬೇಕಾಗಿದೆ. ಸರ್ಕಾರ ರಚನೆಗೆ ರಾಜಕೀಯ ಪಕ್ಷಗಳು ನಡೆಸಿದ ಎಲ್ಲ ಬಗೆಯ ಕಸರತ್ತುಗಳು ವಿಫಲಗೊಂಡ ನಂತರ ರಾಷ್ಟ್ರಪತಿ ಅನಿವಾರ್ಯವಾಗಿ ಕೈಗೊಂಡ ಈ ನಿರ್ಧಾರದಂತೆ, ಮಾರ್ಚ್ 15ರ ಒಳಗೆ ನೂತನ ಲೋಕಸಭೆಯನ್ನು ಅಸ್ತಿತ್ವಕ್ಕೆ ತರಲು ಚುನಾವಣಾ ಆಯೋಗ ಕ್ರಮ ಆರಂಭಿಸಿದೆ.

ಲೋಕಸಭೆಗೆ ಬರುವ ಫೆಬ್ರುವರಿ ತಿಂಗಳ ಮೂರನೇ ವಾರ ಹಾಗೂ ಮಾರ್ಚ್ ತಿಂಗಳ ಮೊದಲ ವಾರದ ಮಧ್ಯೆ ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯುಕ್ತ ಜಿ.ವಿ.ಜಿ. ಕೃಷ್ಣಮೂರ್ತಿ ಅವರು ಇಂದು ಇಲ್ಲಿ ತಿಳಿಸಿದ್ದಾರೆ.

● ರಂಗ, ಕಾಂಗ್ರೆಸ್ ವಿರುದ್ಧ ಬಿಜೆಪಿ ಆಕ್ರೋಶ

ನವದೆಹಲಿ, ಡಿಸೆಂಬರ್ 4 (ಪಿಟಿಐ)– ಹನ್ನೊಂದನೆಯ ಲೋಕಸಭೆಯ ವಿಸರ್ಜನೆಗೆ ಸಂಯುಕ್ತರಂಗ ಮತ್ತು ಕಾಂಗ್ರೆಸ್ ಪಕ್ಷವೇ ಕಾರಣ ಎಂದು ಭಾರತೀಯ ಜನತಾ ಪಕ್ಷ ದೂರಿದೆ.

ಸಂಯುಕ್ತರಂಗ ಸರ್ಕಾರದ ಆಡಳಿತದಿಂದ ಆರ್ಥಿಕತೆ ಕುಂಠಿತವಾಯಿತು. ಕಾನೂನುರಹಿತ ಪರಿಸ್ಥಿತಿ ಉಂಟಾಯಿತು ಎಂದು ಆರೋಪಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 5-11-1972

● ಪ್ರಧಾನಿ ಹತ್ಯೆ ಯತ್ನದಲ್ಲಿ ಸಿ.ಐ.ಎ. ಕೈವಾಡ ಕುರಿತು ಸರ್ಕಾರಿ ಹೇಳಿಕೆಗೆ ಆಗ್ರಹ

ನವದೆಹಲಿ, ಡಿಸೆಂಬರ್ 4– ಕಳೆದೆರಡು ವರ್ಷಗಳಲ್ಲಿ ಪ್ರಧಾನಿ ಇಂದಿರಾ ಗಾಂಧಿ ಅವರ ಹತ್ಯೆಗೆ ನಡೆದ ಮೂರು–ನಾಲ್ಕು ಯತ್ನಗಳಲ್ಲಿ ಅಮೆರಿಕದ ಕೇಂದ್ರ ಗೂಢಚರ್ಯೆ ಸಂಸ್ಥೆಯ (ಸಿ.ಐ.ಎ) ಕೈವಾಡವಿತ್ತೆಂಬ ಕುವೈತ್ ವರದಿಗಳ ಬಗೆಗೆ ರಾಜ್ಯಸಭೆ ಸದಸ್ಯರು ಇಂದು ತೀವ್ರ ಆತಂಕ ವ್ಯಕ್ತಪಡಿಸಿದರು.

‘ವಿಶ್ವ ತತ್ತರಿಸುವಂತಹ’ ಆ ವರದಿ ಕುರಿತು ಹೇಳಿಕೆ ನೀಡಬೇಕೆಂದು ಎಲ್ಲ ವಿಭಾಗದ ಸದಸ್ಯರೂ ಸರ್ಕಾರವನ್ನು ಒತ್ತಾಯ ಪಡಿಸಿದರು. ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಾಗಿ ಭರವಸೆ ನೀಡಿದ ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಓಂ ಮೆಹ್ತಾ ಅವರು, ವರದಿ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಕ್ಕಾಗಿ ಸದಸ್ಯರನ್ನು ವಂದಿಸಿದರು.

● 5ನೇ ಯೋಜನೆ: ನೀರಾವರಿಗೆ ಆದ್ಯತೆ

ಬೆಂಗಳೂರು, ಡಿಸೆಂಬರ್ 4– ರಾಜ್ಯದ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಲಾಗುವುದೆಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ವಿಧಾನ ಸಭೆಯಲ್ಲಿ ಸ್ಪಷ್ಟಪಡಿಸಿದರು.

ಎಂ.ಎಸ್. ಕೃಷ್ಣನ್ (ಸಿ.ಪಿ.ಐ) ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ರಾಜ್ಯದ ವಿವರವಾದ ಐದನೇ ಪಂಚವಾರ್ಷಿಕ ಯೋಜನೆಯನ್ನು ತಯಾರಿಸುವುದಕ್ಕೆ ಆಧಾರರೂಪವಾಗಿ ಮಾರ್ಗದರ್ಶಕ ಯೋಜನೆಯೊಂದನ್ನು ತಯಾರಿಸಲಾಗಿದೆ ಎಂದರು.

ಕಟ್ಟಿಟ್ಟಷ್ಟೂ ಕಿತ್ತು ಕಳಚಿಕೊಳ್ಳುವ ಹಂಬಲ ಮಕ್ಕಳಲ್ಲಿ ಹೆಚ್ಚು

ಹದಿವಯಸ್ಸು: ಹೊಸಿಲ ಮೇಲಿನ ಬೆಕ್ಕು

ವಿಶ್ಲೇಷಣೆ

ಡಾ. ಎಚ್.ಎಸ್. ಅನುಪಮಾ

ನೆನಪು ಮಾಡಿಕೊಳ್ಳಿ, ಇದೇ ಜುಲೈನಲ್ಲಿ ಕೇರಳದ 13 ವರ್ಷದ ಬಾಲೆಯು ಬಾಲಕನಾದ ತನ್ನ ಅಣ್ಣನಿಂದಲೇ ಗರ್ಭಿಣಿಯಾದಳು. ಗರ್ಭಪಾತ ಮಾಡಿಸಲು ಅವಳ ಅಮ್ಮ ಆಸ್ಪತ್ರೆಗೆ ಅಲೆದಲೆದು, ಅದು ಪೋಕ್ಸೊ ಆಗಿದ್ದರಿಂದ ಪೊಲೀಸ್ ಪ್ರಕರಣವಾಗಿ, ಗರ್ಭಪಾತಕ್ಕೆ ಅನುಮತಿ ಪಡೆಯಲು ವಿಳಂಬವಾಗಿ ಕೊನೆಗೆ ಹೈಕೋರ್ಟ್‌ಗೆ ಹೋಗಬೇಕಾಯಿತು. ನ್ಯಾಯಾಲಯವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತಕ್ಷಣ ಗರ್ಭಪಾತಕ್ಕೆ ಅನುಮತಿ ನೀಡಿತು. ಅಷ್ಟರಲ್ಲಿ ಅವಳು ಏಳೂವರೆ ತಿಂಗಳ ಗರ್ಭಿಣಿಯಾಗಿದ್ದಳು!

ಕೇರಳವೇಕೆ? ಗರ್ಭ ಧರಿಸಿದ ಎಷ್ಟೋ ಎಳೆಯ ಹುಡುಗಿಯರು, ಸಣ್ಣ ಹಳ್ಳಿಯಲ್ಲಿ ವೈದ್ಯ ವೃತ್ತಿ ನಡೆಸುವ ನನ್ನಂತಹವರ ಬಳಿಯೂ ಬರುತ್ತಾರೆ. ‘ಮನ್ನಿ ಯಾರ್ಗೂ ತಿಳಿಸ್ಬೇಡಿ ಪ್ಲೀಸ್’ ಎಂಬ ಒಂದೇ ಕಾಳಜಿ ಅವರಿಗೆ. ಹಿರಿಯರಾದ ನಾವು ಹೇಳುವುದು ಒಂದು ಮಾಡುವುದು ಇನ್ನೊಂದು ಆಗಿ ಹೊಸ ಪೀಳಿಗೆಯನ್ನು ಈ ದಿಕ್ಕಿಗೆ ಒಯ್ಯುತ್ತಿದ್ದೇವೆ.

ಹೀಗಿರುತ್ತ ಒಂಬತ್ತನೆಯ ತರಗತಿ ಹುಡುಗರ ಪಾಟಿಚೀಲದೊಳಗೆ ಕಾಂಡೋಮ್, ಹುಡುಗಿಯ ಚೀಲದಲ್ಲಿ ಗರ್ಭನಿರೋಧಕ ಗುಳಿಗೆಗಳು ಇರುವ ಸುದ್ದಿ ಓದಿದಾಗ, ಗರ್ಭ ಕಟ್ಟದಂತೆ ಯೋಜಿತವಾಗಿ ಕ್ರಮ ತೆಗೆದುಕೊಂಡಿದ್ದಾರೆ ಎಂಬುದು ಗಮನಕ್ಕೆ ಬರುತ್ತದೆ. ಈ ಪ್ರಸಂಗವು ಹದಿಹರೆಯದವರ ಬಗೆಗೆ, ಅವರನ್ನು ನಾವೆತ್ತ ಒಯ್ಯುತ್ತಿದ್ದೇವೆ ಎಂಬುದರ ಬಗೆಗೆ ಕನಿಷ್ಠ ಚರ್ಚೆಯನ್ನಾದರೂ ಹುಟ್ಟುಹಾಕೀತೇ ಎಂಬ ನಿರೀಕ್ಷೆ ಮೂಡಿಸಿತು.

ಹದಿವಯಸ್ಸಿನಲ್ಲಿ ಮಕ್ಕಳನ್ನು ಕಾಡುವ ಬಹುಮುಖ್ಯ ಸಂಗತಿ ಕಾಮ. ಹಾಗೇನಿಲ್ಲ ಎಂಬ ಸುಳ್ಳನ್ನು ನಮಗೆ ನಾವೇ ಪದೇಪದೇ ಹೇಳಿಕೊಂಡಿದ್ದೇವೆ. ಅವರಿಗೂ ಪದೇಪದೇ ಹೇಳಿದ್ದೇವೆ. ಆದರೆ ಮಗುವಿನ ‘ಸ್ವ’ ಅರಿವಿನ ಬೆಳವಣಿಗೆಯಲ್ಲಿ ದೇಹದ ಅಂಗಾಂಗಗಳು ಮತ್ತು ಅವು ನೀಡುವ ಅನುಭವಗಳು ಮುಖ್ಯ ಪಾತ್ರ ವಹಿಸುತ್ತವೆ. ಅದರಲ್ಲೂ ಹದಿಹರೆಯದ ಕಾಯದ ತಳಮಳವೆಂದರೆ ಸಾಮಾನ್ಯವಲ್ಲ. ಆಸ್ಫೋಟಿಸಲು ಸಿದ್ಧವಾದ ಜ್ವಾಲಾಮುಖಿ ಅದು. ಸಾಧಕಬಾಧಕಗಳ ಯೋಚನೆ ಇಲ್ಲದೆ ನೋಡಿದ್ದನ್ನು ಬಿಡುವ ಹುಚ್ಚುತನವೂ ಇರುತ್ತದೆ. ಅದಕ್ಕೆ ಸರಿಯಾಗಿ ಕೋವಿಡ್ ಕಾಲದಲ್ಲಿ ಶಾಲೆಗಳು ನಡೆಯದೇ ಮಕ್ಕಳು ವರ್ಷಗಟ್ಟಲೆ ಮನೆಯಲ್ಲಿ ಕುಳಿತರು. ಅವರನ್ನು ರಕ್ಷಿಸಲು ತಾನೇನೋ ದೊಡ್ಡ ಸಾಧನೆ ಮಾಡುತ್ತಿರುವೆನೆಂದು ಶಿಕ್ಷಣ ಇಲಾಖೆಯು ಆನ್‌ಲೈನ್ ಪಾಠದ ವ್ಯವಸ್ಥೆ ಮಾಡಿತು. ಯಾವ ಮೊಬೈಲನ್ನು ಮಕ್ಕಳ ಕೈಗೆ ಕೊಡಬೇಡಿ ಎನ್ನುತ್ತಿದ್ದೆವೋ ಅದು ಅನಿವಾರ್ಯವಾಗಿ, ಅನಾಯಾಸವಾಗಿ ಅವರ ಕೈ ಸೇರಿತು. ಏನನ್ನು ಬೇಕಾದರೂ ಎಷ್ಟು ಹೊತ್ತಾದರೂ ನೋಡಬಹುದಾದ ಉಚಿತ ಇಂಟರ್‌ನೆಟ್. ಅಲ್ಲಿ ಅವರೆದುರು ತೆರೆದುಕೊಳ್ಳುವ ಲೋಕವಾದರೂ ಎಂಥದು? ಉಚಿತ ನೀಲಿಚಿತ್ರಗಳ ವಿಡಿಯೊ, ನಗ್ನಚಿತ್ರಗಳ ಸಂತೆ. ಸುದ್ದಿಯಲ್ಲಿ ಕಾಮುಕ ಸ್ವಾಮಿಗಳು, ಕಾಮುಕ ರಾಜಕಾರಣಿಗಳು, ಅತ್ಯಾಚಾರ ಪ್ರಕರಣಗಳು, ಬೆಲ್ಲಿ ಡ್ಯಾನ್ಸು, ಐಟಂ ಸಾಂಗುಗಳು. ಸಿನಿಮಾ- ಧಾರಾವಾಹಿಗಳಲ್ಲೂ ಪ್ರೇಮ, ಸಲ್ಲಾಪ.

ಅವರ ಕಣ್ಣೆದುರಿಗೆ ಮೈನವಿರೇಳಿಸುವ, ಕಿವಿ ಬೆಚ್ಚಗಾಗಿಸುವ ಇಂಥವನ್ನೇ ಗುಡ್ಡೆ ಹಾಕಿ, ‘ಇಲ್ಲ ಇಲ್ಲ, ಆ ಕಡೆ ಮಕ ತಿರುಗಿಸ್ಬೇಡ ಮಗಾ, ಅದು ಒಳ್ಳೇದಲ್ಲ, ಈ ಕಡೆ ನೋಡು’ ಎಂದರೆ ಅವರು ಮುದ್ದಾಂ ಆ ಕಡೆಗೇ ನೋಡುತ್ತಾರೆ. ಉಲ್ಲಂಘನೆಯ ಸೆಳೆತ ಸಾಮಾನ್ಯವಾದದ್ದಲ್ಲ. ತಪ್ಪುತಪ್ಪು ಅಭಿಪ್ರಾಯ, ಕಲ್ಪನೆ, ಕನಸುಗಳನ್ನು ಇಟ್ಟುಕೊಳ್ಳುತ್ತಾರೆ. ಅಂತಹ ಪ್ರಚೋದನೆಗಳ ಗೀಳಿಗೆ ಒಳಗಾಗದಂತೆ ನಾವೇನು ಮಾಡಿದ್ದೇವೆ? ಅವರೆದುರು ನೀತಿಕಥೆಗಳ ಸರಿತಪ್ಪು ಜಾಲ ಹೆಣೆದಿದ್ದೇವೆ. ಅತಿನಿರೀಕ್ಷೆಯ ಬೆಟ್ಟವನ್ನು ನಿಲ್ಲಿಸಿದ್ದೇವೆ. ಏರಲಾಗದ ಎತ್ತರಗಳ ಕಡೆಗೆ ದಬ್ಬುತ್ತಿದ್ದೇವೆ. ರಾಜಕಾರಣದ ಹಗೆಯ ಹೊಗೆಯನ್ನು ಪಠ್ಯದ ಮೂಲಕ ತುಂಬಿಸಲು ಉತ್ಸುಕರಾಗಿದ್ದೇವೆ.

ಇದರ ನಡುವೆ ಅವರ ಲೈಂಗಿಕತೆ, ಸಹಜ- ಅಸಹಜ ಕಾಮನೆಗಳು, ನಿರಪಾಯಕಾರಿ ಪರಿಹಾರಗಳನ್ನು ಹೇಳುವ ಲೈಂಗಿಕ ಶಿಕ್ಷಣದ ಬಗೆಗೆ ಯೋಚನೆಗಳೇ ಇಲ್ಲ. ಯೋಚಿಸಿದರೂ ಹುಶ್ಶ್!

ತತ್ಪರಿಣಾಮವಾಗಿ, ‘ದೊಡ್ಡವರು’ ಎನಿಸಿಕೊಂಡ ನಮ್ಮ ಅಜ್ಞಾನ, ಅಹಮು, ದರ್ಪವು ಮಕ್ಕಳನ್ನು ನಮ್ಮಿಂದ ದೂರ ಮಾಡಿವೆ.

ಅವಿಭಜಿತ ಕುಟುಂಬಗಳು ಕಡಿಮೆಯಾಗಿ ಸಂಸಾರ ಸಣ್ಣದಾಗಿರುವ ಈ ಕಾಲದಲ್ಲೂ ಭಾರತೀಯ ಕುಟುಂಬ ಶ್ರೇಣೀಕೃತ ವ್ಯವಸ್ಥೆಯಾಗಿದೆ. ಅಲ್ಲಿ ಮಕ್ಕಳು, ಮಹಿಳೆಯರು ಅಧಿಕಾರಹೀನರಾಗಿ ಮುಂದುವರಿದಿದ್ದಾರೆ. ಅದರಲ್ಲೂ ಮಕ್ಕಳೆಂದರೆ ಮಾತು ಕೇಳಬೇಕಾದವರು, ವಿಧೇಯರಾಗಿ ಹ್ಞೂ ಎನ್ನಬೇಕಾದವರು. ಅವರ ಅಭಿಪ್ರಾಯವನ್ನು ಕೇಳುವ, ಅದಕ್ಕೆ ಬೆಲೆ ಕೊಡುವ ಡೆಮಾಕ್ರಟಿಕ್ ಮೌಲ್ಯ ಇಲ್ಲವೇ ಇಲ್ಲ ಎನ್ನಬಹುದು. ಸ್ವಲ್ಪವಿದ್ದಾಗ ಎತ್ತಿ ಮುದ್ದಾಡಿ ಬೆಳೆಸಿದ ಮಕ್ಕಳು ಹದಿಹರೆಯದವರಾದದ್ದೇ ಅವರನ್ನು ನಿಯಂತ್ರಿಸುವ ಹುಕಿ ನಮ್ಮಲ್ಲಿ ಜೋರಾಗುತ್ತದೆ, ಅವರಿಗೆ ಕಟ್ಟು ಕಟ್ಟಳೆಗಳನ್ನು ಹೇರುವ ಹುಮ್ಮಸ್ಸು ಉಕ್ಕುತ್ತದೆ. ಇದರ ನಡುವೆ ಮಕ್ಕಳನ್ನು ಪ್ರೀತಿ ಹಾಗೂ ವಾತ್ಸಲ್ಯದಿಂದ ಅಪ್ಪುವ, ಮುಟ್ಟುವ ಸ್ಪರ್ಶದ ರೂಢಿಯನ್ನು ಬಿಡುತ್ತೇವೆ.

ನಗರದ ವೇಗದ ಜೀವನದಲ್ಲಿರಲಿ, ಡೆಡ್‌ಲೈನುಗಳ ಸಿರಿವಂತ ಪಾಲಕರಲ್ಲಿರಲಿ, ಹೊಟ್ಟೆ ತುಂಬಿಸಲು ಕಷ್ಟ ಪಡಬೇಕಾದ ಗ್ರಾಮೀಣ- ಕೆಳವರ್ಗಗಳಲ್ಲಿರಲಿ- ಮಕ್ಕಳ ಮಾತನ್ನು ಆಪ್ತವಾಗಿ, ಪ್ರೀತಿಯಿಂದ, ತಾಳ್ಮೆಯಿಂದ ಕೇಳುವ ವಾತಾವರಣವೇ ಇಲ್ಲವಾಗಿದೆ. ಪಾಲಕರ ನಿರೀಕ್ಷೆಗಳ ಭಾರಕ್ಕೆ ಕುಸಿಯುವ ಮಕ್ಕಳು ಬೆಳೆಯುತ್ತ ಹೋದಂತೆ ಏಕಾಂಗಿಗಳಾಗುತ್ತಿದ್ದಾರೆ. ಅವರ ಕಾಯದ, ವಯಸ್ಸಿನ, ವಾಸ್ತವದ ಸಂಕಟಗಳನ್ನು ತೋಡಿಕೊಳ್ಳುವ ಅವಕಾಶ ಮನೆಯಲ್ಲಿ ಇರುವುದಿಲ್ಲ. ಎಂದೇ ನಮ್ಮ, ಅವರ ನಡುವಿನ ತಲೆಮಾರಿನ ಕಂದಕ ದೊಡ್ಡದಾಗಿದೆ.

ಮನೆಯ ಕತೆ ಹೀಗಾಯಿತು. ಇನ್ನು ಅವರ ತಿಳಿವು ಹೆಚ್ಚಿಸಬೇಕಾದ ಶಾಲೆಯಲ್ಲಿ ಗುರುವೃಂದದ ಬಳಿ ಸ್ನೇಹದ ವಾತಾವರಣವಿದೆಯೆ? ಅಲ್ಲೂ ಯಶಸ್ಸನ್ನು ಅಂಕಗಳಲ್ಲಿ ಅಳೆಯುವ ವಾತಾವರಣ. ಹೀಗಿರುತ್ತ ಹದಿವಯಸ್ಸಿನ ಹುಡುಗಿ, ಹುಡುಗ ತಮ್ಮ ಕಾಯದ ತಳಮಳ, ಕುತೂಹಲ, ಸಾಹಸ, ಸಂಶಯಗಳನ್ನು ಯಾರ ಬಳಿ ಹೇಳುವುದು? ಕದ್ದುಮುಚ್ಚಿ ಅವರೋದುವ ನೀಲಿ ಸಾಹಿತ್ಯ, ನೋಡುವ ನೀಲಿಚಿತ್ರಗಳು ಮತ್ತು ಅವರಷ್ಟೇ ಜ್ಞಾನಿಗಳೂ ಅಜ್ಞಾನಿಗಳೂ ಆಗಿರುವ ಸಹಪಾಠಿಗಳೇ ಅವರ ಜ್ಞಾನಮೂಲಗಳು.

ಇಷ್ಟು ಹೇಳಿದ್ದೇ ಕೆಲವರು ಅತಿ ಸಂಪ್ರದಾಯವಾದಿ ನಿಲುವು ತಳೆದು ಹುಡುಗಿಯರನ್ನು ಹುಡುಗಿಯರ ಶಾಲೆಕಾಲೇಜಿಗೇ ಕಳಿಸುವ ನಿರ್ಧಾರ ತಳೆಯುತ್ತಾರೆ. ಆರೋಪದ ಮುಳ್ಳು ತಾಯಿಯೆಡೆಗೆ ಬಂದು ನಿಲ್ಲುತ್ತದೆ. ಮಕ್ಕಳನ್ನು ಇನ್ನಷ್ಟು ಕಟ್ಟುನಿಟ್ಟು ಬಂಧಕ್ಕೆ ಒಡ್ಡುತ್ತಾರೆ. ಆದರೆ ಕಟ್ಟಿಟ್ಟಷ್ಟೂ ಕಿತ್ತು ಕಳಚಿಕೊಳ್ಳುವ ಹಂಬಲ ಹೆಚ್ಚುತ್ತದೆ. ಬಂಧಿತ ಅನುಭವದ ನಡುವೆ ಬೇರಾರೋ ಒಬ್ಬರು ಮೈಸವರಿ, ಎರಡು ಒಳ್ಳೆಯ ಮಾತಾಡಿಬಿಟ್ಟರೆ ಬಹು ಸುಲಭವಾಗಿ ಅವರ ಪ್ರಭಾವಕ್ಕೆ ಒಳಗಾಗಿಬಿಡುತ್ತಾರೆ.

ನಮ್ಮ ಮಕ್ಕಳನ್ನು ಹೇಗೆ ಮಕ್ಕಳಾಗಿ ಉಳಿಸಿಕೊಳ್ಳುವುದು? ದಾರಿ ಸುಲಭ. ಅವರನ್ನು ನಮ್ಮ ಅಹಮಿನ ವಿಸ್ತಾರದಂತೆ ನೋಡದೆ ಲೋಕದ ನಾಳೆಯಂತೆ ನೋಡಬೇಕು. ಅತಿಸಹಜವಾಗಿ, ಪ್ರಾಮಾಣಿಕವಾಗಿ ಅವರೊಡನೆ ವರ್ತಿಸಬೇಕು. ಮುಕ್ತವಾಗಿ ಮಾತನಾಡಲು ಬಿಟ್ಟು ಅವರ ಮನಸ್ಸು ಅರಿಯಬೇಕು. ಅವರೆದುರಿಗೆ ಮಾದರಿಯಾಗಿ ಬದುಕು ನಡೆಸಬೇಕು. ಸ್ವಾತಂತ್ರ್ಯ- ಸಮಾನತೆ- ಭ್ರಾತೃತ್ವ (ಆಪ್ತತೆ) ಎಂಬ ಸಾಂವಿಧಾನಿಕ ಮೌಲ್ಯಗಳನ್ನು ನಮ್ಮ ಮನೆಯಲ್ಲೂ ಮಕ್ಕಳ ವಿಷಯದಲ್ಲೂ ಜಾರಿಗೆ ತರಬೇಕು.

ಇಷ್ಟಾದಮೇಲೂ ಅನಪೇಕ್ಷಿತವಾದದ್ದು ಸಂಭವಿಸಿದರೆ, ಬದಲಾವಣೆ ಸಂಭವಿಸುವ ಸಂಕ್ರಮಣ ಕಾಲಘಟ್ಟದ ಅನಿವಾರ್ಯ ದರ್ದು ಎಂದೇ ತಿಳಿಯಬೇಕು.

ಎಷ್ಟು ಸುಲಭ! ಎಷ್ಟು ಕಷ್ಟ!

ಚುರುಮುರಿ

‘ವಾಪ್ಸಿ’ ಭರಾಟೆ

● ಸುಮಂಗಲಾ

‘ಉತ್ತರಪ್ರದೇಶದಾಗೆ ವರ ಒಬ್ಬಾಂವ ಮದುವೆವಳಗ ಕೊಟ್ಟ 11 ಲಕ್ಷ ರೂಪಾಯಿ ವರದಕ್ಷಿಣೆ, ಒಡವೆ ಎಲ್ಲಾನೂ ಮದುವೆ ಮಂಟಪದಾಗೇನೆ ಅತ್ತೆ, ಮಾವಂಗೆ ವಾಪಸು ಕೊಟ್ಟಾನಂತ. ಎಂಥಾ ಭಲೋ ಅಳಿಯ’ ಬೆಕ್ಕಣ್ಣ ಸುದ್ದಿ ತೋರಿಸಿತು.

‘ನಿಶ್ಚಿತಾರ್ಥ ಮಾಡೂವಾಗೇ ವರದಕ್ಷಿಣೆ ಬ್ಯಾಡ ಅಂದಿದ್ದರೆ ಬಡಪಾಯಿ ಅತ್ತೆ, ಮಾವ ಕಷ್ಟಬಿದ್ದು ರೊಕ್ಕ ಹೊಂದಿಸೂದಾದರ ತಪ್ಪತಿತ್ತು. ಪ್ರಚಾರದ ಆಸೆಗೆ ಮಂಟಪದಾಗೆ ವಾಪಸು ಮಾಡಿರಬೇಕು’ ಎಂದೆ.

‘ನೀ ಎಲ್ಲಾದ್ರಾಗೂ ಏನರ ಹುಳುಕು ಹುಡುಕತೀ. ವರನ ಅಪ್ಪ, ಅಮ್ಮ ರೇಟು ಫಿಕ್ಸ್ ಮಾಡಿ, ಮದುವಿ ವ್ಯವಹಾರ ಕುದುರಿಸಿರತಾರ. ಬಡಪಾಯಿ ವರನಿಗೆ ಮಂಟಪದಾಗೇನೆ ಗೊತ್ತಾಗತೈತಿ. ಅಂವಾ ವಾಪಸು ಕೊಟ್ಟಾನಲ್ಲ, ಅದು ಮುಖ್ಯ’ ಎಂದು ಬೆಕ್ಕಣ್ಣ ಹೊಗಳಿತು.

‘ಓ... ಹಂಗಾರೆ ಇದು ವರದಕ್ಷಿಣೆ ವಾಪ್ಸಿ! ಹಿಂಗ ಎಲ್ಲಾರೂ ಸುಖಾಸುಮ್ನೆ ತಗಳೂ ರೊಕ್ಕಾನ ವಾಪಸು ಕೊಡಬೇಕು. ಲಂಚ ತಗಂಡವರು ಸರ್ಕಾರದ ಕೆಲಸ ದೇವರ ಕೆಲಸ ಅಂತ ಮಾಡೀವಿ, ರೊಕ್ಕ ಬ್ಯಾಡ್ರಿ ಅಂತ ವಾಪಸು ಕೊಟ್ಟದ್ದರೆ ಎಷ್ಟ್ ಛಲೋ ಇರ್ತಿತ್ತು’ ಎಂದೆ.

‘ಲಂಚ ತಗಂಡು, ಸಿಕ್ಕಿಬಿದ್ದು ಜೈಲಿಗೆ ಹೋಗೂದಕ್ಕಿಂತ ಲಂಚ ವಾಪ್ಸಿ ಮಾಡಿ, ಪೇಪರಲ್ಲಿ ಫೋಟೊ ಬರೂದು ಛಲೋ ಅಲ್ಲೇನು. ಹಂಗೇ ಈ ರಾಜಕಾರಣಿಗಳು ಪರಸ್ಪರ ಬೇಕಾಬಿಟ್ಟಿ ಬೈಯ್ಕೋತಾರಲ್ಲ, ತಾವು ಬೈದಿದ್ದು ವಾಪಸು ತಗಂಡು, ಎದುರಿನವರು ಬೈದಿದ್ದು ಅವರಿಗೇ ಕೊಟ್ಟು, ಬೈಗುಳ ವಾಪ್ಸಿ ಚಳವಳಿ ಮಾಡಬೇಕು’ ಎಂದಿತು.

‘ಚುನಾವಣೆ ಮುಗಿದ ಮ್ಯಾಗೆ ಆಪರೇಷನ್ ಕಮಲ ಮಾಡಿ, ಶಾಸಕರನ್ನು ಖರೀದಿಸಿದ ನಂತರ, ನಿಮ್ಮ ಮತ ವಾಪಸು ತಗೋರಿ ಅಂತ ಕಮಲಕ್ಕನ ಮನಿಯವ್ರು ಮಂದಿಗೆ ಮತ ವಾಪ್ಸಿ ಮಾಡಬೌದು’ ವಾಪ್ಸಿ ಚಳವಳಿಯ ಇನ್ನೊಂದು ಸಾಧ್ಯತೆ ಹೇಳಿದೆ.

‘ಮಂದಿಗೆ ಮತ ವಾಪ್ಸಿ ಮಾಡಿ, ತಮ್ಮನ್ನು ಪ್ರಶ್ನೆ ಮಾಡೂ ಹಕ್ಕನ್ನೂ ವಾಪಸು ಕಸಿದುಕೊಳ್ಳೊ ಶಾಣೇರು ಅವರು’ ಎಂದು ಬೆಕ್ಕಣ್ಣ ಕಿಸಕ್ಕನೆ ನಕ್ಕಿತು!

ಸಂಗತ

ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಚಳವಳಿ

ಸ್ಥಳೀಯರ ಸಮಸ್ಯೆಗಳನ್ನು ಆಧರಿಸಿದ ಚಳವಳಿಗಳು ಮಾತ್ರ ಫಲಿತಾಂಶ ಕೊಡಬಲ್ಲವು ಎಂಬ ಪಾಠವನ್ನು ರಾಜ್ಯದಲ್ಲಿ ಜರುಗಿದ ಎರಡು ಚಳವಳಿಗಳು ನಮ್ಮ ಮುಂದಿಟ್ಟಿವೆ

● ಡಾ. ಕಿರಣ್ ಎಂ. ಗಾಜನೂರು

‘ವರ್ತಮಾನದಲ್ಲಿ ‘ಧ್ವನಿ ಇಲ್ಲದವರು’ ಎಂಬ ವರ್ಗ ಅಸ್ತಿತ್ವದಲ್ಲಿ ಇಲ್ಲ, ಒಂದೋ ಅಧಿಕಾರದ ಬಲದಿಂದ ಜನರ ಧ್ವನಿಯನ್ನು ವ್ಯವಸ್ಥಿತವಾಗಿ ಹತ್ತಿಕ್ಕಲಾಗಿದೆ, ಇಲ್ಲವೇ ಅದೇ ಅಧಿಕಾರದ ಭಯದ ಕಾರಣಕ್ಕೆ ಹಲವರು ಮೌನಕ್ಕೆ ಶರಣಾಗಿದ್ದಾರೆ’. ನಮ್ಮ ನಡುವಿನ ಮುಖ್ಯ ಚಿಂತಕಿ ಅರುಂಧತಿ ರಾಯ್ ಅವರ ಈ ಮಾತುಗಳನ್ನು ಓದುತ್ತಿರುವಾಗ, ಆಕೆ ವರ್ತಮಾನದಲ್ಲಿ ಅಧಿಕಾರವು ಸೃಜಿಸುತ್ತಿರುವ ಭಯದ ಎರಡು ಸ್ವರೂಪಗಳ ಕುರಿತು ನಮ್ಮ ಗಮನ ಸೆಳೆಯುತ್ತಿದ್ದಾರೆ ಅನ್ನಿಸುತ್ತದೆ. ಈ ಹೊತ್ತಿನಲ್ಲಿಯೇ, ಇತ್ತೀಚಿನ ವರ್ಷಗಳಲ್ಲಿ ಅದೇ ಅಧಿಕಾರದ ಭಯವನ್ನು ಪ್ರಜಾಸತ್ತಾತ್ಮಕ ಹಾದಿಯಲ್ಲಿ ಎದುರಿಸಿ ಗೆಲುವು ಸಾಧಿಸಿದ ಕರ್ನಾಟಕದ ಎರಡು ಮುಖ್ಯ ‘ಸಾಮಾಜಿಕ ಚಳವಳಿಗಳು’ ನೆನಪಾಗುತ್ತವೆ.

ಅದು 2016. ಕೇಂದ್ರ ಸರ್ಕಾರ ಪಿ.ಎಫ್ (ಭವಿಷ್ಯ ನಿಧಿ) ಕುರಿತು ಹೊಸ ನಿಯಮಗಳನ್ನು ರೂಪಿಸಿ ಜಾರಿಗೊಳಿಸಲು ಮುಂದಾಗುತ್ತದೆ. ಎಲ್ಲಿರುತ್ತಾರೋ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳು ಸಾವಿರ ಸಾವಿರ ಸಂಖ್ಯೆಯಲ್ಲಿ ಬೆಂಗಳೂರಿನ ಬೀದಿಗಳನ್ನು ಆಕ್ರಮಿಸಿಕೊಳ್ಳುತ್ತಾರೆ. ಬಸ್ಸು, ರೈಲು ಎಲ್ಲದಕ್ಕೂ ತಡೆಯೊಡ್ಡುತ್ತಾರೆ, ಮೊದಲ ಬಾರಿ ಬೆಂಗಳೂರಿನ ಮೆಟ್ರೊ ಸಂಚಾರವನ್ನು ನಿಲ್ಲಿಸಿಬಿಡುತ್ತಾರೆ. ಸಂಜೆಯಾಗುವುದರೊಳಗೆ ತನ್ನ ಪ್ರಸ್ತಾಪಿತ ಉದ್ದೇಶದಿಂದ ಹಿಂದೆ ಸರಿಯುವ ಒತ್ತಡಕ್ಕೆ ಸರ್ಕಾರ ಬೀಳುತ್ತದೆ.

ಇದಾದ ನಂತರ, ಮಂಗಳೂರಿನಿಂದ 16 ಕಿ.ಮೀ. ದೂರದಲ್ಲಿರುವ ಸುರತ್ಕಲ್ ಎಂಬ ಊರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಥಾಪಿಸಲಾಗಿರುವ ಸುಂಕದಕಟ್ಟೆ ಕಾನೂನುಬಾಹಿರವಾದದ್ದು, ಇಲ್ಲಿ ಸುಂಕ ವಸೂಲಿ ಮಾಡುವುದು ಅನೈತಿಕ ಎಂಬ ಜನ ಹೋರಾಟವೊಂದು ಆರಂಭವಾಗುತ್ತದೆ. ಸುಮಾರು ಆರು ವರ್ಷಗಳ ನಿರಂತರ ಹೋರಾಟದ ನಂತರವೂ ಆಳುವವರು ಜಗ್ಗದಿದ್ದಾಗ, ಇದೇ ವರ್ಷದಲ್ಲಿ ಸುಂಕದಕಟ್ಟೆಗೆ ಮುತ್ತಿಗೆ ಹಾಕುವ ಹೋರಾಟವೊಂದು ಪಕ್ಷಾತೀತವಾಗಿ ರೂಪುಗೊಳ್ಳುತ್ತದೆ.

ಪ್ರಭುತ್ವ ಅದಕ್ಕೂ ಬಗ್ಗದಿದ್ದಾಗ ಅನಿರ್ದಿಷ್ಟಾವಧಿ ಅಹೋರಾತ್ರಿ ಹೋರಾಟ ಘೋಷಣೆಯಾಗಿ ಅದು 35 ದಿನಗಳ ಕಾಲ ನಿರಂತರವಾಗಿ ನಡೆಯುತ್ತದೆ. ಮುಖ್ಯವಾಗಿ ಹೆಣ್ಣುಮಕ್ಕಳೂ ಈ ಹೋರಾಟದ ಭಾಗವಾಗಿ ನಿಲ್ಲುತ್ತಾರೆ. ಈ ಹೋರಾಟ ಸೃಷ್ಟಿಸಿದ ಒತ್ತಡದ ಕಾರಣಕ್ಕೆ ಸರ್ಕಾರವು ಈ ಸುಂಕದಕಟ್ಟೆಯ ಬಂದ್‌ಗೆ ಆದೇಶಿಸುತ್ತದೆ. ಇದು ಪಕ್ಷಾತೀತವಾಗಿ ಹೋರಾಡಿದ ಕರಾವಳಿಯ ಜನಧ್ವನಿಗೆ ಸಿಕ್ಕ ಗೆಲುವು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಹಾಗೆ ನೋಡುವುದಾದರೆ, 1970- 80ರ ಕಾಲಘಟ್ಟದಲ್ಲಿ ಅಮೆರಿಕದಲ್ಲಿ ಹುಟ್ಟಿಕೊಂಡ ತೃತೀಯ ಜಗತ್ತಿನ ಸ್ತ್ರೀವಾದಿ ಹೋರಾಟವು ‘ಯಾವುದಾದರೂ ಒಂದು ನಿರ್ದಿಷ್ಟ ಸಿದ್ಧಾಂತವು ಸಾಮಾಜಿಕ ಚಳವಳಿಗಳ ಪಾಲಿಗೆ ಅಂತಿಮ ಸತ್ಯವಾಗಿರಬೇಕು’ ಎಂಬ ಸಾಮಾಜಿಕ ಚಳವಳಿಗಳ ಹಿಂದಿದ್ದ ಪ್ರಭಾವಿ ಗ್ರಹಿಕೆಯನ್ನು ಮುರಿಯಿತು. ನ್ಯಾಯವನ್ನು ಪಡೆಯಲು ಪ್ರಗತಿಪರ ಆಲೋಚನೆಯ ಎಲ್ಲಾ ಸಿದ್ಧಾಂತಗಳು ತಮ್ಮ ಆಂತರಿಕ ಭಿನ್ನತೆಗಳ ಆಚೆಗೆ ಐಕ್ಯ ಹೋರಾಟವನ್ನು ನಿರ್ವಹಿಸಬೇಕು ಎಂಬ ಮುಖ್ಯವಾದ ಸಂದೇಶವನ್ನು ಅಲ್ಲಿನ ಸಮಾಜ ಮತ್ತು ರಾಜಕಾರಣದ ಮುಂದಿಟ್ಟಿತ್ತು.

ಮೇಲೆ ಸೂಚಿಸಿದ, ರಾಜ್ಯದಲ್ಲಿನ ಎರಡು ಚಳವಳಿಗಳೂ ಯಾವುದೇ ಒಂದು ಸಿದ್ಧಾಂತ, ಒಂದು ನಾಯಕತ್ವ ಆಧರಿಸಿ ರೂಪುಗೊಂಡವಲ್ಲ. ಇವು ಜನಪರವಾಗಿ ಯೋಚಿಸುವ ಎಲ್ಲಾ ಸಂಘಟನೆ, ಪಕ್ಷ, ಸಿದ್ಧಾಂತಗಳನ್ನು ಒಟ್ಟುಗೂಡಿಸಿಕೊಂಡು ಸಹಜವಾಗಿ ಹುಟ್ಟಿಕೊಂಡ ಸಾವಯವ ಜನಹೋರಾಟ ಎಂಬ ಸಂಗತಿಯನ್ನು ನಾವು ಗುರುತಿಸಬಹುದಾಗಿದೆ.

ಈ ಎರಡೂ ಹೋರಾಟಗಳಿಂದ ನಾವು ಕಲಿಯಬೇಕಾದ ಮತ್ತೊಂದು ಮುಖ್ಯ ಪಾಠವೊಂದಿದೆ. ಅದು, ಜಾಗತೀಕರಣದ ನಂತರ ಸ್ಥಳೀಯರ ಸಮಸ್ಯೆಗಳನ್ನು ಕೇಂದ್ರೀಕರಿಸಿ ನಡೆಯುತ್ತಿದ್ದ ಸಾಮಾಜಿಕ ಚಳವಳಿಗಳು ಹಿನ್ನಡೆ ಅನುಭವಿಸಿವೆ, ಅವುಗಳ ಜಾಗದಲ್ಲಿ ‘ಜಾಗತಿಕ ಚಳವಳಿಗಳು’ ಮುನ್ನೆಲೆಗೆ ಬಂದಿವೆ ಎಂಬುದು. ಉದಾಹರಣೆಗೆ, ಮೂಲಭೂತ ಹಕ್ಕುಗಳ ಚಳವಳಿ, ಪರಿಸರ ಚಳವಳಿ, ಪ್ರಜಾಪ್ರಭುತ್ವ ಉಳಿಸಿ ಹೋರಾಟದಂತಹವು. ಈ ಮಾದರಿಯ ಚಳವಳಿಯಿಂದ ಉತ್ತೇಜಿತರಾದ ಕೆಲವರು ಮಣ್ಣು ಉಳಿಸಿ, ನದಿ ಉಳಿಸಿ, ಧರ್ಮ ಉಳಿಸಿ ಎನ್ನುವಂತಹ ಅಖಿಲ ಭಾರತ ಮಟ್ಟದ ಹೋರಾಟಗಳನ್ನು ಘೋಷಿಸಿದ್ದನ್ನು ನೋಡುತ್ತಿದ್ದೇವೆ. ಮೂಲತಃ ಇವು ‘ಜಾಗತೀಕರಣ ಎಂಬ ರಾಜಕೀಯ ಯೋಜನೆ’ಯ ಭಾಗವಾಗಿಯೇ ಇರುವಂತಹ ಹೋರಾಟಗಳಾಗಿರುವುದರಿಂದ ಅವು ಎಷ್ಟೇ ದೊಡ್ಡ ಮಟ್ಟದ ಚರ್ಚೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ರೂಪಿಸಿದರೂ ಸ್ಥಳೀಯ ಜನರನ್ನು ಆಕರ್ಷಿಸಲು ಸಾಧ್ಯವಾಗುವುದಿಲ್ಲ. ಇವು ಸ್ಥಳೀಯ ಹಂತದಲ್ಲಿ ಜನರು ಎದುರಿಸುತ್ತಿರುವ ಹೆದ್ದಾರಿ ಶುಲ್ಕ, ಜಾತಿ ಶೋಷಣೆ, ನಿರುದ್ಯೋಗ, ಕೂಲಿಯಲ್ಲಿ ತಾರತಮ್ಯದಂತಹ ಸಮಸ್ಯೆಗಳನ್ನು ಯಾವ ಅರ್ಥದಲ್ಲಿಯೂ ಪ್ರತಿನಿಧಿಸುವುದಿಲ್ಲ.

ಜಾಗತೀಕರಣೋತ್ತರ ಬದಲಾವಣೆಯ ಕಾಲಕ್ಕೆ ಹುಟ್ಟಿಕೊಂಡ ‘ಜಾಗತಿಕ ಚಳವಳಿ’ ಎಂಬ ನಿರೂಪಣೆಯನ್ನೇ ಕರ್ನಾಟಕದಲ್ಲಿ ಘಟಿಸಿದ ಈ ಎರಡೂ ಚಳವಳಿಗಳು ಮುರಿಯುವ ಮೂಲಕ ಸ್ಥಳೀಯರ ಸಮಸ್ಯೆಗಳನ್ನು ಆಧರಿಸಿಯೇ ಸಾಮಾಜಿಕ ಹೋರಾಟಗಳು ರೂಪುಗೊಳ್ಳಬೇಕು, ಅವುಗಳೇ ನಿಜವಾದ ಪ್ರಜಾಸತ್ತಾತ್ಮಕ ಸಾಮಾಜಿಕ ಚಳವಳಿಗಳು, ಆ ಮಾದರಿಯ ಚಳವಳಿಗಳು ಮಾತ್ರವೇ ಫಲಿತಾಂಶ ಕೊಡಬಲ್ಲವು ಎಂಬ ಪಾಠವನ್ನು ನಮ್ಮ ಮುಂದಿಟ್ಟಿವೆ.

ಕರ್ನಾಟಕದ ದಲಿತ ಸಂಘಟನೆಗಳು ಏಕತಾ ಸಮಾವೇಶವನ್ನು (ಡಿ. 6) ಆಯೋಜಿಸಿವೆ. ಈ ಎಲ್ಲಾ ಬೆಳವಣಿಗೆಗಳು ನಾವು ಒಪ್ಪಿರುವ ಪ್ರಜಾತಂತ್ರ ವ್ಯವಸ್ಥೆಯ ಆರೋಗ್ಯದ ದೃಷ್ಟಿಯಿಂದ ಮಹತ್ವದ ಸಂಗತಿಗಳು ಅನ್ನಿಸುತ್ತಿವೆ.

ವಾಚಕರ ವಾಣಿ

ಮುಂಬೈ ರೈಲು ಹೊಸಪೇಟೆವರೆಗೆ ವಿಸ್ತರಿಸಿ

ನೈರುತ್ಯ ರೈಲ್ವೆಯ ಏಪ್ರಿಲ್– ನವೆಂಬರ್ ಅವಧಿಯ ಆದಾಯ ಶೇ 30.78ರಷ್ಟು ಹೆಚ್ಚಾಗಿರುವುದು ಒಳ್ಳೆಯ ಸಂಗತಿ. ಇಲಾಖೆಯು ಉತ್ತರ ಕರ್ನಾಟಕ ಭಾಗದಲ್ಲಿ ರೈಲು ಸೇವೆ ಹೆಚ್ಚಳಕ್ಕೆ ಈಗ ಗಮನಕೊಡಬೇಕು. ಸದ್ಯ ಮುಂಬೈನ ಛತ್ರಪತಿ ಶಿವಾಜಿ ಟರ್ಮಿನಸ್‌ನಿಂದ ಗದಗಕ್ಕೆ ನಿತ್ಯ ಇರುವ ಎಕ್ಸ್‌ಪ್ರೆಸ್ ರೈಲನ್ನು ಹೊಸಪೇಟೆವರೆಗೂ ವಿಸ್ತರಿಸಬೇಕು. ಬಳ್ಳಾರಿಯಿಂದ ಗದಗ ಮಾರ್ಗವಾಗಿ ಸೋಲಾಪುರಕ್ಕೆ ಒಂದು ಹೊಸ ಪ್ಯಾಸೆಂಜರ್ ರೈಲನ್ನು ಓಡಿಸಬೇಕು. ವಿಜಯಪುರದಿಂದ ಮೈಸೂರಿಗೆ ಕೊಪ್ಪಳ- ಹೊಸಪೇಟೆ- ದಾವಣಗೆರೆ- ಹಾಸನ ಮಾರ್ಗವಾಗಿ ರೈಲುಗಳನ್ನು ಓಡಿಸಲು ಕ್ರಮ ಕೈಗೊಳ್ಳಬೇಕು.

ವಿಶ್ವಖ್ಯಾತಿಯ ಗೋಳಗುಮ್ಮಟ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಹಂಪಿ, ಆಲಮಟ್ಟಿ ಅಣೆಕಟ್ಟು, ಕೂಡಲಸಂಗಮ, ಆನೆಗುಂದಿ, ಲಕ್ಕುಂಡಿಯಂತಹ ಐತಿಹಾಸಿಕ ಪ್ರವಾಸಿ ತಾಣಗಳು ಇದೇ ಮಾರ್ಗದಲ್ಲಿ ಬರುತ್ತವೆ. ಹೊರ ರಾಜ್ಯಗಳಿಂದ, ವಿದೇಶಗಳಿಂದ ಪ್ರವಾಸಿಗರು ಬರುತ್ತಿದ್ದು, ಹೆಚ್ಚು ರೈಲುಗಳ ಸಂಚಾರ ಅತ್ಯಂತ ಅವಶ್ಯಕವಾಗಿದೆ. ಈಗಾಗಲೇ ರೈಲಿನ ಹಳಿ ದ್ವಿಪಥ ಆಗಿದೆ, ವಿದ್ಯುದೀಕರಣ ಕಾರ್ಯವೂ ಮುಗಿದಿದೆ. ಇನ್ನು ಮುಂದೆ ಹೆಚ್ಚಿನ ರೈಲುಗಳು ಸಂಚರಿಸುವಂತೆ ಮಾಡಲು ರೈಲ್ವೆ ಇಲಾಖೆ ಗಮನಹರಿಸಬೇಕು.

ಎಸ್.ಬಿ.ಪಾಟೀಲ, ಕೊಪ್ಪಳ

ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಇರಲಿ

ಭಾರತವು ಜಿ 20 ಅಧ್ಯಕ್ಷ ಸ್ಥಾನ ವಹಿಸಿಕೊಂಡ ಪ್ರಯುಕ್ತ ವಿಜಯಪುರದ ವಿಶ್ವಪ್ರಸಿದ್ಧ ಗೋಳಗುಮ್ಮಟವು ಇದೇ ಏಳರವರೆಗೆ ಸಂಜೆ ವಿದ್ಯುತ್ ದೀಪಗಳಿಂದ ಕಂಗೊಳಿಸಲಿದೆಯಾದರೂ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಿಲ್ಲ ಎಂದು ವರದಿಯಾಗಿದೆ (ಪ್ರ.ವಾ., ಡಿ. 4). ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿಲ್ಲದೆ ಈ ರೀತಿ ವಿದ್ಯುತ್ ದೀಪಾಲಂಕಾರ ಮಾಡಿ ಸಂಭ್ರಮಿಸುವ ಔಚಿತ್ಯವಾದರೂ ಏನು? ಇದು ಸಾರ್ವಜನಿಕರ ತೆರಿಗೆ ಹಣದ ಅಪವ್ಯಯ ಅಷ್ಟೆ.

‘ನಾನು ಚೆನ್ನಾಗಿ ರುಚಿಕರವಾಗಿ ಅಡುಗೆ ಮಾಡಿದ್ದೇನೆ. ಆದರೆ ಯಾರಿಗೂ ಬಡಿಸುವುದಿಲ್ಲ’ ಎಂದು ಹೇಳಿದಂತೆ ಆಗುತ್ತದೆ. ಯಾರೂ ತಿನ್ನದೆ ಇದ್ದಮೇಲೆ ಆ ಅಡುಗೆಯಾದರೂ ಏಕೆ? ಹಾಗಾಗಿ, ಈ ವಿದ್ಯುತ್ ದೀಪಾಲಂಕಾರದ ವ್ಯವಸ್ಥೆಯನ್ನು ಹೊಸ ವರ್ಷದ ನಂತರ ಕೆಲವು ದಿನಗಳವರೆಗೂ ವಿಸ್ತರಿಸಿ ಸಾರ್ವಜನಿಕರ ವೀಕ್ಷಣೆಗೆ ಅನುವು ಮಾಡಿಕೊಡಲಿ. ಆಗ ಜನರೂ ಕಣ್ತುಂಬಿಕೊಂಡು ಸಂಭ್ರಮಿಸುತ್ತಾರೆ. ಈ ಅಲಂಕಾರಕ್ಕೆ ಒಂದು ಅರ್ಥವೂ ದೊರಕುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಬೇವಹಳ್ಳಿ ಗ್ರಾಮದ ಉದಯಕಿರಣ್ ಎಂಬ ದಲಿತ ಯುವಕನ ಮೇಲೆ ನಡೆದಿರುವ ಜಾತಿ ದೌರ್ಜನ್ಯವು ಮಾನವರಿಂದ ಮನುಷ್ಯತ್ವ ಮರೆಯಾಗಿರುವುದನ್ನು ಸಾಬೀತು ಮಾಡುವಂತಿದೆ. ಪ್ರಬಲ ಜಾತಿಯ ಯುವಕರನ್ನು ಬೈಕ್‌ನಲ್ಲಿ ಓವರ್‌ಟೇಕ್ ಮಾಡಿದ್ದಕ್ಕಾಗಿ ತನ್ನ ಮೇಲೆ ನಡೆದ ಹಲ್ಲೆ ಹಾಗೂ ಜಾತಿ ನಿಂದನೆಯಿಂದ ತೀವ್ರವಾಗಿ ಮನನೊಂದ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳಲಾಗುತ್ತಿದೆ. ಆದರೂ ಈ ಪ್ರಕರಣವನ್ನು ಜಾತಿ ಆರಾಧಕರಿಂದ ನಡೆದ ಪರೋಕ್ಷ ಹತ್ಯೆ ಎಂದೇ ಪರಿಗಣಿಸಬೇಕಾಗುತ್ತದೆ.

ಇದರಲ್ಲಿ ಭಾಗಿಯಾಗಿರುವ ಕೊಳಕು ಜಾತಿವಾದಿಗಳ ವಿರುದ್ಧ ಮೊದಲು ಕೊಲೆ ಪ್ರಕರಣ ದಾಖಲಿಸಬೇಕು. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ನೇರ ಮಾರ್ಗದರ್ಶನದಲ್ಲಿ ನ್ಯಾಯಯುತವಾಗಿ ತನಿಖೆ ನಡೆಯಬೇಕು. ಅಪರಾಧಿಗಳಿಗೆ ತ್ವರಿತವಾಗಿ ಕಠಿಣ ಶಿಕ್ಷೆ ಜಾರಿಯಾಗುವಂತೆ ನೋಡಿಕೊಳ್ಳಬೇಕು. ಈ ಮೂಲಕ, ಇಂತಹ ಜಾತಿ ದೌರ್ಜನ್ಯದ ಪ್ರಕರಣಗಳು ಮರುಕಳಿಸದಂತೆ ಕಠಿಣ ಸಂದೇಶ ರವಾನಿಸಬೇಕಾಗಿದೆ.

ಪವನ್ ಜಯರಾಂ, ಚಾಮರಾಜನಗರ

ಕನ್ನಡದ ಕೆಲಸಕ್ಕೆ ಬೇಕು ಪರಸ್ಪರ ಸಹಕಾರ

ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಕಚೇರಿ ಸ್ಥಳಾಂತರಕ್ಕೆ ಪರಿಷತ್ತಿನ ಕೇಂದ್ರ ಘಟಕ ನೋಟಿಸ್ ನೀಡಿರುವ ಮತ್ತು ಅದಕ್ಕೆ ಮಾಜಿ ಅಧ್ಯಕ್ಷರು ಆಕ್ಷೇಪ ಎತ್ತಿರುವ ಸುದ್ದಿ (ಪ್ರ.ವಾ., ಡಿ. 4) ಪ್ರಕಟವಾಗಿದೆ. ಕೇಂದ್ರ ಘಟಕದ ಈ ನಡೆ ಸಮಂಜಸವಲ್ಲ. ಈ ಹಿಂದೆ ಜಿ.ನಾರಾಯಣ, ಡಾ. ಹಂಪನಾ ಅವರು ಕೇಂದ್ರ ಘಟಕದ ಅಧ್ಯಕ್ಷರಾಗಿದ್ದಾಗ ನಾನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಸಾಪ ಘಟಕದ ಗೌರವ ಕಾರ್ಯದರ್ಶಿ ಆಗಿದ್ದೆ. ಆಗಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂದರೆ, ಈಗಿನ ರಾಮನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಾಗಿ ಉಳಿದಿರುವ ಎಲ್ಲ ತಾಲ್ಲೂಕುಗಳೂ ಸೇರಿದ್ದವು. ಜೊತೆಗೆ ಈಗಿನ ನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಆನೇಕಲ್ ತಾಲ್ಲೂಕೂ ಸೇರಿತ್ತು. ಕಂದಾಯ ವಿಭಾಗದ ಆಡಳಿತಕ್ಕೆ ಸೇರಿದಂತೆ ಬೆಂಗಳೂರು ನಗರ ಜಿಲ್ಲೆಯ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎರಡೂ ಜಿಲ್ಲಾಧಿಕಾರಿಗಳ ಕಚೇರಿಗಳೂ ಬೆಂಗಳೂರಿನಲ್ಲೇ ಇದ್ದವು. ಹಾಗಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಸಾಪ ಘಟಕಗಳಿಗೆ ಕಚೇರಿಗಳನ್ನು ಕೇಂದ್ರ ಕಸಾಪ ಕಟ್ಟಡದಲ್ಲೇ ಆಗಿನ ಅಧ್ಯಕ್ಷರು ನೀಡಿದ್ದರು.

ಆಗಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ ಎರಡು ಜಿಲ್ಲೆಗಳಾಗಿ ಪ್ರತ್ಯೇಕಗೊಂಡು ಜಿಲ್ಲಾಧಿಕಾರಿಗಳ ಆಡಳಿತ ಕಚೇರಿ ಬೇರೆಯಾದಂತೆ, ಕಸಾಪ ಘಟಕದ ಆಡಳಿತ ಕಚೇರಿಯೂ ಕೇಂದ್ರ ಕಟ್ಟಡದಿಂದ ದೂರ ಹೋಯಿತು. ಆದರೆ ನಗರ ಜಿಲ್ಲೆಯ ಆಡಳಿತ ಘಟಕವು ಕೇಂದ್ರ ಕಟ್ಟಡದಲ್ಲಿಯೇ ಮೊದಲಿನಿಂದಲೂ ಉಳಿದಿದೆ. ನಗರ ಜಿಲ್ಲಾ ಘಟಕದ ಕಸಾಪ ಅಧ್ಯಕ್ಷರು ಇಲ್ಲಿಂದಲೇ ಆಡಳಿತ ಮಾಡುತ್ತಾ ಬಂದಿದ್ದಾರೆ. ಈಗ ಏಕಾಏಕಿ ತೆರವುಗೊಳಿಸುವುದು ಸೂಕ್ತವಲ್ಲ. ಸಂಬಳ ಸಾರಿಗೆ ಇಲ್ಲದೆ ಗೌರವಕ್ಕಾಗಿ ಕೆಲಸ ಮಾಡುತ್ತಿರುವ ಜಿಲ್ಲಾ ಅಧ್ಯಕ್ಷರುಗಳಿಗೆ ಕನ್ನಡದ ಕೆಲಸ ಹೊರೆಯಾಗದಂತೆ ಕೇಂದ್ರ ಘಟಕ ಸಹಕರಿಸುವುದು ಧರ್ಮ. ಹೀಗಿರುವಾಗ ಇರುವ ಕಚೇರಿಯನ್ನೂ ಖಾಲಿ ಮಾಡಿಸಿದರೆ, ಬೆಂಗಳೂರಿನಲ್ಲಿ ಬಾಡಿಗೆ ಕೊಟ್ಟು ಕಚೇರಿ ನಡೆಸಲು ಸಾಧ್ಯವೆ? ಪರಸ್ಪರ ಸಹಕಾರದಿಂದ ಕನ್ನಡದ ಕೆಲಸ ಆಗಬೇಕಾಗಿದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಲಿತ ಸಂಘರ್ಷ ಸಮಿತಿಯ ವಿವಿಧ ಬಣಗಳ ಒಟ್ಟಾಗಿ 'ದಲಿತರ ಸಾಂಸ್ಕೃತಿಕ ಪ್ರತಿರೋಧ-ದಲಿತ ಸಂಘಟನೆಗಳ ಏಕತಾ ಸಮಾವೇಶ'ವನ್ನು ಮಂಗಳವಾರ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಸಲಿವೆ. ಅಂಬೇಡ್ಕರ್ ಅವರ 66ನೇ ಪರಿನಿರ್ವಾಣ ದಿನದಂದೇ ಈ ಕಾರ್ಯಕ್ರಮ ನಡೆಯಲಿದೆ

ಏಕತೆಯತ್ತ ದಲಿತರ ನಡೆ

• ವೈ.ಗ. ಜಗದೀಶ್

ಸುಮಾರು ಐವತ್ತು ವರ್ಷಗಳ ಹಿಂದೆ, ಕರ್ನಾಟಕದ ದಲಿತ ಸಮುದಾಯದ ಜನರು ಎದೆಯುಬ್ಬಿಸಿ ನಿಂತು ತಮ್ಮ ಹಕ್ಕು ಮತ್ತು ನ್ಯಾಯಕ್ಕಾಗಿ ಧ್ವನಿ ಎತ್ತುವ ಚಾರಿತ್ರಿಕ ಹೋರಾಟಕ್ಕೆ ಅಡಿ ಇಟ್ಟರು. ಅಕ್ಷರ ಕಲಿತ ಮೊದಲ ತಲೆಮಾರು ಕಟ್ಟಿದ 'ದಲಿತ ಸಂಘರ್ಷ ಸಮಿತಿ'ಯು (ದಸಂಸ) ತಳ ಸಮುದಾಯದವರ ಹೋರಾಟಕ್ಕೆ ನೆಲೆಯೊಂದನ್ನು ನಿರ್ಮಿಸಿತು.

ಅಧಿಕಾರಸ್ಥ ಪ್ರಬಲ ಜಾತಿಗಳ ಕುತಂತ್ರ, ಸಂಘಟನೆಯ ಮುಂಚೂಣಿಯಲ್ಲಿದ್ದವರ ಸ್ವಪ್ರತಿಷ್ಠೆ, ಕಾಲಘಟ್ಟಗಳಲ್ಲಿನ ತಪ್ಪುನಡೆಗಳು ತೋಡು ಹೊಂಡಗಳಾಗಿ ದಸಂಸವನ್ನು ವಿಘಟನೆಯ ವಿಪತ್ಕಾಲಕ್ಕೆ ದೂಡಿದವು. ಬಾಬಾ ಸಾಹೇಬ್ ಅಂಬೇಡ್ಕರ್ ಪರಿನಿರ್ವಾಣ ದಿನವಾದ ಡಿಸೆಂಬರ್ 6ರಂದು 'ದಲಿತರ ಸಾಂಸ್ಕೃತಿಕ ಪ್ರತಿರೋಧ'ದ ಆಶಯದಡಿ ಸಂಘಟನೆಗಳನ್ನು ಮತ್ತೆ ಒಗ್ಗೂಡಿಸುವ ಏಕತಾ ಸಮಾವೇಶ ನಡೆಯಲಿದೆ. ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹೆಚ್ಚುತ್ತಲೇ ಇದೆ, ಮುಂದುವರಿದ ಜಾತಿಗಳಲ್ಲಿರುವ ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ಜಾರಿಯಾಗಿದ್ದರ ಕುರಿತೂ ವ್ಯಾಪಕ ಆಕ್ಷೇಪ ವ್ಯಕ್ತವಾಗಿದೆ. ಇಂತಹ ದಿನಗಳಲ್ಲಿ, ದಲಿತ ಸಂಘಟನೆಗಳು ಒಂದುಗೂಡಲು ಮುಂದಾಗಿವೆ.

ದಸಂಸದ ಹಾದಿ: 1970ರ ಆಸುಪಾಸಿನಲ್ಲಿ ಕರ್ನಾಟಕದಲ್ಲಿಯೂ ಪ್ರಬಲವಾಗಿದ್ದ ಕಮ್ಯುನಿಸ್ಟ್ ಹಾಗೂ ಸಮಾಜವಾದಿ ಚಳವಳಿಗಳು ಅಕ್ಷರ ಕಲಿತ ದಲಿತ ಸಮುದಾಯದವರನ್ನು ಪ್ರಭಾವಿಸಿದವು. ಚಳವಳಿಗಳಲ್ಲಿ ತೊಡಗಿಸಿಕೊಳ್ಳಲು ಸಮಾಜವಾದಿ ಯುವಜನ ಸಭಾ ಪ್ರೇರಣೆ ನೀಡಿತು. ಸ್ವಾತಂತ್ರ್ಯ ಮತ್ತು ಇಂಗ್ಲಿಷ್ ಭಾಷೆ ದಕ್ಕಿದ್ದರಿಂದಾಗಿ ಆ ಹೊತ್ತಿಗಾಗಲೇ ಬ್ರಾಹ್ಮಣೇತರರು ಸಾಹಿತ್ಯದಲ್ಲಿ ದೊಡ್ಡ ಮಟ್ಟದ ಕೆಲಸ ಮಾಡಿದ್ದರು. ವಿಚಾರಕ್ರಾಂತಿಗೆ ನೀರೆರೆದ ಕವಿ ಕುವೆಂಪು ಅವರು ಇದರ ಶ್ರೇಷ್ಠನಾಯಕರು. ಸಾಹಿತ್ಯ ವಲಯದಲ್ಲಿ ಬ್ರಾಹ್ಮಣ-ಶೂದ್ರ ವಾಗ್ವಾದವೂ ಅಷ್ಟೇ ದೊಡ್ಡ ಮಟ್ಟಕ್ಕೆ ನಡೆಯುತ್ತಿತ್ತು. ಅದೇ ಹೊತ್ತಿಗೆ ಮೈಸೂರಿನಲ್ಲಿ ನಡೆದ ಜಾತಿ ವಿನಾಶ ಸಮ್ಮೇಳನ ವಿಚಾರವಾದಿಗಳ ಮೊದಲ ಒಗ್ಗೂಡಿಕೆಯ ಫಲ. ಇದರ ಮುಂದುವರಿದ ರೂಪವಾಗಿ 1974ರಲ್ಲಿ ಬ್ರಾಹ್ಮಣೇತರ ಸಾಹಿತಿಗಳು ಕೂಡಿಕೊಂಡು ಬರಹಗಾರರ ಒಕ್ಕೂಟವನ್ನು ಹುಟ್ಟು ಹಾಕಿದರು. ಇದು ಸಾಮಾಜಿಕ, ಸಾಹಿತ್ಯಿಕ ವಲಯದಲ್ಲಿ ಗಮನಾರ್ಹ ಸಂವಾದಕ್ಕೆ ವೇದಿಕೆಯಾಯಿತು. ಅಲ್ಲಿಯವರೆಗೆ ಇದ್ದ ಶುದ್ಧ- ಶ್ರೇಷ್ಠ ಸಾಹಿತ್ಯವೆಂಬ ಅಹಂಕಾರಕ್ಕೆ ಕೊಡಲಿ ಪೆಟ್ಟು ಕೊಟ್ಟವರು ಸಚಿವ ಬಸವಲಿಂಗಪ್ಪನವರು. 'ಕನ್ನಡ ಸಾಹಿತ್ಯದಲ್ಲಿ ಇರುವುದೆಲ್ಲವೂ ಶ್ರೇಷ್ಠವಲ್ಲ; ಹೆಚ್ಚಿನ ಅಂಶ ಬೂಸಾ ಸಾಹಿತ್ಯ' ಎಂಬ ಅವರ ಹೇಳಿಕೆ ಸಾಹಿತ್ಯ-ಸಾಂಸ್ಕೃತಿಕ ವಲಯದಲ್ಲಿ ಶೂದ್ರ-ದಲಿತ ಸಮುದಾಯದ ಅಸ್ಮಿತೆಯನ್ನು ಮುನ್ನೆಲೆಗೆ ತಂದಿತು. ಇದು ವರ್ಷಾನುಗಟ್ಟಲೇ ಚರ್ಚೆಗೂ ಕಾರಣವಾಯಿತು. ಯು.ಆರ್. ಅನಂತಮೂರ್ತಿಯವರು, ಬಳಿಕ ಕುವೆಂಪು ಅವರು ಬಸವಲಿಂಗಪ್ಪ ಅವರ ಬೆಂಬಲಕ್ಕೆ ನಿಂತರೇ ವಿನಃ ಪ್ರಬಲ ಸಮುದಾಯದ ಸಾಹಿತಿಗಳು ಪ್ರತಿಕ್ರಿಯೆ ಕೊಡುವ ಗೋಜಿಗೆ ಹೋಗಲಿಲ್ಲ. ಶೂದ್ರ ಸಮುದಾಯದ ಸಾಹಿತಿಗಳೂ ಬೆಂಬಲಕ್ಕೆ ನಿಲ್ಲಲಿಲ್ಲ. ಮೈಸೂರು, ಬೆಂಗಳೂರು ಕಾಲೇಜುಗಳಲ್ಲಿ ಈ ವಿವಾದ ಎಷ್ಟರಮಟ್ಟಿಗೆ ಎಂದರೆ ಬಸವಲಿಂಗಪ್ಪ ಪರ- ವಿರೋಧಿ ವಿದ್ಯಾರ್ಥಿ ಬಣಗಳು ಪರಸ್ಪರ ಸೆಣಸಾಡುವ ಮಟ್ಟಕ್ಕೆ ಹೋಗಿಬಿಟ್ಟಿತು. ಬಹುಶಃ ದಲಿತರ ಸ್ವಾಭಿಮಾನ ಕೆಣಕಿದ್ದು ಇಂತಹ ಘಟನೆಗಳೇ.

ಆ ಕಾಲಕ್ಕೆ ಮಹಾರಾಷ್ಟ್ರದಲ್ಲಿ ಸಂಘಟನೆ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ತನ್ನದೇ ಆದ ಪ್ರಭಾವ ಬೆಳೆಸಿಕೊಂಡಿದ್ದ ದಲಿತ್ ಪ್ಯಾಂಥರ್ಸ್ ದೊಡ್ಡ ಮಟ್ಟದ ಸದ್ದು ಮಾಡುತ್ತಿತ್ತು. ಇದರಲ್ಲಿ ಮುಂಚೂಣಿಯಲ್ಲಿದ್ದವರು ಸಾಹಿತಿಗಳೇ. ಇದು ಕರ್ನಾಟಕದ ಮೇಲೂ ಪ್ರಭಾವ ಬೀರಿತು. ಇದೇ ಹೊತ್ತಿಗೆ, ದಲಿತರ ಮೇಲಿನ ದೌರ್ಜನ್ಯಗಳು ನಡೆದಾಗ ಪ್ರಬಲ ಜಾತಿಯ ಲೇಖಕರು, ಹೋರಾಟಗಾರರು ಬೆಂಬಲಕ್ಕೆ ನಿಲ್ಲಲಿಲ್ಲ. ಈ ಅಸಹನೆಯೂ ದಲಿತರಲ್ಲಿ ತಮ್ಮದೇ ಸಂಘಟನೆ ಬೇಕೆಂಬ ಆಕಾಂಕ್ಷೆ ಹುಟ್ಟಲು ಕಾರಣವಾಯಿತು. ಆಗ, ದಲಿತ್ ಪ್ಯಾಂಥರ್ಸ್‌ನ ಪ್ರಣಾಳಿಕೆಯನ್ನು ದೇವನೂರ ಮಹಾದೇವ ಕನ್ನಡಕ್ಕೆ ಅನುವಾದಿಸಿದರು. ಇದು, ದಲಿತ ಲೇಖಕರು, ಹೋರಾಟಗಾರರಲ್ಲಿ ಸಂಚಲನವನ್ನೇ ಮೂಡಿಸಿತು. ಇದರ ಮುಂದುವರಿದ ಭಾಗವಾಗಿ 'ದಲಿತ ಲೇಖಕರ, ಕಲಾವಿದರ ಬಳಗ (ದಲೇಕ)' ತಲೆ ಎತ್ತಿತು. ಇಂದೂಧರ ಹೊನ್ನಾಪುರ, ರಾಮದೇವ ರಾಕೆ, ಶಿವಾಜಿಗಣೇಶನ್, ಗೋವಿಂದಯ್ಯ, ದೇವನೂರು ಶಿವಮಲ್ಲು ನೇತೃತ್ವದಲ್ಲಿ 'ಪಂಚಮ' ಪತ್ರಿಕೆ ಶುರುವಾಯಿತು. ದಲಿತರ ಮೇಲೆ ನಡೆದ ದೌರ್ಜನ್ಯದ ಸವಿಸ್ತಾರ ವರದಿಗಳಿಗೆ ಪಂಚಮ ಧ್ವನಿಯಾಗಿತ್ತು. ದಲೇಕ ಸಂಘಟನೆ, ಚಳವಳಿ ತೀವ್ರಗೊಳ್ಳುತ್ತಾ ಹೋದಂತೆ ಅಂಬೇಡ್ಕರ್ ಅವರ ಬರೆಹಗಳನ್ನು ಕನ್ನಡಕ್ಕೆ ತರುವ ಕೆಲಸ ಮೊದಲಾಯಿತು. ಹಾಡು, ಕತೆ, ನಾಟಕಗಳು ಪ್ರಕಟವಾಗತೊಡಗಿದವು. ಅಲ್ಲಿಯವರೆಗೆ ಕನ್ನಡ ಸಾಹಿತ್ಯದಲ್ಲಿ ಕತ್ತಲ ಲೋಕವೇ ಆಗಿದ್ದ, ದಲಿತ ಸಮುದಾಯದ ಚಿತ್ರಣಗಳು ಅಕ್ಷರರೂಪದಲ್ಲಿ ಜೀವ ತಳೆಯ ತೊಡಗಿದವು. ಹೀಗೆ ಮೂಡಿದ ಜಾಗೃತ ಪ್ರಜ್ಞೆಯು ಸಮಾವೇಶ ನಡೆಸುವ ಮಟ್ಟಿಗೆ ವಿಸ್ತಾರಗೊಂಡಿತು.

ಸಮಾವೇಶ ನಡೆಸಲು, ಕರಪತ್ರ ಮುದ್ರಿಸಲು ಹಣವೂ ಇರಲಿಲ್ಲ. ಈ ಹೊತ್ತಿನೊಳಗೆ ರಾಜ್ಯದ ಪ್ರಬಲ ಕೈಗಾರಿಕಾ ಕ್ಷೇತ್ರವಾಗಿದ್ದ ಭದ್ರಾವತಿಯಲ್ಲಿ ವಿಐಎಸ್‌ಎಲ್, ಎಂಪಿಎಂ ಕಾರ್ಖಾನೆಗಳು ಸಕ್ರಿಯವಾಗಿದ್ದವು. ಅಲ್ಲಿ ಕೆಲಸ ಮಾಡುತ್ತಿದ್ದವರು ಸಮಾವೇಶ ನಡೆಸುವ ಹೊಣೆ ಹೊತ್ತರು. ಎರಡು ದಿನದ ಸಮಾವೇಶದಲ್ಲಿ ಬಸವಲಿಂಗಪ್ಪ, ಶಾಸಕರಾಗಿದ್ದ ದಾವಣಗೆರೆಯ ಬಿ.ಎಂ. ತಿಪ್ಪೇಸ್ವಾಮಿ, ಪ್ರೊ. ಬಿ. ಕೃಷ್ಣಪ್ಪ, ವಿ.ಟಿ. ರಾಜಶೇಖರ್, ದೇವನೂರ ಮಹಾದೇವ, ಎನ್. ಗಿರಿಯಪ್ಪ, ಚಂದ್ರಪ್ರಸಾದ್ ತ್ಯಾಗಿ, ಬಿ. ರಾಜಣ್ಣ, ಇಕ್ಬಾಲ್, ಇಂದೂಧರ ಹೊನ್ನಾಪುರ, ಎನ್. ವೆಂಕಟೇಶ್, ಸಿದ್ಧಲಿಂಗಯ್ಯ, ಕೋಟಿಗಾನಹಳ್ಳಿ ರಾಮಯ್ಯ ಇವರೆಲ್ಲ ಭಾಗಿಯಾಗಿದ್ದರು. ಇದು, ದಲಿತ ಚಳವಳಿ ಕಟ್ಟಲು ಕಾರಣವಾದ ಮೊದಲ ಸಾಂಸ್ಥಿಕ ಹೆಜ್ಜೆ. ಅನೇಕ ಹಂತದ ಚರ್ಚೆಯ ಬಳಿಕ, ಪ್ರೊ. ಬಿ.ಕೃಷ್ಣಪ್ಪನವರು 1974ರಲ್ಲಿ ನೋಂದಣಿ ಮಾಡಿಸಿದ್ದ ದಸಂಸ ಅಧಿಕೃತ ಸಂಘಟನೆಯಾಗಿ ಹೊರಹೊಮ್ಮಿತು.

ದಸಂಸದ ಪ್ರಧಾನ ಆಶಯವನ್ನು ಪ್ರಣಾಳಿಕೆಯಲ್ಲಿ ಬಿಂಬಿಸಲಾಗಿತ್ತು. ಎಲ್ಲ ಜಾತಿಯಲ್ಲೂ ಅಪಮಾನಿತರಾಗಿರುವ ಬಡವರು, ಹಿಂದೂ ಶ್ರೇಣಿಕೃತ ವ್ಯವಸ್ಥೆಯಡಿ ಅವಮಾನಕ್ಕೆ ಒಳಗಾಗುತ್ತಿರುವ ತಳಸಮುದಾಯದವರನ್ನು ಒಗ್ಗೂಡಿಸುವುದೇ ದಸಂಸದ ಗುರಿಯಾಗಿತ್ತು. ಆರಂಭಿಕ ಅನೇಕ ವರ್ಷಗಳಲ್ಲಿ ಎಲ್ಲ ಜಾತಿಗೆ ಸೇರಿದವರು ದಸಂಸದ ಪದಾಧಿಕಾರಿಗಳಾಗಿದ್ದರು. ತುಳಿತಕ್ಕೆ ಒಳಗಾದವರನ್ನು ಸಂಘಟಿಸಿ, ಶಾಂತಿಯ ಮಾರ್ಗದಲ್ಲಿ ನ್ಯಾಯಕ್ಕಾಗಿ ಹೋರಾಟ ನಡೆಸುವುದೇ ಪ್ರಧಾನ ಉದ್ದೇಶವಾಗಿತ್ತು. ಸಾಮಾಜಿಕ ನ್ಯಾಯಕ್ಕಾಗಿ ಹೋರಾಟವೇ ಆಶಯವಾಗಿತ್ತು.

ವಿಘಟನೆಯ ಹಾದಿ: 1976ರ ಹೊತ್ತಿಗೆ ಪ್ರವರ್ಧಮಾನಕ್ಕೆ ಬಂದಿದ್ದ ದಸಂಸ 1983ರ ಹೊತ್ತಿಗೆ ಮೊದಲ ಒಡಕು ಕಂಡಿತು.

ಸರ್ಕಾರಕ್ಕೆ ದಸಂಸ ಮುಟ್ಟಿಸುತ್ತಿದ್ದ ಬಿಸಿಯನ್ನು ತಾಳಿಕೊಳ್ಳುವುದು ಆಳುವವರಿಗೆ ಸುಲಭದ ಮಾತಾಗಿರಲಿಲ್ಲ. 'ಆಂಧ್ರ ಪ್ರದೇಶ ಸರ್ಕಾರ ಅಲ್ಲಿನ ಕ್ರಾಂತಿಕಾರಿ ಕವಿ, ಲೇಖಕರ ತಲೆಗೆ ₹5 ಲಕ್ಷ, ₹10 ಲಕ್ಷ ಬಹುಮಾನ ಘೋಷಿಸಿತ್ತು. ಹಿಡಿದು ತಂದವರಿಗೆ ಅಥವಾ ತಲೆ ತಂದವರಿಗೆ ಅದು ಬಹುಮಾನ ಕೊಡುತ್ತಿತ್ತು. ಆದರೆ, ಕರ್ನಾಟಕದ ರಾಜಕಾರಣಿಗಳು ಅತಿ ಬುದ್ಧಿವಂತರು. ಕವಿಗಳ ತಲೆಗೆ ದುಡ್ಡು ಕಟ್ಟುವ ಬದಲಿಗೆ, ವಿಧಾನಪರಿಷತ್ತಿನ ಸದಸ್ಯ ಸ್ಥಾನ, ಅಕಾಡೆಮಿಯ ಅಧ್ಯಕ್ಷ ಸ್ಥಾನ, ಇಲ್ಲವೇ ಯಾವುದೋ ಸಂಸ್ಥೆಯ ಮುಖ್ಯಸ್ಥರನ್ನಾಗಿ ಮಾಡಿ ಬಿಡುತ್ತದೆ. ಆಗ ಸರ್ಕಾರವನ್ನು ವಿರೋಧಿಸುವವರು ಸರ್ಕಾರದ ಭಾಜಾಭಜಂತ್ರಿಗಳಾಗಿ ಕೆಲಸ ಮಾಡಲಾರಂಭಿಸುತ್ತಾರೆ; ಹೋರಾಟವೂ ದಿಕ್ಕು ತಪ್ಪಿ ಬಿಡುತ್ತದೆ' ಎಂದು ತೆಲುಗಿನ ಕ್ರಾಂತಿಕಾರಿ ಕವಿ ವರವರರಾವ್ ಹೇಳಿದ್ದ ಮಾತು ನೆನಪಾಗುತ್ತಿದೆ. ಪ್ರಬಲ ಜಾತಿಗೆ ಸೇರಿದ ಮುಖ್ಯಮಂತ್ರಿಗಳು ಕರ್ನಾಟಕದಲ್ಲಿ ಹೀಗೆ ಮಾಡುವ ಮೂಲಕ ದಸಂಸದ ಒಂದೊಂದೇ ಗಳವನ್ನು ಹಿರಿದು, ಅದನ್ನು ದುರ್ಬಲಗೊಳಿಸಿದ್ದು ಇತಿಹಾಸ.

ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ಅಧಿಕಾರ ಸಿಕ್ಕವರು ಒಂದು ಪಕ್ಷದ ಚುಂಗು ಹಿಡಿದು ಹೋದರು. ಸಿಗದವರು ತಮ್ಮ ಪ್ರತಿಷ್ಠೆಗಾಗಿ ಮತ್ತೊಂದು ಬಣವನ್ನು ಕಟ್ಟಿಕೊಳ್ಳುತ್ತಾ ಹೋದರು.

1990ರ ದಶಕದಲ್ಲಿ ದಲಿತರ ಚೈತನ್ಯವನ್ನೇ ನೆಚ್ಚಿಕೊಂಡು ಬಿಎಸ್‌ಪಿ ಕಟ್ಟಿದ್ದ ಕಾನ್ಶಿರಾಂ ಹಾಗೂ ಮಾಯಾವತಿಯರ ನಾಯಕತ್ವ ಕರ್ನಾಟಕದ ದಸಂಸ ನಾಯಕರನ್ನು ಆಕರ್ಷಿಸಿತು. ದಸಂಸದ ಪ್ರಬಲ ಗುಂಪು ಬಿಎಸ್‌ಪಿ ಜತೆಗೆ ಹೋಯಿತು. ಹೀಗೆ, ದಸಂಸದ ಬೇರೆ ಬೇರೆ ಬಣಗಳು, ಬಿಎಸ್‌ಪಿಯ ಮತ್ತೊಂದು ಗುಂಪು ವಿಭಜನೆಯಾಗುತ್ತಲೇ ಹೋಗಿದ್ದರಿಂದಾಗಿ ದಲಿತರಿಗೆ ಸಾಮೂಹಿಕ ನಾಯಕತ್ವದ ಪ್ರಬಲ ಸಂಘಟನೆಯೇ ಇಲ್ಲವಾಯಿತು.

ಎಲ್ಲ ಮಿತಿಗಳ ಮಧ್ಯೆಯೇ, ದಸಂಸದ ಬಹುಬಣಗಳು ಒಟ್ಟಾಗುವತ್ತ ಹೆಜ್ಜೆ ಇಟ್ಟಿವೆ. ಒಗ್ಗಟ್ಟನ್ನು ಒಡೆಯುವ ತಂತ್ರಗಾರಿಕೆ ಬಿಜೆಪಿ-ಕಾಂಗ್ರೆಸ್ ನಾಯಕರಿಗೆ ಗೊತ್ತಿಲ್ಲದೇ ಇಲ್ಲ. ಈ ಒಗ್ಗೂಡುವಿಕೆಯು ಯಾವುದೋ ಪಕ್ಷವೊಂದರ ಕಾಲಾಳುಗಳಾಗುವ ಅಪಾಯದ ಬಲೆ-ಭರ್ಜಿಯಿಂದ ಪಾರಾಗಬೇಕಿದೆ. ಹಾಗೆಯೇ, ಒಳಮೀಸಲಾತಿಯ ವಿಷಯವನ್ನು ಆದ್ಯತೆಯಾಗಿಸಿಕೊಳ್ಳಬೇಕಿದೆ. ಒಳ ಮೀಸಲಾತಿ ಬೇಡಿಕೆಯ ಅಧ್ಯಯನಕ್ಕಾಗಿ 20 ವರ್ಷದ ಹಿಂದೆ ರಚಿಸಲಾಗಿದ್ದ ನ್ಯಾ. ಎ.ಜೆ. ಸದಾಶಿವ ಆಯೋಗ ವರದಿಯನ್ನೂ ನೀಡಿದೆ. ಸರ್ಕಾರ-ಪ್ರತಿಪಕ್ಷದಲ್ಲಿರುವ ಬಹುತೇಕರು ಒಳಮೀಸಲಾತಿಯ ಬಗ್ಗೆ ಧ್ವನಿ ಎತ್ತದಿರುವುದು ಅಥವಾ ವಿರೋಧ ವ್ಯಕ್ತಪಡಿಸುವುದು ನಡೆದೇ ಇದೆ. ಮೀಸಲಾತಿಯನ್ನು ಉಳಿಸಿಕೊಳ್ಳುವ ಜತೆಗೆ, ಅದರ ಫಲವನ್ನು ಈವರೆಗೆ ಕಾಣದೇ ಇರುವ ತಮ್ಮದೇ ಸಮುದಾಯದವರ ಹಿತವನ್ನು ಕಾಪಾಡಿ, ಅವರನ್ನು ತಮ್ಮೊಟ್ಟಿಗೆ ಕರೆದೊಯ್ಯುವ ಇಚ್ಛಾಶಕ್ತಿಯನ್ನೂ ದಸಂಸ ನಾಯಕರು ತೋರಬೇಕಾಗಿದೆ.

'ಹೌದು, ಇದು ಸಾಹಸ, ಚಾರಿತ್ರಿಕ'

ದಸಂಸ ಮೈತಳೆದು ಅರ್ಧಶತಮಾನ ಆಗುತ್ತ ಬಂತು. ಈ ಕಾಲಾವಧಿಯಲ್ಲಿ ಅದು ಸಮಾಜದ ಕಲ್ಲುಮುಳ್ಳಿನ ಹಾದಿಯಲ್ಲಿ ನಡೆದಿದೆ. ವಿಜೃಂಭಿಸಿದೆ, ನೊಂದಿದೆ, ಬೆಂದಿದೆ, ಕೊನೆಗೆ ಚೂರು-ಚೂರಾಗಿ ಒಂಟೊಂಟಿಯಾಗಿ ನಗಣ್ಯವಾಗಿಬಿಟ್ಟಿತು.

ದಸಂಸ ಹುಟ್ಟಿದ ಗಳಿಗೆಯಿಂದಲೂ ಒಂದಿಷ್ಟು ಕಂಡುಂಡಿದ್ದೇನೆ. ಆಗ, ಹುಟ್ಟಿದ ಕೂಸೊಂದು ತಾಯಿ ಹಾಲಿಗೆ ಅಳುವಂತೆ ಎಲ್ಲರದೂ ಒಕ್ಕೊರಲ ದನಿಯಾಗಿತ್ತು. ಅದು ಹಾಡಾಯ್ತು. ಘೋಷಣೆಗಳಾದವು. ಗೋಡೆ ಬರಹಗಳಾದವು. ಹೋರಾಟಗಳಾದವು. ಆ ಹೋರಾಟಗಳಿಂದಾಗಿ ಸರ್ಕಾರಗಳು ಜನಪರ ಕಾಯ್ದೆಗಳನ್ನು ಜಾರಿಗೆ ತಂದವು ಕೂಡ.

ಹೌದು, ಹೀಗಿತ್ತು. ನೆನಪಿರಲಿ, ಆ ಕಾಲದಲ್ಲಿ ತನ್ನೆಲ್ಲಾ ಮಿತಿಗಳೊಡನೆ ಸಮಾಜದಲ್ಲಿ ವಂಚಿತರಿಗೆ ಸ್ವಲ್ಪವಾದರೂ ದಕ್ಕಬೇಕು ಎಂಬ ಮನಃಸ್ಥಿತಿ ಸ್ವಲ್ಪವಾದರೂ ಇತ್ತು. ಈ ಕಾಲದಲ್ಲಿ ಇದು ಉಲ್ಟಾ ಹೊಡೆದಿದೆ. ಹೆಚ್ಚು ದಕ್ಕಿದವರಿಗೆ ಇನ್ನೂ ಹೆಚ್ಚು ದಕ್ಕಬೇಕು ಎಂಬ ದುಃಸ್ವಪ್ನ ಆಳ್ವಿಕೆ ನಡೆಸುತ್ತಿದೆ. ಇಲ್ಲದಿದ್ದರೆ ಇಡಬ್ಲ್ಯುಎಸ್ ಮೀಸಲಾತಿ ಹೇಗೆ ಬಂತು? ಈ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಬಹುಮತದಿಂದ ಎತ್ತಿ ಹಿಡಿದಿದೆಯಲ್ಲಾ? ನಾವು ಅಳಬೇಕೋ ನಗಬೇಕೋ? ತಳಸಮುದಾಯಗಳ ಮಕ್ಕಳ ವಿದ್ಯಾರ್ಥಿವೇತನಗಳಿಗೂ ಕನ್ನ ಹಾಕುತ್ತಿದೆ ಈ ಸರ್ಕಾರ.

ಒಟ್ಟಿನಲ್ಲಿ ಆಳ್ವಿಕೆ ನಡೆಸಲು ಅರ್ಹತೆ ಇಲ್ಲದವರು ಆಳ್ವಿಕೆ ನಡೆಸುತ್ತಿದ್ದಾರೆ. ಭಾರತ ಮಾತೆ ಅಳುತ್ತಿದ್ದಾಳೊ, ನಗುತ್ತಿದ್ದಾಳೊ? ಕಡುಕಷ್ಟ. ಆಳ್ವಿಕೆ ನಡೆಸುತ್ತಿರುವವರು ವಾಸ್ತವಕ್ಕೆ ಮುಖಾಮುಖಿಯಾಗದೆ ತಮ್ಮ ಅಪರಾಧಗಳನ್ನು ಮಸುಕು ಮಾಡಲು ದೇವರು-ದೇವಸ್ಥಾನಗಳ ಮೊರೆಹೋಗುತ್ತಿದ್ದಾರೆ. ಮಾಡಬಾರದನ್ನೆಲ್ಲಾ ಮಾಡಿ ಶಂಖ ಊದುತ್ತಿದ್ದಾರೆ. ಇಂದು ಮನುಷ್ಯರು ಆಳ್ವಿಕೆ ಮಾಡುತ್ತಿದ್ದಾರೊ ಅಥವಾ ಸುಳ್ಳು ಭ್ರಮೆ ವಂಚನೆಗಳೇ ಮನುಷ್ಯರೂಪ ತಳೆದು ಆಳ್ವಿಕೆ ನಡೆಸುತ್ತಿವೆಯೋ ಗೊತ್ತಾಗುತ್ತಿಲ್ಲ!

ಇಂಥ ಕಡುಕಷ್ಟದ ಕಾಲದಲ್ಲಿ ತಾನೇ ಕಡುಕಷ್ಟದಲ್ಲಿರುವ ದಸಂಸ- ಮತ್ತೆ ಒಗ್ಗಟ್ಟಿಗೆ ಪ್ರಯತ್ನಿಸುತ್ತಿದೆ. ಇದು ಖಂಡಿತ ಚಾರಿತ್ರಿಕ. ಈ ಗೆಳೆಯರ ಎದೆಗಾರಿಕೆಗೆ ಅಭಿನಂದಿಸುವೆ. ಕೃತಜ್ಞತೆ ಸಲ್ಲಿಸುವೆ. ಮುಂದಿನ ಯಶಸ್ಸು-ಸಂಘಟನೆಯ ಹಳೆಬೇರುಗಳು ಭೂಮಿ ಒಳಗೆ ಇದ್ದು ಆಲಿಸುತ್ತಾ ಹೊಸ ಚಿಗುರು ಭೂಮಿ ಮೇಲೆ ನಳನಳಿಸುತ್ತಾ ಫಸಲು ನೀಡುವ ವಾತಾವರಣ ಸೃಷ್ಟಿಸುವುದರಲ್ಲಿದೆ. ಸ್ವಾಯತ್ತ ಕಲಾ ಮಾಧ್ಯಮ, ಮಹಿಳಾ ಸಂಘಟನೆ, ವಿದ್ಯಾರ್ಥಿ-ಯುವ ಸಂಘಟನೆಗಳಿಗೆ ತಾನು ವೇಗವರ್ಧಕ ಮಾತ್ರವಾಗುವ ವಿವೇಕದಲ್ಲಿದೆ. ಇದನ್ನು ಆಶಿಸುವೆ. ನಂಬುವೆ. ಈ ಸಾಹಸದ ಸಭೆಯಲ್ಲಿ ನಾನು ಭಾಗವಹಿಸಲಾಗದಿರುವುದಕ್ಕೆ ಕ್ಷಮೆ ಇರಲಿ, ಎಲ್ಲರಲ್ಲೂ.



ದೇವನೂರ ಮಹಾದೇವ, ಸಾಹಿತಿ

'ವೈರುಧ್ಯಗಳ ನಡುವೆ ಒಂದಾಗುವುದು ಸ್ವಾಗತ'

ಅಂತರ್ಗತವಾದ ಅನೇಕ ವೈರುಧ್ಯಗಳಿವೆ. ಏನೇ ವೈರುಧ್ಯಗಳಿದ್ದರೂ ಒಂದಾಗುವುದು ಸ್ವಾಗತ. 1991ರಲ್ಲಿ ಜನಕಲಾ ಮೇಳದಲ್ಲಿ ದಲಿತ ಚಳವಳಿಯಿಂದ ಹೊರಗೆ ಬಂದೆ. ಒಳಗೆ ಕರೆದಾಗೆಲ್ಲ ಹೋಗಿ ಇದೇ ಮಾತುಗಳನ್ನು ಹೇಳಿ ಬಂದಿದ್ದೇನೆ. ಸಮುದಾಯದ ಭಾಗವಾಗಿ ಪಾಲ್ಗೊಳ್ಳಬೇಕಿರುವುದು ನಮ್ಮೆಲ್ಲರ ಕರ್ತವ್ಯ. ಆ ಕಾರಣಕ್ಕಾಗಿ ನಾನು ಭಾಗವಹಿಸುತ್ತಿದ್ದೇನೆ. ಸಾಂಸ್ಕೃತಿಕ ಪ್ರತಿರೋಧ ಎಂದು ಕರೆಯಲಾಗಿದೆ. ಕವಿಗಳು, ಬರಹಗಾರರು, ಕಲಾವಿದರು, ಚಿಂತಕರ ಒಳದ್ರವ್ಯದಿಂದ ಸಾಂಸ್ಕೃತಿಕ ಪ್ರತಿರೋಧವನ್ನು ಕಟ್ಟಬೇಕಿದೆ. ಈಗ ಕಟ್ಟುತ್ತಿರುವ ಸಾಂಸ್ಕೃತಿಕ ಪ್ರತಿರೋಧದಲ್ಲಿ ಈ ಅಂಶಗಳು ಇಲ್ಲ. ಎಲ್ಲರನ್ನೂ ಒಳಗೊಳ್ಳುವ ತೆರೆದ ಮನಸ್ಸಿನ ಸ್ವೀಕಾರವೂ ಕಾಣಿಸುತ್ತಿಲ್ಲ. ಈಗ ಒಗ್ಗೂಡುತ್ತಿರುವವರು ಈ ಏಕತೆಯನ್ನು ಒಂದು ಅಗತ್ಯವಾಗಿಯಷ್ಟೇ ನೋಡುತ್ತಿದ್ದಾರೆ. ಡಿ.6ರ ಸಮಾವೇಶದಲ್ಲಿ ಮಾದಿಗ ಸಮುದಾಯದವರು ಎಷ್ಟಿರುತ್ತಾರೆ ಎಂದು ಕೆಲವರು ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನಿಸಿದ್ದರು. ಮಾದಿಗ ಸಮುದಾಯದವರು ಮತ್ತು ಮಹಿಳೆಯರು ಶೇ 100ರಷ್ಟು ಇರಬೇಕು. ಅಲ್ಲದೇ, ಅದಕ್ಕೂ ಕೆಳಸ್ತರದಲ್ಲಿರುವ ಸಮುದಾಯಗಳನ್ನೂ ಒಳಗೊಳ್ಳಬೇಕು. ಈಗ ಈ ವರ್ಗಗಳಲ್ಲಿ ನವಕುಬೇರಿಕೆ ಇರುವ ಹಿತಾಸಕ್ತಿ ಗುಂಪುಗಳು ಹುಟ್ಟಿಕೊಂಡಿವೆ. ಇವು ಬದಲಾವಣೆಗೆ ಅಡ್ಡಿಯಾಗಿವೆ. ಈ ವಿಷಯಗಳನ್ನು ದಲಿತ ಮಧ್ಯಮ ವರ್ಗ ಕಟುವಾಗಿ ವಿಮರ್ಶಿಸಿಕೊಳ್ಳುವ ಅಗತ್ಯವಿದೆ.

ಕೋಟಿಗಾನಹಳ್ಳಿ ರಾಮಯ್ಯ, ಚಿಂತಕ

'ಒಗ್ಗಟ್ಟಿನ ಪ್ರತಿರೋಧ ಇಂದಿನ ಅಗತ್ಯ'

ದಲಿತ ಸಂಘರ್ಷ ಸಮಿತಿ ಆರಂಭದಲ್ಲಿ ದಲಿತರ ಭೂಮಿಯ ಹಕ್ಕಿನ ಪರವಾಗಿ ದೌರ್ಜನ್ಯಗಳ ವಿರುದ್ಧದ ಶಕ್ತಿಯಾಗಿ ನಿಂತಿತ್ತು. ಅಷ್ಟೇ ಅಲ್ಲದೆ ಸಾಂಸ್ಕೃತಿಕ ಮತ್ತು ರಾಜಕೀಯ ಚಳವಳಿಯಾಗಿಯೂ ಬೆಳೆಯಿತು. ಅದರಿಂದಾಗಿ ಸಂಘಟನೆಗೆ ಘನತೆಯೂ ಬಂದಿತ್ತು. ನಂತರದ 10ರಿಂದ 12 ಸಂಘಟನೆಗಳಾಗಿ ಭಾಗವಾಗಿದ್ದರಿಂದ ಶಕ್ತಿ ಕುಂದಿದಂತಾಗಿತ್ತು. ಇಂದಿನ ಸಂದರ್ಭಕ್ಕೆ ಒಮ್ಮತದ ಹೋರಾಟ ಅಗತ್ಯ ಎಂದು ಭಾವಿಸಿ ಅಂತಿಮವಾಗಿ ಒಂದಾಗುವ ನಿರ್ಧಾರಕ್ಕೆ ಬಂದಿದ್ದೇವೆ. ಬಿಜೆಪಿ ಮತ್ತು ಸಂಘ ಪರಿವಾರದ ಆಡಳಿತ ಶುರುವಾದ ಬಳಿಕ ಶೋಷಿತರ ವಿರುದ್ಧದ ದಮನಕಾರಿ ನೀತಿಗಳು ಹೆಚ್ಚಾಗುತ್ತಿವೆ. ಘನತೆ ಮತ್ತು ಗೌರವದಿಂದ ಬದುಕಲು ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗುತ್ತಿದೆ. ವಿದ್ಯಾರ್ಥಿವೇತನ ರದ್ದುಗೊಳಿಸಿರುವುದು ಇದಕ್ಕೆ ಸಾಕ್ಷಿ. ಇಂತಹ ಸಂದರ್ಭದಲ್ಲಿ ದಲಿತ ಚಳವಳಿ ಬಲಗೊಳ್ಳಬೇಕಿದೆ, ಒಗ್ಗಟ್ಟಿನಿಂದ ಪ್ರತಿರೋಧ ಒಡ್ಡುವ ಅಗತ್ಯವಿದೆ. ಈ ದಿಸೆಯಲ್ಲಿ ಡಿಸೆಂಬರ್ 6ರಂದು ನಡೆಯುತ್ತಿರುವ ಕಾರ್ಯಕ್ರಮ ಯಶಸ್ವಿಯಾಗಲಿದೆ.



ಎನ್.ವೆಂಕಟೇಶ್, ದಸಂಸ ನಾಯಕ

'ಹಕ್ಕಿನ ಪ್ರತಿಪಾದನೆಗೆ ಒಂದುಗೂಡುವ ಕಾಲವಿದು'

70ರ ದಶಕದಲ್ಲಿ ಸಾಮಾಜಿಕ, ರಾಜಕೀಯ ಒತ್ತಡದ ಕಾರಣದಿಂದ ದಲಿತ ಸಂಘರ್ಷ ಸಮಿತಿ ಜೀವ ತಳೆದಿತ್ತು. ಈಗ ಮತ್ತೆ ಅಂತಹದೇ ಒತ್ತಡವೇ ತಾವು ಒಗ್ಗೂಡಬೇಕೆಂಬ ತಹತಹವನ್ನು ಮೂಡಿಸಿದೆ. ಒಂದೆಡೆ ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು ನಿರಂತರ ನಡೆಯುತ್ತಲೇ ಇದ್ದರೆ, ಬಾಬಾ ಸಾಹೇಬರು ನೀಡಿದ ಸಂವಿಧಾನದಡಿ ನಾವು ದಕ್ಕಿಸಿಕೊಂಡ ಸೌಲಭ್ಯಗಳನ್ನು ಸರ್ಕಾರ ಮೊಟಕುಗೊಳಿಸುತ್ತಿದೆ. ಸರ್ಕಾರಿ ಹುದ್ದೆಗಳ ನೇಮಕಾತಿಯೇ ನಿಂತುಹೋಗಿದ್ದು, ಖಾಸಗೀಕರಣದ ಪ್ರಭಾವ ಹೆಚ್ಚುತ್ತಲೇ ಇದೆ. ಇಂತಹ ಹೊತ್ತಿನಲ್ಲಿ ಹಕ್ಕಿನ ಪ್ರತಿಪಾದನೆಗೆ ಒಂದುಗೂಡಿ ಬೇಡಿಕೆ ಮಂಡಿಸುವ ಕಾಲ ಇದಾಗಿದೆ.

ವಿಶ್ವವಿದ್ಯಾಲಯಗಳಲ್ಲಿ ತಳ ಸಮುದಾಯಗಳ ಅಧ್ಯಯನ ವಿಶೇಷವಾಗಿ ನಡೆಯುತ್ತಿತ್ತು. ಅದಕ್ಕೆ ನೀಡುತ್ತಿದ್ದ ಅನುದಾನವನ್ನೇ ನಿಲ್ಲಿಸಲಾಗಿದೆ. ತಳ ಸಮಯದಾಯವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಯ ಅಧ್ಯಯನ ನಡೆದರಷ್ಟೇ ಹಿಂದುಳಿದಿರುವಿಕೆಯ ನೈಜ ದಾಖಲೆ ಸಿಗುತ್ತದೆ. ಹಾಗಾದಲ್ಲಿ, ಸರ್ಕಾರ ತಳಸ್ತರದ ಜನವರ್ಗಗಳಿಗೆ ವಿಶೇಷ ಅನುದಾನ ಕೊಡಬೇಕಾಗುತ್ತದೆ. ಇಂತಹ ಅಧ್ಯಯನವನ್ನೇ ನಿಲ್ಲಿಸಿದರೆ ಹಿಂದುಳಿದಿರುವಿಕೆಯ ನಿಖರ ಅಂಕಿ-ಅಂಶ ಸಿಗುವುದಿಲ್ಲ. ಅನುದಾನ ಕೊಡುವ ಪ್ರಮೇಯವೇ ಉದ್ಭವಿಸುವುದಿಲ್ಲ ಎಂಬ ಲೆಕ್ಕಾಚಾರ ಸರ್ಕಾರದ್ದಾಗಿದೆ. ಅಂಬೇಡ್ಕರ್ ಅವರು ಬದುಕಿ ಬಾಳಿದ್ದ, ಓಡಾಡಿದ್ದ ಜಾಗವನ್ನು ತೀರ್ಥಕ್ಷೇತ್ರದಂತೆ ಮಾಡಿ, ಭಜನಾ ಕೇಂದ್ರಗಳಾಗಿಸುತ್ತಿದೆ. ಹೀಗೆ ಮಾಡುವ ಮುಖೇನ ಅಂಬೇಡ್ಕರ್ ಆಶಯಗಳಿಗೆ ಸಮಾಧಿ ಕಟ್ಟಿ, ಜಾಗೃತ ಪ್ರಜ್ಞೆ ಹೆಚ್ಚದಂತೆ ಸರ್ಕಾರ ನಡೆದುಕೊಳ್ಳುತ್ತಿದೆ. ದಲಿತರಿಗೆ ಇದ್ದ ಅವಕಾಶವನ್ನು ವಂಚಿಸುವುದು, ಸಾಂಸ್ಕೃತಿಕ ವಿಸ್ಮೃತಿಗೆ ದೂಡುವ ಹುನ್ನಾರ ನಡೆಸುತ್ತಿದೆ. ಇಂತಹ ಹೊತ್ತಿನಲ್ಲಿ ನಮ್ಮ ಒಗ್ಗೂಡುವಿಕೆ, ಹೋರಾಟ ಮಾತ್ರ ನಮ್ಮನ್ನು ಬದುಕುಳಿಸಬಲ್ಲದು. ವಿವಿಧ ಕಾರಣಗಳಿಗೆ ಒಡೆದ ಮನಸ್ಸುಗಳನ್ನು, ವಿಘಟನೆಗೊಂಡಿದ್ದ ಸಂಘಟನೆಗಳನ್ನು ಈ ಸಮಾವೇಶದ ಮೂಲಕ ಒಗ್ಗೂಡಿಸುವ ಕೆಲಸವನ್ನು ಮಾಡುತ್ತಿದ್ದೇವೆ.

ಇಂದೂಧರ ಹೊನ್ನಾಪುರ, ಪತ್ರಕರ್ತ, ದಸಂಸ ನಾಯಕ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಡಿಸೆಂಬರ್ 5, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ತ್ರಯೋದಶಿ ಅಹೋರಾತ್ರ ನಕ್ಷತ್ರ: ಅಶ್ವಿನಿ ಗಂ. 07-15, ಯೋಗ: ಪರಿಘ ಗಂ. 27-07, ಕರಣ: ಕೌಲವ ಗಂ. 18-20, ವೃಶ್ಚಿಕ ಮಾಸದ 18 ನೇ ದಿನ.
ರಾಹುಕಾಲ: ಬೆಳಿಗ್ಗೆ 07-30-09-00 ಸೂರ್ಯೋದಯ : 06-44 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 10 ಜುಮಾದುಲ್ಲಾವಲ್
ದಿನ ವಿಶೇಷ : ಭರಣಿ ದೀಪಂ, ಚಂದ್ರ ಪ್ರದೋಷ
ಅದೃಷ್ಟ ಸಂಖ್ಯೆ : 3, 8

ಮೇಷ: ಹಂತ ಹಂತವಾಗಿ ನಿಧಾನಗತಿಯಲ್ಲಿ ನಿಮ್ಮ ಆಸೆಗಳು ಈಡೇರಲಿದೆ. ಕೃಷಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಚಿಂತೆ ಮಾಡಬೇಕಾದ ಅಗತ್ಯವಿಲ್ಲ. ಉದ್ವೇಗ ಹಾಗೂ ಕೆಲ ವೈಮನಸ್ಯಗಳು ದೂರಾಗುವುದು.

ವೃಷಭ: ಮನಸ್ಸಿನ ಚಂಚಲ ಸ್ವಭಾವದಿಂದ ಇಂದಿನ ಕಾರ್ಯದಲ್ಲಿ ವಿಫಲರಾಗುವ ಸನ್ನಿವೇಶಗಳಿರುವುದು. ವೈದ್ಯರು ಅದರಲ್ಲೂ ನರರೋಗ ತಜ್ಞರು ಅಭ್ಯಾಸದಲ್ಲಿ ತೋರಿದ ಬೇಜವಾಬ್ದಾರಿತನ ತೋರಲಿದ್ದೀರಿ.

ಮಿಥುನ: ಸಮಯೋಚಿತವಾದ ಬುದ್ಧಿಶಕ್ತಿಯು ಸಂಕಟಗಳನ್ನು ದೂರ ಮಾಡಲಿದೆ. ಅರಸಿ ಬಂದ ಉದ್ಯೋಗವನ್ನು ದೂರಮಾಡುವುದು ನಿಮ್ಮ ಮೂರ್ಖತನಕ್ಕೆ ಉದಾಹರಣೆ. ಪ್ರಯಾಣದಲ್ಲಿ ಎಚ್ಚರವಹಿಸಿ.

ಕರ್ಕಾಟಕ: ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪಿದ ಕಾರಣದಿಂದ ಮನಸ್ಸಿಗೆ ಸಮಾಧಾನ. ರೇಷ್ಮೆ ವ್ಯಾಪಾರಿಗಳಿಗೆ ಸಗಟು ಮಾರಾಟದಿಂದ ಅಧಿಕ ಮಟ್ಟದ ಲಾಭ ಉಂಟಾಗಲಿದೆ. ಸ್ನೇಹಿತರಲ್ಲಿ ವಿಶ್ವಾಸ ವೃದ್ಧಿಯಾಗುವುದು.

ಸಿಂಹ: ಇತರರು ನಿಮ್ಮ ಸಮಯವನ್ನು ಯಾಚಿಸುತ್ತಿರುವುದರಿಂದ ಸ್ವಂತ ಕೆಲಸ ನಿಧಾನ ಗತಿಯಲ್ಲಿ ಸಾಗಲಿದೆ. ಸಮಾಜದಲ್ಲಿ ಹೆಸರು ಸಂಪಾದಿಸಲು ಪೂರಕ ವಾತಾವರಣ ಮೂಡಿ ಬರಲಿದೆ. ಮಹಾಗಣಪತಿಯನ್ನು ಪೂಜಿಸಿ.

ಕನ್ಯಾ: ಮನೆಯಲ್ಲಿ ಹಿತಕರ ವಾತಾವರಣ ಇರುತ್ತದೆ. ವಿದ್ಯಾರ್ಥಿಗಳು ಉದ್ಯೋಗದ, ಹಣದ ಆಸೆಯನ್ನು ಬಿಟ್ಟು ಓದು ಮುಂದುವರೆಸುವುದನ್ನು ನಿರ್ಧರಿಸಿ. ನೀವು ನವಗ್ರಹ ಪೀಡಾ ಪರಿಹಾರ ಸ್ತೋತ್ರ ಪಠಿಸಿದರೆ ಉತ್ತಮ.

ತುಲಾ: ನಿವೃತ್ತಿಯ ನಂತರದ ಕೆಲಸಗಳ ಬಗ್ಗೆ ಹೆಂಡತಿಯೊಡನೆ ಚರ್ಚೆ ನಡೆಸುವಿರಿ. ರಸಗೊಬ್ಬರ ಮತ್ತು ಕೀಟ ನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸ ಕಾಡಲಿದೆ. ಧನವ್ಯಯದಲ್ಲಿ ಗಮನವಿರಲಿ.

ವೃಶ್ಚಿಕ: ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದ ಕೆಲಸ ಆರಂಭಿಸುವಿರಿ. ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ ಮೂಡುವುದು. ವೃತ್ತಿ ಜೀವನವನ್ನು ಗಂಭೀರವಾಗಿ ಪರಿಗಣಿಸಿ.

ಧನು: ಮನೆಯಲ್ಲಿ ಶಾಂತಿ ಹೋಮ ನಡೆಸಲು ಖರ್ಚಿನ ವಿಷಯ ಚರ್ಚೆಗೆ ಬರುವುದು. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುತ್ತದೆ. ಹೂಡಿಕೆಯಿಂದ ಅಧಿಕ ಲಾಭ ಬಂದಿರುವ ಸುದ್ದಿ ತಿಳಿದು ಅತೀವ ಸಂತೋಷಗೊಳ್ಳುವಿರಿ.

ಮಕರ: ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳ ಬೇಕಾಗುವುದು. ಸದಾ ತಾಳ್ಮೆಯಿಂದ ವ್ಯವಹರಿಸಿ. ವೈದ್ಯರು ನೀಡಿದ ಸಲಹೆ ಚಾಚೂ ತಪ್ಪದೆ ಆಚರಿಸುವುದರಿಂದ ಆರೋಗ್ಯ ಹಿಡಿತದಲ್ಲಿ ಇರಿಸಿಕೊಳ್ಳಬಹುದು.

ಕುಂಭ: ತತ್ವ ಆದರ್ಶಗಳ ಜೊತೆಗೆ ಹಿರಿಯರ ಅನುಭವ ಸಲಹೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಿರಿ. ಗುತ್ತಿಗೆದಾರರಿಂದ ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪುನಃ ಪಾಠ ಕಲಿಯುವಂತಾಗುವುದು. ವ್ಯಾಧಿ ದೂರ.

ಮೀನ: ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿರ್ಧಾರವು ಬಹಳ ಅನುಕೂಲಕರ. ಶಿಕ್ಷಕ ವೃತ್ತಿಯವರು ವರ್ಗಾವಣೆ ರದ್ದು ಮಾಡಿಸಿಕೊಳ್ಳುವ ಪ್ರಯತ್ನದಲ್ಲಿ ಯಶಸ್ವಿಯಾಗುವಿರಿ. ಹಣದ ಅಭಾವ ಇರುವುದಿಲ್ಲ.

ಬೆರಗಿನ ಬೆಳಕು

ಗುರುರಾಜ ಕರಜಗಿ

ದ್ವೈತ- ಅದ್ವೈತ

ನೇತ್ರಯುಗಳಂ ಪಿಡಿಗುವೊಂದು ಲಕ್ಷ್ಯವ ಕೂಡಿ
ಹಸ್ತಯುಗ ಸಾಧಿಪುದು ಮನದರ್ಥವೊಂದನ್ ||
ದ್ವೈತದಿಂದದ್ವೈತವದ್ವೈತದೊಳ್ ದ್ವೈತ|
ಚೈತನ್ಯಲೀಲೆಯಿದು - ಮಂಕುತಿಮ್ಮ || 770 ||

ಪದ-ಅರ್ಥ: ನೇತ್ರಯುಗಳಂ = ಎರಡು ಕಣ್ಣುಗಳು, ಪಿಡಿಗುವೊಂದು = ಪಿಡುಗುಮ್ (ಹಿಡಿಯುವವು + ಒಂದು, ಹಸ್ತಯುಗ = ಎರಡು ಹಸ್ತಗಳು, ಮನದರ್ಥವೊಂದನ್ = ಮನದ + ಅರ್ಥ + ಒಂದನ್ (ಒಂದನ್ನು), ದ್ವೈತಂದದ್ವೈತವದ್ವೈಂತದೊಳ್ = ದ್ವೈತದಿಂದ(ಎರಡರಿಂದ) + ಅದ್ವೈತ(ಒಂದು) + ಅದ್ವೈತದೊಳು (ಅದ್ವೈತದಲ್ಲಿ), ಚೈತನ್ಯಲೀಲೆಯಿದು = ಚೈತನ್ಯ(ಪರಮ ಚೇತನದ) + ಲೀಲೆ + ಇದು.

ವಾಚ್ಯಾರ್ಥ: ಎರಡು ಕಣ್ಣುಗಳು ಕೂಡಿ ಒಂದು ಗುರಿಯನ್ನು ಹಿಡಿಯುತ್ತವೆ. ಎರಡು ಕೈಗಳು ಸೇರಿ ಮನದ ಒಂದು ಕಾರ್ಯವನ್ನು ಪೂರೈಸುತ್ತವೆ. ಹೀಗೆ ಎರಡರಿಂದ ಒಂದರ ಸಾಧನೆ, ಒಂದರಲ್ಲಿ ಎರಡರ ಕಾರ್ಯ. ಇದೇ ಪರಮಚೇತನದ ಲೀಲೆ.

ವಿವರಣೆ: ನಮಗೆ ಇರುವುವು ಎರಡು ಕಣ್ಣುಗಳು. ಆದರೆ ಅವೆರಡೂ ಸೇರಿ ಒಂದೇ ವಸ್ತುವನ್ನು ಕಾಣುತ್ತವೆ. ಒಂದೊಂದು ಕಣ್ಣು ಬೇರೆಯದನ್ನೇ ನೋಡುತ್ತಿದ್ದರೆ ಏನಾದರೂ ಕಂಡೀತೇ? ಎರಡು ಕಣ್ಣುಗಳು ಕಾಣುವುದು ಒಂದೇ ನೋಟ.ಇದೇ ದ್ವೈತದಿಂದ ಅದ್ವೈತವಾಗುವ ಬಗೆ. ಅದೇ ರೀತಿ ಎರಡು ಕೈಗಳಾದರೂ ಅವು ಜೊತೆಗೂಡಿ ಮನಸ್ಸಿನಲ್ಲಿ ಬಂದ ಕಾರ್ಯವನ್ನು ಸಾಧ್ಯವಾಗಿಸುತ್ತವೆ. ಮತ್ತೆ ಇದು ದ್ವೈತದಿಂದ ಅದ್ವೈತ ಮೇಲ್ನೋಟಕ್ಕೆ ಎರಡು ಕಣ್ಣುಗಳು ಒಂದು ದೃಷ್ಟಿ, ಎರಡು ಕೈಗಳು ಒಂದೇ ಕಾರ್ಯ ಎಂಬ ಚಿಂತನೆ ಎಂದು ತೋರಿದರೂ, ಆಳದಲ್ಲಿ ಅದರ ವಿಷಯವೇ ಬೇರೆ. ನಮ್ಮ ಅಧ್ಯಾತ್ಮದಲ್ಲಿ ಮೂರು ವಿಷಯಗಳು ಮೂಲದಲ್ಲಿ ಮುಖ್ಯ. ಅವು ಜೀವ, ಜಗತ್ತು ಮತ್ತು ಈಶ್ವರ. ಮೊದಲು ಈಶ್ವರ ಅಥವಾ ಬ್ರಹ್ಮವಸ್ತು ಒಂದೇ ಇತ್ತು. ಅದು ಎರಡಿಲ್ಲದ್ದು-ಅದೇ ಅದ್ವೈತ. ಅದನ್ನು ತೈತ್ತರೀಯ ಉಪನಿಷತ್ "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ" ಎನ್ನುತ್ತದೆ. ಹಾಗೆಂದರೆ ಎರಡನೆಯದೆಂಬುದೇ ಇಲ್ಲವೆಂದ ಮೇಲೆ ಅಲ್ಲಿ ಮಾತಿಗಾಗಲೀಮನಸ್ಸಿಗಾಗಲೀ ಕೆಲಸವೇ ಇಲ್ಲ. ಆದರೆ ಆ ಅದ್ವೈತ ಹಾಗೆಯೇ ಒಂದೇ ಆಗಿ ಉಳಿಯಲಿಲ್ಲ. ತನ್ನ ಮಾಯೆಯಿಂದ ಜಗತ್ತನ್ನು ಸೃಷ್ಟಿಸಿತು. ಅದರಲ್ಲಿ ಕೋಟಿ ಕೋಟಿ ಜೀವರೂಪದಲ್ಲಿ ಹೊರಹೊಮ್ಮಿತು. ಈಗ ಜೀವ ಮತ್ತು ಈಶ್ವರರೆಂಬ ಎರಡಾಗಿ ಕಾಣತೊಡಗಿದರು. ಈಶ್ವರ ಅನಂತ ಶಕ್ತಿಯ ಒಡೆಯ. ಜೀವಅವನದೇ ಒಂದು ಕಿಡಿಯಾದರೂ ಅದು ದೇವರಾಗಲಾರದು. ಹೀಗೆ ಆತ್ಮ ಮತ್ತು ಪರಮಾತ್ಮ ಇಬ್ಬರಾದರು. ಇದು ದ್ವೈತ. ಈ ಚಿಂತನೆ ಒಂದು ವಿರೋಧಾಭಾಸದಂತೆ ತೋರುತ್ತದೆ. ಮೂಲದಲ್ಲಿ ಒಂದೇ ಇದ್ದದ್ದು ಈಗ ಎರಡಾಯಿತು. ಹಾಗೆಂದರೆ ಅದ್ವೈತ, ದ್ವೈತವಾಯಿತು. ಅದು ನಿಜವಾಗಿಯೂ ದ್ವೈತವೇ? ನೀರು ಮರಗಟ್ಟಿದಾಗ ಮಂಜುಗಡ್ಡೆಯಾಗುತ್ತದೆ. ಆಗ ನೀರು ಮತ್ತು ಮಂಜುಗಡ್ಡೆ ಎರಡಾದಂತೆ ತೋರುತ್ತವೆ. ಮಂಜುಗಡ್ಡೆ ಕರಗಿದಾಗ ನೀರಾಗುತ್ತದೆ. ಆಗ ಉಳಿದದ್ದು ಒಂದೇ ನೀರು, ಅದು ಅದ್ವೈತ. ಪರಮಾತ್ಮನ ಒಂದು ಕಿಡಿಯಾದ ಜೀವಾತ್ಮ ಕೊನೆಗೆ ಪರಮಾತ್ಮನ ಬಳಿಗೇ ಹೋಗಿ ಅದ್ವೈತವಾಗುತ್ತದೆ. ಇದು ಚೈತನ್ಯದ ಲೀಲೆ.

ದ್ವೈತಾದ್ವೈತಗಳು ತೋರಿಕೆಗೆ ಎರಡಾಗಿ ಕಂಡರೂ ಮೂಲದಲ್ಲಿ ಒಂದೇ ಆಗಿವೆ ಎಂಬುದು ಕಗ್ಗದ ಮಾತು.

ಪದಬಂಧ 5159

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಆರಂಭವಾಗಿರುವ ಒಕ್ಕಲುತನ! (3)
4.ದೇಹವನ್ನು ನೋಡಿದ್ದಕ್ಕೇ ಈ ಅನುಮಾನ! (3)
6.ನಿಗದಿತ ಬೆಲೆಗಿಂತ ಹೆಚ್ಚು ಹಣವನ್ನು ಬಯಸುವವ (5)
7.ತರತಮ ಮಾಡುವಾಗಲೇ ಆವರಿಸಿದ ಕತ್ತಲು (2)
9.ತಡಬಡ ಮಾಡಿದರೂ ಇದು ನಿಧಾನ (2)
10.ಸರಕ್ಕನೆ ಧರಿಸಿರುವ ಮಾಲೆ (2)
11.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ! (2)
16.ಒಳ್ಳೆತನದ ಸೋಗಿನಲ್ಲಿ ವಂಚನೆ ಮಾಡುವವನು (5)
17.ನಡುವೆಯೇ ಪ್ರಾರಂಭವಾದ ಕಂಪನ (3)
18.ಗತಿಸಿದ ಹಿರಿಯರ ಹುಟ್ಟುಹಬ್ಬ (3)

ಮೇಲಿಂದ ಕೆಳಕ್ಕೆ
1.ಕಾಂತನನ್ನು ಆಕರ್ಷಿಸಿದ ಸೂಜಿಗಲ್ಲು (4)
2.ಈತ ಬಲು ಶಕ್ತಿಶಾಲಿ (3)
3.ಬಲವಂತವಾಗಿ ಖರೀದಿಸಿದ ಚರ್ಮವಾದ್ಯ! (3)
4.ವೆಂಕಟರಮಣ ಎನ್ನುವುದು ಹೀಗೆ ದುಃಖಬಂದಾಗಲೇ! (3)
5.ಕಗ್ಗೊಲೆಯ ಘಟನೆ (4)
8.ಮರವನ್ನೇರಿರುವ ಕೇಕಿ (3)
9.ತರಗುಪೇಟೆಯಲ್ಲಿ ಬಿದ್ದಿರುವ ಒಣಗಿದ ಎಲೆ (3)
10.ನೆಮ್ಮದಿ ಈ ರೀತಿ ಬಂದಿದೆ (4)
12.ಯತಿಗೆ ಸಿಗುತ್ತಿರುವ ಸೋಡಿ (4)
13.ಮಂದಿಯ ಹತ್ತಿರವಿರುವ ತಂದೆ (3)
14.ಆತುರ ಹೀಗೆ ಬಂದಿದೆ (3)
15.ಕಕ್ಕಾಬಿಕ್ಕಿಯಾಗಿರುವ ಪೆದ್ದ (3)

5158ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಕಿತಾಪತಿ 5.ಜಾಯಮಾನ
6.ಕುಡಿನೋಟ 8.ಮಡಿವಾಳ
12.ವನಸುಮ 14.ಅನುಬಂಧ
15.ಅಂತರ್ವಾಣಿ 16.ಯಮಭಾರ

ಮೇಲಿಂದ ಕೆಳಕ್ಕೆ:
1.ಅಜಾತಶತ್ರು 2.ಸಮಾಗಮ
3.ಕಿರುಕುಳ 4.ತಿಕ್ಕಾಟ
7.ನೋವು 9.ವಾಮನ
10.ಮದುವಣಿಗ 11.ಪಾನು
12.ವಧಕಾರ 13.ಮನೆತನ
14.ಅಳಿಯ

ಸುಡೊಕು 5545

9		7					5	
			4		9	8		7
5		8					6	
		6	5			7		9
7				6	1		4	
	5		8			3		6
			3			4		2
	9							
6		4		9	5	1		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು,

5544 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ಗ್ಯಾಂಗ್‌ಸ್ಟರ್ ಕೊಲೆ: ಐವರ ಬಂಧನ

ಸಿಕರ್ (ಪಿಟಿಐ): ರಾಜಸ್ಥಾನದ ಸೀಕರ್ ಜಿಲ್ಲೆಯಲ್ಲಿ ಪಾತಕಿ ಗ್ಯಾಂಗ್‌ಸ್ಟರ್ ರಾಜು ಥೇಠ್ ಎಂಬಾತನನ್ನು ಆತನ ಮನೆಯ ಮುಂದೆಯೇ ಕೊಂದ ಆರೋಪದಲ್ಲಿ ಬಾಲಕ ಸೇರಿದಂತೆ ಐದು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ರಾಜು ಶನಿವಾರ ಕೊಲೆಯಾಗಿದ್ದ. ಹತ್ಯೆ ಮಾಡುವ ವೇಳೆ, ಕೋಚಿಂಗ್ ಸೆಂಟರ್‌ನಲ್ಲಿ ಓದುತ್ತಿದ್ದ ಮಗಳನ್ನು ಭೇಟಿಯಾಗಿ ಬರುತ್ತಿದ್ದ ತಾರಾಚಂದ್ ಕಡ್ವಾಸರ ಎಂಬುವರನ್ನು ಸಹ ದುಷ್ಕರ್ಮಿಗಳು ಕೊಲೆ ಮಾಡಿದ್ದರು. ತಾರಾಚಂದ್‌ನನ್ನು ರಾಜುನ ಸಹಚರ ಎಂದು ಆರೋಪಿಗಳು ಭಾವಿಸಿದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಹದಿನೈದನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ.ವಿ.ದೇವಮ್ಮ ಸಗನೇಗೌಡರು
ನಿಧನ : 05-12-2007
ನೀವು ನಮ್ಮನ್ನಗಲಿ ಹದಿನೈದು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ,
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬ ವರ್ಗದವರು, ಬೇಲೂರು–573115
ಫೋನ್: 6362934108, 9845689500
9844436598, 9964480611

ಜಿ20 ಶೃಂಗಸಭೆ ಹಿನ್ನೆಲೆ: ಇಂದು ಸರ್ವಪಕ್ಷ ಸಭೆ

ನವದೆಹಲಿ (ಪಿಟಿಐ): 2023ರ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಜಿ20 ಶೃಂಗಸಭೆ ಹಿನ್ನೆಲೆಯಲ್ಲಿ ಕಾರ್ಯತಂತ್ರಗಳ ಚರ್ಚೆ ಹಾಗೂ ಪೂರಕವಾಗಿ ಸಲಹೆಗಳನ್ನು ಪಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರ ಸೋಮವಾರ ಸರ್ವಪಕ್ಷ ಗಳ ಸಭೆ ಕರೆದಿದೆ. ಭಾರತವು ಈ ಶೃಂಗಸಭೆಯ ಆತಿಥ್ಯವನ್ನು ವಹಿಸಲಿದೆ.

ರಾಷ್ಟ್ರಪತಿ ಭವನದಲ್ಲಿ ಸರ್ವ ಪಕ್ಷಗಳ ಸಭೆ ನಡೆಯಲಿದ್ದು, 40 ಪಕ್ಷಗಳ ಅಧ್ಯಕ್ಷರಿಗೆ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಷಿ ಆಹ್ವಾನ ನೀಡಿದ್ದಾರೆ. ಪ್ರಧಾನಿ ಮೋದಿ ಸಭೆಯಲ್ಲಿ ಭಾಗವಹಿಸುವರು. ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೂ ಪಾಲ್ಗೊಳ್ಳುವ ಸಂಭವವಿದೆ.

ಸಭೆಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪಾಲ್ಗೊಳ್ಳುವ ಸಂಭವ ವಿದೆ. ತೃಣಮೂಲ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಭಾಗವಹಿಸುತ್ತಿದ್ದೇನೆ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಭಾರತವು ಡಿ.1ರಂದು ಜಿ20 ಶೃಂಗದ ಅಧ್ಯಕ್ಷತೆ ವಹಿಸಿಕೊಂಡಿದೆ. ಪೂರಕವಾಗಿ ದೇಶದ ವಿವಿಧೆಡೆ 200 ಸಭೆಗಳನ್ನು ಆಯೋಜಿಸುವ ನಿರೀಕ್ಷೆಯಿದೆ. ಮೊದಲ ಸಭೆಯು ಹೈದರಾಬಾದ್‌ನಲ್ಲಿ ನಡೆಯಲಿದೆ.

ಜಿ20 ಭಾರತ ಸೇರಿ ವಿಶ್ವದ ಪ್ರಮುಖ ದೇಶಗಳು ಸದಸ್ಯರಾಗಿ ರುವ ಅಂತರರಾಷ್ಟ್ರೀಯ ವೇದಿಕೆ ಯಾಗಿದೆ. ಜಿ20 ಶೃಂಗದ ಮುಂದಿನ ಸಭೆ 2023ರ ಸೆ. 9 ಮತ್ತು 10 ರಂದು ನವದೆಹಲಿಯಲ್ಲಿ ನಡೆಯಲಿದೆ.

ಜಿ20 ಶೃಂಗದ ಶೆರ್ಪಾ ಸಭೆಗೆ ಚಾಲನೆ

ಉದಯಪುರ, ರಾಜಸ್ಥಾನ (ಪಿಟಿಐ): ಭಾರತವು ಜಿ20 ಅಧ್ಯಕ್ಷತೆಯನ್ನು ವಹಿಸಿಕೊಂಡ ಬಳಿಕ ನಡೆಯುತ್ತಿರುವ ಮೊದಲ ಶೆರ್ಪಾ ಸಭೆಯು ಇಲ್ಲಿ ಭಾನುವಾರ ಆರಂಭವಾಯಿತು. ನಾಲ್ಕು ದಿನಗಳ ಸಭೆ ಇದಾಗಿದೆ.

ಭಾರತದ ಶೆರ್ಪಾ ಅಮಿತಾಭ್ ಕಾಂತ್ ಅವರು ಈ ಸಭೆಗೆ ಚಾಲನೆ ನೀಡಿದರು. 'ಜಗತ್ತು ಕೋವಿಡ್– 19 ಸಾಂಕ್ರಾಮಿಕದಿಂದ ಚೇತರಿಸಿಕೊಳ್ಳುತ್ತಿರುವ ಈ ಸಮಯದಲ್ಲಿ, ಎಲ್ಲರನ್ನೂ ಒಳಗೊಂಡ, ಚೇತರಿಸಿಕೊಳ್ಳುವ ಸಾಮರ್ಥ್ಯವುಳ್ಳ ಮತ್ತು ಸುಸ್ಥಿರ ಅಭಿವೃದ್ಧಿಗೆ ನಕ್ಷೆ ತಯಾರಿಸಬೇಕು. ಉತ್ತಮ ಜೀವನ ರೂಪಿಸುವ, ಉತ್ತಮ ಆರೋಗ್ಯ ಸೇವೆ ನೀಡುವ, ಜನಜೀವನ ಗುಣಮಟ್ಟ ಹೆಚ್ಚಿಸುವ ಕೆಲಸಕ್ಕೆ ವೇಗ ನೀಡಬೇಕು' ಎಂದು ಹೇಳಿದರು.

'ಮುಸ್ಲಿಂ ಮಹಿಳೆಯರಿಗೆ ಟಿಕೆಟ್ ಧರ್ಮಕ್ಕೆ ವಿರುದ್ಧ'

ಅಹಮದಾಬಾದ್ (ಪಿಟಿಐ): ಚುನಾವಣೆಯಲ್ಲಿ ಮುಸ್ಲಿಂ ಮಹಿಳೆಯರಿಗೆ ಟಿಕೆಟ್ ನೀಡುವುದು ಇಸ್ಲಾಂ ಧರ್ಮಕ್ಕೆ ವಿರುದ್ಧವಾಗಿದೆ ಹಾಗೂ ಇದು ಧರ್ಮವನ್ನು ದುರ್ಬಲಗೊಳಿಸುತ್ತದೆ ಎಂದು ಅಹಮದಾಬಾದ್‌ನ ಜಾಮಾ ಮಸೀದಿಯ ಶಾಹಿ ಇಮಾಮ್ ಭಾನುವಾರ ಹೇಳಿದ್ದಾರೆ.

ಗುಜರಾತ್ ವಿಧಾನಸಭಾ ಚುನಾವಣೆಯ ಎರಡನೇ ಸುತ್ತಿನ ಮತ್ತು ಅಂತಿಮ ಹಂತದ ಮತದಾನದ ಮುನ್ನ ದಿನ ಮಾಧ್ಯಮದವರೊಂದಿಗೆ ಮಾತನಾಡಿದ ಶಾಹಿ ಇಮಾಮ್, 'ಇಸ್ಲಾಂನಲ್ಲಿ ಮಹಿಳೆಯರಿಗೆ ಒಂದು ನಿರ್ದಿಷ್ಟ ಸ್ಥಾನ ಇರುವುದರಿಂದ ಅವರಿಗೆ ಮಸೀದಿ ಒಳಗೆ ಪ್ರವೇಶ ಇಲ್ಲ ಹಾಗೂ ನಮಾಜ್ (ಪ್ರಾರ್ಥನೆ) ಮಾಡಲು ಅವಕಾಶ ಇಲ್ಲ. ಇದುವರೆಗೆ ಯಾವುದಾದರೂ ಮಹಿಳೆಯರು ನಮಾಜ್ ಮಾಡುವುದನ್ನು ನೋಡಿದ್ದೀರಾ? ಹಾಗಾಗಿ ಮಹಿಳೆಯರಿಗೆ ಟಿಕೆಟ್ ನೀಡುವುದು ಇಸ್ಲಾಂ ವಿರುದ್ಧವಾಗಿರುತ್ತದೆ. ಚುನಾವಣಾ ಟಿಕೆಟ್ ಅನ್ನು ನೀಡಲು ಪುರುಷ ಅಭ್ಯರ್ಥಿಗಳು ಲಭ್ಯವಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಭಾರತೀಯ ನೌಕಾಪಡೆ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ವಿಶ್ವಾಸ

2047ರ ಹೊತ್ತಿಗೆ ಭಾರತ ವಿಶ್ವಗುರು

ವಿಶಾಖಪಟ್ಟಣ (ಪಿಟಿಐ): '2047ರಲ್ಲಿ ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸುತ್ತಿರುವ ವೇಳೆಗೆ ದೇಶವು ವಿಶ್ವ ಗುರುವಾಗಿ ಹೊರಹೊಮ್ಮಿರುತ್ತದೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಭಾನುವಾರ ವಿಶ್ವಾಸ ವ್ಯಕ್ತಪಡಿಸಿದರು.

ರಾಮಕೃಷ್ಣ ಬೀಚ್‌ನಲ್ಲಿ ಹಮ್ಮಿಕೊಂಡಿದ್ದ ನೌಕಾಪಡೆ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಂಗೀತ, ಕ್ರೀಡೆ, ಸಂಸ್ಕೃತಿ ಹಾಗೂ ಸೇನೆಯ ಸಾಮರ್ಥ್ಯ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಭಾರತೀಯರು ಅಗಾಧ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಸಾಧನೆ ಮಾಡಿದ್ದಾರೆ. ಈ ಕಾರಣಗಳಿಂದಾಗಿಯೇ ಭಾರತ ಅಗ್ರಗಣ್ಯ ದೇಶವಾಗಿ ಹೊರಹೊಮ್ಮಿದೆ' ಎಂದು ಹೇಳಿದರು.

'ಇಷ್ಟೊಂದು ಸಾಧನೆ ಮಾಡಿದ್ದರೂ, ಕೆಲ ವಿಷಯಗಳಲ್ಲಿ ಏರ್ಪಟ್ಟಿರುವ ಕಂದಕಗಳನ್ನು ತೆಗೆದುಹಾಕಬೇಕಾಗಿದೆ. ಈ ಧ್ಯೇಯದೊಂದಿಗೆ ದೇಶದ ಪ್ರತಿಯೊಬ್ಬ ಪ್ರಜೆ ಮುನ್ನಡೆಯಬೇಕು. ಆಗ ಮಾತ್ರ ಅಭಿವೃದ್ಧಿ ಹೊಂದಿದ, ನವ ಭಾರತ ನಿರ್ಮಾಣವಾಗಲಿದೆ' ಎಂದರು.

'ದೇಶದ ಅಭಿವೃದ್ಧಿಯಲ್ಲಿ ಸಾಗರಗಳು ಪ್ರಮುಖ ಪಾತ್ರ ವಹಿಸುತ್ತವೆ. ಹಾಗಾಗಿ, ಕಡಲುಗಳ ಗಡಿಗಳನ್ನು ರಕ್ಷಿಸುವ ಮಹತ್ತರ ಜವಾಬ್ದಾರಿ ನೌಕಾಪಡೆ ಮೇಲಿದೆ' ಎಂದರು.

'ಭಾರತದ ನೌಕಾಪಡೆಗೆ ಆತ್ಮನಿರ್ಭರತೆಯೇ ಚಾಲನಾ ಶಕ್ತಿ. ಹೊಸ ಹಾಗೂ ಅಭಿವೃದ್ಧಿ ಹೊಂದಿದ ಭಾರತ ಕಟ್ಟುವ ಕನಸನ್ನು ನನಸು ಮಾಡುವುದಕ್ಕೆ ಅಗತ್ಯವಿರುವ ಶಕ್ತಿ–ಸಾಮರ್ಥ್ಯದೊಂದಿಗೆ ನೌಕಾಪಡೆಯೂ ಹೆಜ್ಜೆ ಹಾಕುತ್ತದೆ ಎಂಬ ವಿಶ್ವಾಸ ನನಗಿದೆ' ಎಂದು ಮೂರು ಸೇನಾಪಡೆಗಳ ಮುಖ್ಯಸ್ಥರೂ ಆಗಿರುವ ರಾಷ್ಟ್ರಪತಿ ಮುರ್ಮು ಹೇಳಿದರು.

ರಕ್ಷಣಾ ಕಾರ್ಯಾಚರಣೆ, ಯುದ್ಧ ಸಾಮರ್ಥ್ಯ ಪ್ರಾತ್ಯಕ್ಷಿಕೆ

ವಿಶಾಖಪಟ್ಟಣಂ (ಪಿಟಿಐ): ನೌಕಾಪಡೆ ದಿನ ಅಂಗವಾಗಿ ಭಾನುವಾರ ಭಾರತೀಯ ನೌಕಾಪಡೆಯು ತನ್ನ ಕಾರ್ಯಾಚರಣೆ ಪ್ರಾತ್ಯಕ್ಷಿಕೆ ಮೂಲಕ ಪ್ರಬಲ ಯುದ್ಧ ಸಾಮರ್ಥ್ಯ ಪ್ರದರ್ಶಿಸಿತು.

ರಾಮಕೃಷ್ಣ ಬೀಚ್ ನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮತ್ತು ಸಶಸ್ತ್ರ ಪಡೆಗಳ ಮುಖಸ್ಥರೂ ಆದ ದ್ರೌಪದಿ ಮುರ್ಮು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಮೊದಲ ಬಾರಿಗೆ ನೌಕಾಪಡೆ ದಿನವನ್ನು ನವದೆಹಲಿಯ ಹೊರಗೆ ಆಚರಿಸಲಾಯಿತು. ಜಲಾಂತರ್ಗಾಮಿ ನೌಕೆ ಐಎನ್‌ಎಸ್ ಸಿಂಧುಕೀರ್ತಿ ಮತ್ತು ಐಎನ್‌ಎಸ್ ತರಂಗಿಣಿ ನಾವಿಕರು ರಾಷ್ಟ್ರಪತಿ ಅವರನ್ನು ಸ್ವಾಗತಿಸಿದರು.

ನೌಕಾಪಡೆ ಕಮಾಂಡೋಗಳು ಸೀ ಕಿಂಗ್ ಹೆಲಿಕಾಪ್ಟರ್‌ನಿಂದ ಸಾಹಸ ಪ್ರದರ್ಶಿಸಿದರು. ನಂತರ ಮಾರ್ಕೋಸ್ (ಮರೈನ್ ಕಮಾಂಡೋಗಳು) ಅವರ ಯುದ್ಧ ಕೌಶಲ ಪ್ರಾತ್ಯಕ್ಷಿಕೆ ನಡೆಸಿದರು. ರಕ್ಷಣಾ ಕಾರ್ಯಾಚರಣೆ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು.

ಹಾಕ್ ವಿಮಾನ ಮತ್ತು ಮಿಗ್ 29 ಕೆ ವಿಮಾನವೂ ಪ್ರದರ್ಶನದಲ್ಲಿತ್ತು.

ನೌಕಾಪಡೆ ಯುದ್ಧನೌಕೆಗಳಾದ ಕಾರ್ವೆಟ್ ಐಎನ್‌ಎಸ್ ಖಂಜರ್, ಐಎನ್‌ಎಸ್ ಕಡ್ಮತ್ ಮತ್ತು ಐಎನ್‌ಎಸ್ ಕಿರ್ಚ್, ಐಎನ್‌ಎಸ್ ದೆಹಲಿ, ಯುದ್ಧನೌಕೆ ಐಎನ್‌ಎಸ್ ಸಹ್ಯಾದ್ರಿ ಮತ್ತು ಐಎನ್‌ಎಸ್ ಕೊಚ್ಚಿಯನ್ನು ಪ್ರದರ್ಶಿಸಲಾಯಿತು. ಯುದ್ಧನೌಕೆಗಳಿಂದ ರಾಕೆಟ್ ಗಳನ್ನು ಹಾರಿಸುವುದು ಕಾರ್ಯಕ್ರಮದ ಮತ್ತೊಂದು ಆಕರ್ಷಣೆಯಾಗಿತ್ತು.

ನೌಕಾಪಡೆ ದಿನಾಚರಣೆ ಅಂಗವಾಗಿ ಕೊಚ್ಚಿಯ ರಾಜೇಂದ್ರ ಮೈದಾನದಲ್ಲಿ ನೌಕಾಪಡೆ ಸಿಬ್ಬಂದಿ ಭಾನುವಾರ ಕಾರ್ಯಾಚರಣೆಯೊಂದರ ಪ್ರಾತ್ಯಕ್ಷಿಕೆ ನೀಡಿದರು –ಪಿಟಿಐ ಚಿತ್ರ

ದೆಹಲಿ: ಮತದಾನದ ದಿನವೂ ಕಸದ ಜಟಾಪಟಿ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಗೆ ಭಾನುವಾರ ನಡೆದ ಮತದಾನವು ಬಹುತೇಕ ಶಾಂತಿಯುತವಾಗಿತ್ತು. ಆದರೆ, ಕಣದಲ್ಲಿರುವ ಬಿಜೆಪಿ ಮತ್ತು ಎಎಪಿ ಭಾನುವಾರವೂ ವಾಗ್ವಾದ ನಡೆಸಿದವು.

ಉತ್ತರ ದೆಹಲಿ ನಗರ ಪಾಲಿಕೆ, ದಕ್ಷಿಣ ದೆಹಲಿ ನಗರ ಪಾಲಿಕೆ ಮತ್ತು ಪೂರ್ವ ದೆಹಲಿ ಮಹಾನಗರ ಪಾಲಿಕೆಗಳನ್ನು ವಿಲೀನಗೊಳಿಸಿದ ನಂತರ ನಡೆದ ಮೊದಲ ಚುನಾವಣೆ ಇದು. ಈ ಮೂರೂ ಪಾಲಿಕೆಗಳು 15 ವರ್ಷಗಳಿಂದ ಬಿಜೆಪಿ ತೆಕ್ಕೆಯಲ್ಲಿದ್ದವು. ಈ ಬಾರಿ ಮಹಾನಗರ ಪಾಲಿಕೆಯ ಚುಕ್ಕಾಣಿಯನ್ನು ಹಿಡಿಯುವ ಹುಮ್ಮಸ್ಸಿನಲ್ಲಿ ಎಎಪಿ ಇದೆ.

ಕಸ ನಿರ್ವಹಣೆ ಮತ್ತು ದೆಹಲಿ ಹೊರವಲಯದಲ್ಲಿರುವ ಕಸದ ಗುಡ್ಡ ವಿಚಾರವು ಎಎಪಿ ಮತ್ತು ಬಿಜೆಪಿ ನಡುವೆ ವಾಗ್ವಾದಕ್ಕೆ ಕಾರಣವಾಗಿತ್ತು. ಎರಡೂ ಪಕ್ಷಗಳು ಈ ವಿಚಾರಗಳನ್ನು ಚುನಾವಣೆಯ ಮುಖ್ಯ ವಿಷಯವನ್ನಾಗಿ ಮಾಡಿಕೊಂಡಿದ್ದವು. ಮತದಾನದ ದಿನವಾದ ಭಾನುವಾರ ಎರಡೂ ಪಕ್ಷಗಳ ಹಲವು ನಾಯಕರು ಇದೇ ವಿಚಾರವಾಗಿ ಸಾರ್ವಜನಿಕವಾಗಿ ಮಾತನಾಡಿದ್ದಾರೆ.

ಎಎಪಿ ಶಾಸಕಿ ಆತಿಶಿ ಕಸ ನಿರ್ವಹಣೆ ಬಗ್ಗೆ ಭಾನುವಾರ ಬಿಜೆಪಿಯನ್ನು ಟೀಕಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ದೆಹಲಿ ಬಿಜೆಪಿ ಘಟಕವು, ಎಎಪಿ ನೇತೃತ್ವದ ದೆಹಲಿ ಸರ್ಕಾರವನ್ನು ಟೀಕಿಸಿತು.

ಎರಡೂ ಪಕ್ಷಗಳು ಈ ಚುನಾವಣೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿವೆ. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಬಗ್ಗುಬಡಿದಿದ್ದ ಎಎಪಿಯು, ಮಹಾನಗರ ಪಾಲಿಕೆಯನ್ನೂ ಬಿಜೆಪಿ ತೆಕ್ಕೆಯಿಂದ ಕಸಿದುಕೊಳ್ಳುವ ನಿರೀಕ್ಷೆಯಲ್ಲಿದೆ. ಹೀಗಾಗಿಯೇ ಗುಜರಾತ್ ವಿಧಾನಸಭಾ ಚುನಾವಣೆಗೆ ಮತದಾನ ನಡೆಯುತ್ತಿದ್ದರೂ, ಅರವಿಂದ ಕೇಜ್ರಿವಾಲ್ ಅವರು ದೆಹಲಿ ಮಹಾನಗರ ಪಾಲಿಕೆ ಚುನಾವಣೆಗೆ ಹೆಚ್ಚು ಗಮನ ನೀಡಿದರು. ಈ ಚುನಾವಣೆಯ ಫಲಿತಾಂಶವು 2024ರ ಲೋಕಸಭಾ ಚುನಾವಣೆಯಲ್ಲಿ ಎಎಪಿಯ ಸ್ಪರ್ಧೆಯನ್ನು ನಿರ್ಧರಿಸಲಿದೆ ಎಂದು ವಿಶ್ಲೇಷಿಸಲಾಗಿದೆ.

ಬಿಜೆಪಿ ಸಹ ಈ ಚುನಾವಣೆಯನ್ನು ಪ್ರತಿಷ್ಠೆಯಾಗಿಯೇ ಸ್ವೀಕರಿಸಿದೆ. ದೆಹಲಿ ಬಿಜೆಪಿ ನಾಯಕರು ಮಾತ್ರವಲ್ಲದೆ, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಹಲವು ಸುತ್ತಿನ ಪ್ರಚಾರ ನಡೆಸಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಆದ ಸೋಲನ್ನು ಮರೆಮಾಚಲು ದೆಹಲಿ ಮಹಾನಗರ ಪಾಲಿಕೆಯ ಚುಕ್ಕಾಣಿಯನ್ನು ಉಳಿಸಿಕೊಳ್ಳುವುದು ಬಿಜೆಪಿಗೆ ಅನಿವಾರ್ಯವಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಮತದಾರರ ಹೆಸರು ಇಲ್ಲ: ಹಲವು ಮತಗಟ್ಟೆಗಳ ಮತದಾರರ ಪಟ್ಟಿಯಲ್ಲಿ ಅರ್ಹ ಮತದಾರರ ಹೆಸರು ಕೈಬಿಡಲಾಗಿದೆ ಎಂದು ಹಲವರು ಆರೋಪಿಸಿದ್ದಾರೆ. ಹೀಗಾಗಿ ಹಲವರು ಮತ ಹಾಕಲು ಸಾಧ್ಯವಾಗಿಲ್ಲ. ದೆಹಲಿ ಕಾಂಗ್ರೆಸ್ ಅಧ್ಯಕ್ಷ ಅನಿಲ್ ಕುಮಾರ್ ಅವರ ಹೆಸರೂ ಮತಪಟ್ಟಿಯಲ್ಲಿ ಇರಲಿಲ್ಲ. ಹೀಗಾಗಿ ಅವರೂ ಮತದಾನ ಮಾಡಲು ಸಾಧ್ಯವಾಗಿಲ್ಲ. ಮತದಾರರ ಪಟ್ಟಿಯಲ್ಲಿ ಹಲವರ ಹೆಸರು ಕಾಣೆಯಾಗಿರುವ ಬಗ್ಗೆ ದೆಹಲಿ ಬಿಜೆಪಿ ಘಟಕವು ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಪೂರ್ವ ದೆಹಲಿಯಲ್ಲಿರುವ ಕಸದಗುಡ್ಡದ ಮುಂದೆ ಭಾನುವಾರ ನಿಂತ ಮತದಾರರು, ಮತದಾನದ ಶಾಯಿಯ ಗುರುತನ್ನು ತೋರಿಸಿದರು –ಪಿಟಿಐ ಚಿತ್ರ

> **ದೆಹಲಿ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಹದಿನೈದು ವರ್ಷಗಳಿಂದ ಅಧಿಕಾರದಲ್ಲಿದೆ. ಹೀಗಿದ್ದೂ ಕಸದ ಸಮಸ್ಯೆಯನ್ನು ಬಗೆಹರಿಸಿಲ್ಲ. ಈಗ ಬಗೆಹರಿಸುತ್ತಾರೆಯೇ?**
>
> **ಆತಿಶಿ,** ಎಎಪಿ ಶಾಸಕಿ

> **ನಾವು ಅಧಿಕಾರಕ್ಕೆ ಬಂದ ನಂತರ ದೆಹಲಿ ಕಸದ ಗುಡ್ಡದ ಎತ್ತರವನ್ನು ಕಡಿಮೆ ಮಾಡಿದ್ದೇವೆ. ತನ್ನ ವೈಫಲ್ಯ ಮುಚ್ಚಿಕೊಳ್ಳಲು ಎಎಪಿ ಇದನ್ನು ವಿವಾದ ಮಾಡಿದೆ**
>
> **ಅವತಾರ್ ಸಿಂಗ್,** ಹಿಂದಿನ ಉತ್ತರ ದೆಹಲಿ ನಗರಪಾಲಿಕೆ ಮೇಯರ್

ಚುನಾವಣೆ ಬಹಿಷ್ಕಾರ

ದೆಹಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕಾಟೇವಾಡಾ ಗ್ರಾಮಸ್ಥರು ಈ ಚುನಾವಣೆಯನ್ನು ಬಹಿಷ್ಕರಿಸಿದ್ದಾರೆ. ಗ್ರಾಮದಲ್ಲಿದ್ದ ಮತಗಟ್ಟೆಗಳತ್ತ ಗ್ರಾಮದ ಒಬ್ಬ ಮತದಾರನೂ ಸುಳಿದಿಲ್ಲ. ಹೀಗಾಗಿ ಇಲ್ಲಿ ಮತದಾನವೇ ನಡೆದಿಲ್ಲ ಎಂದು ಮೂಲಗಳು ಹೇಳಿವೆ.

ದೆಹಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲೇ ಇದ್ದರೂ ಈ ಗ್ರಾಮದಲ್ಲಿ ಯಾವುದೇ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅನುಷ್ಠಾನವಾಗಿಲ್ಲ. ಗ್ರಾಮದಲ್ಲಿ ಸುಸಜ್ಜಿತ ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆ ಇಲ್ಲ. ಈ ಬಗ್ಗೆ ಹಲವು ಬಾರಿ ದೂರು ನೀಡಿದ್ದರೂ, ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಹೀಗಾಗಿ ಚುನಾವಣೆಯನ್ನು ಬಹಿಷ್ಕರಿಸಿದ್ದೇವೆ ಎಂದು ಗ್ರಾಮಸ್ಥರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ನುಸುಳುಕೋರರ ವಿರುದ್ಧ ಬಿಎಸ್‌ಎಫ್ ಕಾವಲು: ಶ್ಲಾಘನೆ

ಅಮೃತಸರ (ಪಿಟಿಐ): 'ಗಡಿಯಲ್ಲಿ ಒಳನುಸುಳುವಿಕೆ, ಮಾದಕ ವಸ್ತುಗಳು, ಶಸ್ತ್ರಾಸ್ತ್ರಗಳ ಕಳ್ಳಸಾಗಾಣಿಕೆ ಹಾಗೂ ಡ್ರೋನ್‌ಗಳ ಬೆದರಿಕೆಯನ್ನು ತಡೆಯುವಲ್ಲಿ ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ' ಎಂದು ಕೇಂದ್ರ ಗೃಹ ವ್ಯವಹಾರಗಳ ಖಾತೆ ಸಚಿವ ನಿತ್ಯಾನಂದ ರೈ ಭಾನುವಾರ ಹೇಳಿದ್ದಾರೆ.

ಇಲ್ಲಿನ ಗುರುನಾನಕ್ ದೇವ್ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ 58ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಡಿಭಾಗದಲ್ಲಿ ಬಿಎಸ್‌ಎಫ್ ಇರುವುದರಿಂದ ದೇಶದಲ್ಲಿ ಶಾಂತಿ ನೆಲೆಸಿದೆ. 57 ವರ್ಷಗಳಿಂದ ಗಡಿಯನ್ನು ಸುರಕ್ಷಿತವಾಗಿರಿಸಲಾಗಿದೆ. ಗಡಿ ರಕ್ಷಣೆಗಾಗಿ ಬಿಎಸ್‌ಎಫ್ ಸಿಬ್ಬಂದಿಗೆ ರಾಡಾರ್, ಆಂಟಿ ಡ್ರೋನ್ ಗನ್‌ಗಳಂಥ ಸ್ಮಾರ್ಟ್ ಕಣ್ಗಾವಲು ಗ್ಯಾಜೆಟ್‌ಗಳನ್ನು ಒದಗಿಸಲಾಗುತ್ತಿದೆ' ಎಂದು ಹೇಳಿದರು.

ಪೌಷ್ಟಿಕ ಆಹಾರ ಸೇವಿಸಿ

'ದೇಗುಲಗಳು ಜನರಿಗಾಗಿಯೇ ಹೊರತು ಯಾರ ಸ್ವತ್ತಲ್ಲ'

ಚೆನ್ನೈ (ಪಿಟಿಐ): 'ದೇವಸ್ಥಾನಗಳು ಸಾರ್ವಜನಿಕರಿಗಾಗಿ ಇವೆಯೇ ಹೊರತು ಯಾರೊಬ್ಬರ ವೈಯಕ್ತಿಕ ಆಸ್ತಿಯಾಗಲು ಇಲ್ಲ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭಾನುವಾರ ಪ್ರತಿಪಾದಿಸಿದ್ದಾರೆ.

'ಎಲ್ಲಾ ಜಾತಿಗಳ ಅರ್ಚಕರನ್ನು ನೇಮಿಸುವುದು ಸೇರಿದಂತೆ ರಾಜ್ಯ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಇಲಾಖೆ ಕೈಗೊಂಡ ವಿವಿಧ ಕಲ್ಯಾಣ ಕ್ರಮಗಳನ್ನು ಸಹಿಸಲಾಗದೇ, ಕೆಲವರು ಆಧಾರರಹಿತ ಆರೋಪಗಳನ್ನು ಮಾಡುವ ಮೂಲಕ ಡಿಎಂಕೆ ಸರ್ಕಾರದ ಹೆಸರನ್ನು ಕೆಡಿಸಲು ಯತ್ನಿಸುತ್ತಿದ್ದಾರೆ' ಎಂದೂ ಅವರು ಹೇಳಿದರು.

ಇಲ್ಲಿನ ತಿರುವನ್ಮಿಯೂರಿನಲ್ಲಿರುವ ಅರುಲ್ಮಿಗು ಮರುಂತೀಶ್ವರರ್ ದೇವಸ್ಥಾನದಲ್ಲಿ 31 ಜೋಡಿಗಳ ಸಾಮೂಹಿಕ ವಿವಾಹದಲ್ಲಿ ಭಾಗವಹಿಸಿದ್ದ ಸ್ಟಾಲಿನ್, 'ಅತಿಕ್ರಮಣ ಮಾಡಿದ್ದ ₹3,700 ಕೋಟಿ ಮೌಲ್ಯದ ದೇವಾಲಯದ ಭೂಮಿಯನ್ನು ನಮ್ಮ ಸರ್ಕಾರದ ಅವಧಿಯಲ್ಲಿ ಹಿಂಪಡೆಯಲಾಗಿದೆ. ಕೆಲವೆಡೆ ಮಹಿಳಾ ಅರ್ಚಕರನ್ನೂ ನೇಮಿಸಲಾಗಿದೆ' ಎಂದು ತಿಳಿಸಿದರು.

ಧಾರ್ಮಿಕ ಸ್ವಾತಂತ್ರ್ಯವು ಮತಾಂತರದ ಹಕ್ಕನ್ನು ಒಳಗೊಂಡಿಲ್ಲ: ಗುಜರಾತ್

ನವದೆಹಲಿ (ಪಿಟಿಐ): 'ಧಾರ್ಮಿಕ ಸ್ವಾತಂತ್ರ್ಯವು ಜನರನ್ನು ಮತಾಂತರಗೊಳಿಸುವ ಹಕ್ಕನ್ನು ಒಳಗೊಂಡಿಲ್ಲ' ಎಂದು ಗುಜರಾತ್ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ವಿವಾಹ ಮೂಲಕ ಮತಾಂತರಗೊಳಿಸುವುದಕ್ಕೂ ಮುನ್ನ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರ ಅನುಮತಿ ಪಡೆಯುವುದು ಕಡ್ಡಾಯ. ಕಾಯ್ದೆಯ ಈ ನಿಯಮಕ್ಕೆ ಗುಜರಾತ್ ಹೈಕೋರ್ಟ್ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿದೆ.

ಗುಜರಾತ್ ಹೈಕೋರ್ಟ್ ಕಳೆದ ವರ್ಷ ಆಗಸ್ಟ್ 19 ಹಾಗೂ 26ರಂದು ಆದೇಶ ಹೊರಡಿಸಿ, ಗುಜರಾತ್ ಸರ್ಕಾರ ಜಾರಿಗೆ ತಂದಿದ್ದ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ, 2003ರ ಸೆಕ್ಷನ್ 5ಕ್ಕೆ ತಡೆ ನೀಡಿತ್ತು.

ವಕೀಲ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿರುವ ಪಿಐಎಲ್‌ಗೆ ಪ್ರತಿಕ್ರಿಯೆಯಾಗಿ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಗುಜರಾತ್ ಸರ್ಕಾರ ಈ ವಿಷಯ ತಿಳಿಸಿದೆ.

'ತಡೆಯನ್ನು ಕೂಡಲೇ ತೆರವುಗೊಳಿಸಬೇಕು. ಬಲವಂತದಿಂದ, ಆಮಿಷವೊಡ್ಡಿ ಅಥವಾ ವಂಚನೆ ಮೂಲಕ ಮತಾಂತರಗೊಳಿಸುವುದನ್ನು ನಿಷೇಧಿಸುವ ಸಂಬಂಧ ರೂಪಿಸಿರುವ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಇದರಿಂದ ಸಾಧ್ಯವಾಗಲಿದೆ' ಎಂದು ಸರ್ಕಾರ ಅಫಿಡವಿಟ್‌ನಲ್ಲಿ ವಿವರಿಸಿದೆ.

ಸಂಕ್ಷಿಪ್ತ ಸುದ್ದಿ

ಚೀನಾ: ಕೋವಿಡ್ ನಿರ್ಬಂಧ ಸಡಿಲ

ಬೀಜಿಂಗ್ (ರಾಯಿಟರ್ಸ್): ಕಳೆದ ವಾರಾಂತ್ಯದಲ್ಲಿ ಚೀನಾದಲ್ಲಿ ನಡೆದ ಪ್ರತಿಭಟನೆ ನಂತರ ಉರುಮ್ಕಿ ಸೇರಿದಂತೆ ಬಹಳಷ್ಟು ನಗರಗಳಲ್ಲಿ ಹೇರಲಾಗಿದ್ದ ಕಠಿಣ ಕೋವಿಡ್ ನಿರ್ಬಂಧಗಳನ್ನು ಭಾನುವಾರ ಸಡಿಲಗೊಳಿಸಲಾಗಿದೆ.

ಕಳೆದ ತಿಂಗಳು ಕ್ಸಿನ್‌ಜಿಯಾಂಗ್ನ ರಾಜಧಾನಿ ಉರುಮ್ಕಿಯಲ್ಲಿ ಸಂಭವಿಸಿದ್ದ ಅಗ್ನಿ ದುರಂತದಲ್ಲಿ ಸಂತ್ರಸ್ತರು ತಪ್ಪಿಸಿಕೊಳ್ಳಲಾಗಲಿಲ್ಲ. ಇದಕ್ಕೆ ಕಠಿಣ ಕೋವಿಡ್ ನಿರ್ಬಂಧ ಹಾಗೂ ಲಾಕ್‌ಡೌನ್ ಕಾರಣ ಎಂದು ಸಾರ್ವಜನಿಕರು ಪ್ರತಿಭಟನೆ ಆರಂಭಿಸಿದ್ದರು. ಈಗ ಆ ಪ್ರದೇಶದಲ್ಲಿನ ಮಾಲ್, ಮಾರುಕಟ್ಟೆ, ರೆಸ್ಟೋರೆಂಟ್ ಮತ್ತು ಇತರ ಸಾರ್ವಜನಿಕ ಸ್ಥಳಗಳನ್ನು ತೆರೆಯಲಾಗಿದ್ದು, ತಿಂಗಳಿದ್ದ ಇದ್ದ ಕಟ್ಟುನಿಟ್ಟಿನ ಲಾಕ್‌ಡೌನ್ ರದ್ದುಪಡಿಸಲಾಗಿದೆ. ಉರುಮ್ಕಿ ಮಾತ್ರವಲ್ಲದೇ, ಜೆನ್‌ಜಾಹೊ, ಶಾಂಘೈ ಸೇರಿದಂತೆ ಚೀನಾದ ಬಹಳಷ್ಟು ನಗರಗಳಲ್ಲಿ ಲಾಕ್‌ಡೌನ್, ಕ್ವಾರಂಟೈನ್ ಹಾಗೂ ಕರೋನಾ ಪರೀಕ್ಷೆಗಳನ್ನು ಕೈ ಬಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಮಧ್ಯೆ ಚೀನಾದಲ್ಲಿ ಕೋವಿಡ್‌ನಿಂದ ಇಬ್ಬರು ಸಾವಿಗೀಡಾಗಿರುವ ಪ್ರಕರಣ ವರದಿಯಾಗಿದೆ. ಶಾನ್‌ದಾಂಗ್ ಹಾಗೂ ಸಿಚುವಾನ್ ಪ್ರಾಂತ್ಯದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ಭೂಮಿಗೆ ಮರಳಿದ ಚೀನಾದ ಮೂವರು ಗಗನಯಾತ್ರಿಗಳು

ಬೀಜಿಂಗ್ (ಪಿಟಿಐ): ಬಾಹ್ಯಾಕಾಶ ನಿಲ್ದಾಣದಲ್ಲಿ ಆರು ತಿಂಗಳು ಕಳೆದಿದ್ದ ಚೀನಾದ ಮೂವರು ಗಗನಯಾತ್ರಿಗಳು ಭಾನುವಾರ ಭೂಮಿಗೆ ಸುರಕ್ಷಿತರಾಗಿ ಮರಳಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಮೂವರು ಗಗನಯಾತ್ರಿಗಳು ಬಾಹ್ಯಾಕಾಶ ನಿಲ್ದಾಣದ ಕಾಮಗಾರಿಗಾಗಿ 183 ದಿನಗಳ ಕಾಲ ಅಲ್ಲಿ ನೆಲೆಸಿದ್ದರು ಎಂದೂ ತಿಳಿಸಿದ್ದಾರೆ.

ಇರಾನ್‌ನಿಂದ ಅಣು ವಿದ್ಯುತ್ ಸ್ಥಾವರ ಕಾಮಗಾರಿ ಆರಂಭ

ಕೈರೊ (ಎಪಿ): ಇರಾನ್, ದೇಶದ ವಾಯವ್ಯದಲ್ಲಿ ನೂತನ ಅಣು ವಿದ್ಯುತ್ ಸ್ಥಾವರ ನಿರ್ಮಾಣ ಕಾಮಗಾರಿಯನ್ನು ಶನಿವಾರದಿಂದ ಆರಂಭಿಸಿದೆ ಎಂದು ಇಲ್ಲಿನ ಮಾಧ್ಯಮವೊಂದು ವರದಿ ಮಾಡಿದೆ.

'ಕರೂನ್' ಹೆಸರಿನ 300 ಮೆಗಾ ವ್ಯಾಟ್ ಸಾಮರ್ಥ್ಯದ ಸ್ಥಾವರದ ನಿರ್ಮಾಣ ಕಾಮಗಾರಿಯು ಮುಂದಿನ ಎಂಟು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ಇದಕ್ಕೆ ಅಂದಾಜು 2 ಬಿಲಿಯನ್ ಡಾಲರ್ (₹16,284 ಕೋಟಿ) ವೆಚ್ಚವಾಗಲಿದೆ. ಇದು ಇರಾನ್‌ನ ಖುಜೆಸ್ತಾನ್ ಪ್ರಾಂತ್ಯದಲ್ಲಿ ನಿರ್ಮಾಣವಾಗುತ್ತಿದೆ' ಎಂದು ತಿಳಿಸಿದೆ.

ಪಾಕ್: ಕಮಾಂಡರ್ ಉಗ್ರನ ಹತ್ಯೆ

ಪೆಶಾವರ (ಪಿಟಿಐ): ಅನೇಕ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಕಮಾಂಡರ್ ಉಗ್ರ ಮುಹಮದ್ ನೂರ್ ಅಲಿಯಾಸ್ ಸರಕೈ ಎಂಬಾತನನ್ನು ಪಾಕಿಸ್ತಾನದ ಭದ್ರತಾ ಪಡೆಗಳು ವಾಜಿರಿಸ್ತಾನದಲ್ಲಿ ಹತ್ಯೆ ಮಾಡಿವೆ ಎಂದು ಅಲ್ಲಿನ ಸೇನೆ ತಿಳಿಸಿದೆ.

ಡಿಸೆಂಬರ್ 2ರಂದು ವಾಜಿರಿಸ್ತಾನದ ಶೇವಾ ಪ್ರದೇಶದಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮುಹಮದ್ ಹತನಾಗಿದ್ದಾನೆ. ನಂತರ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸೇನೆಯ ಮಾಧ್ಯಮ ವಿಭಾಗವಾದ ಅಂತರ್ ಸೇವೆಗಳ ಸಾರ್ವಜನಿಕ ಸಂಪರ್ಕ ಇಲಾಖೆ ಶನಿವಾರ ಹೇಳಿದೆ.

ಇಂಡೊನೇಷ್ಯಾ: ಮೌಂಟ್ ಸೆಮೆರು ಜ್ವಾಲಾಮುಖಿಯಿಂದ ಚಿಮ್ಮಿದ ಲಾವಾರಸ

ಜಕಾರ್ತ (ಎಪಿ): ಇಂಡೊನೇಷ್ಯಾದ ಬೃಹತ್ ಸಜೀವ ಜ್ವಾಲಾಮುಖಿಗಳಲ್ಲಿ ಒಂದಾದ ಮೌಂಟ್ ಸೆಮೆರು ಜ್ವಾಲಾಮುಖಿಯು ಅತ್ಯಂತ ಬಿಸಿ ಅನಿಲವನ್ನು ಮತ್ತು ಭಾರಿ ಪ್ರಮಾಣದ ಲಾವಾರಸವನ್ನು ಭಾನುವಾರ ಹೊರಚಿಮ್ಮಿಸಿತು.

ಮಳೆ ಬಂದ ಕಾರಣ ಜ್ವಾಲಾಮುಖಿಯ ಚಟುವಟಿಕೆ ತಗ್ಗಿತು. ಹಲವಾರು ಗ್ರಾಮಗಳು ಬೂದಿಯಿಂದ ಮುಚ್ಚಿ ಹೋಗಿದ್ದವು. ಹೊಗೆಯ ಕಾರಣ ಸೂರ್ಯ ಕಿರಣಗಳು ಭೂಮಿಗೆ ಬೀಳಲಿಲ್ಲ. ಹಲವು ಗ್ರಾಮಸ್ಥರು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದರು. ಯಾವುದೇ ಪ್ರಾಣಹಾನಿ ವರದಿಯಾಗಿಲ್ಲ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಮುನ್ನಡೆ ಕಾಯ್ದುಕೊಂಡ ನೇಪಾಳಿ ಕಾಂಗ್ರೆಸ್

ಕಾಠ್ಮಂಡು (ಪಿಟಿಐ): ನೇಪಾಳ ಸಂಸತ್ ಚುನಾವಣೆಯಲ್ಲಿ ಅಲ್ಲಿಯ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಮುನ್ನಡೆಸುತ್ತಿರುವ ನೇಪಾಳಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವು ಮುನ್ನಡೆ ಕಾಯ್ದುಕೊಂಡಿದೆ.

ಪಕ್ಷದ ಅಭ್ಯರ್ಥಿ ಧನರಾಜ್ ಗುರುಂಗ್ ಅವರು ಸ್ಯೈಯಂಜ ಕ್ಷೇತ್ರದಿಂದ ಗೆಲುವು ಸಾಧಿಸಿದ ಬಳಿಕ ನೇಪಾಳಿ ಕಾಂಗ್ರೆಸ್ ಮುನ್ನಡೆ ಕಾಯ್ದುಕೊಂಡಿರುವುದಾಗಿ ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ಈ ಗೆಲುವಿನ ಮೂಲಕ ನೇಪಾಳಿ ಕಾಂಗ್ರೆಸ್ 57 ಸಂಸದ ಸ್ಥಾನಗಳನ್ನು ನೇರ ಚುನವಣೆಯಲ್ಲಿ ಗೆದ್ದಿದೆ. ಅದರ ಸಮೀಪ ಎದುರಾಳಿ ಸಿಪಿಎನ್–ಯುಎಂಎಲ್ 44 ಸ್ಥಾನಗಳನ್ನು ನೇರ ಮತದಾನದಲ್ಲಿ ಗೆದ್ದಿದೆ. ಸಿಪಿಎನ್– ಮಾವೋಯಿಸ್ಟ್ ಸೆಂಟರ್ 17 ಸ್ಥಾನಗಳನ್ನು ಮತ್ತು ಸಿಪಿಎನ್–ಯುನಿಫೈಡ್ ಸೋಸಿಯಲಿಸ್ಟ್ 10 ಸ್ಥಾನಗಳನ್ನು ಗೆದ್ದಿವೆ. ಈವರೆಗೆ 163 ಕ್ಷೇತ್ರಗಳ ಮತ ಎಣಿಕೆ ಮುಗಿದಿದೆ.

ಕೇವಲ ಎರಡು ಕ್ಷೇತ್ರಗಳ ಮತ ಎಣಿಕೆ ಮಾತ್ರ ಬಾಕಿ ಇದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡಿಗಿಯರು ಬೇಕಾಗಿದ್ದಾರೆ ಊಟ,ವಸತಿಯಿದೆ 10,000 -15,000, 8951315839, 9880545002

ಮನೆಕೆಲಸ (12,000–15,000), ಹೋಂನರ್ಸ್ (15,000–20,000) ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ–ವಸತಿ ಉಚಿತ. ಉಡುಪಿ: 9148330776

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಬೇಕಾಗಿದ್ದಾರೆ: ಫೀಲ್ಡ್ ವರ್ಕ್ ಕೆಲಸಕ್ಕೆ ಪುರುಷ ಅಥವಾ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ: 8904075469, 8792437544

ಪ್ರವಾಸ

Travel

ಸೋಮನಾಥ್ ದ್ವಾರಕಾ ಮಾತ್ರಗಯಾ ಉಜ್ಜಯಿನಿ,ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗಗಳು 26.01.2023 ರಿಂದ 15/10 ದಿನಗಳು. ವಿಯವಾಡ, ಭದ್ರಾಚಲಂ ಪಂಚರಾಮ ಮಂದಿರಗಳು 02.02.2023 ರಿಂದ 10 ದಿನಗಳು ಗೌಹಾಟಿ,ಸಿಕ್ಕಿಂ ಡಾರ್ಜಲಿಂಗ್ ಕೊಲ್ಕತ್ತ,ಪುರಿ ಕೊನಾರ್ಕ್ ಭುವನೇಶ್ವರ್ 03.02.2023 ರಿಂದ 14 ದಿನಗಳು. ಕಾಶಿ,ಗಯಾ,ಪ್ರಯಾಗ ನೈಮೀಶಾರಣ್ಯ 26.01.2023 ರಿಂದ 8 ದಿನಗಳು ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

28.01.2023ರಿಂದ 7/9ದಿನಗಳ ವಿಮಾನ,AC ಬಸ್ಸಿನಲ್ಲಿ ಕಾಶಿವಿಶ್ವನಾಥ,ಬೈದ್ಯನಾಥ್, 2 ಜ್ಯೋತಿರ್ಲಿಂಗ ಸಮೇತ ಅಯೋಧ್ಯ,ಅಲಹಾಬಾದ್, ಗಯಾ.ಹಾಗೂ 7/9ದಿನಗಳ ರಾಮೇಶ್ವರ,ಕನ್ಯಾಕುಮಾರಿ, ಮದುರೈ,ನವಗ್ರಹ ಏಷ್ಯನ್ ಟ್ರಾವೆಲ್ ಲೈನ್ಸ್. 164/3,ಆರ್.ವಿ.ರಸ್ತೆ ಬೆಂಗಳೂರು~04. ಸಂಪರ್ಕಿಸಿ: ಷಣ್ಮುಗಾನಂದ~ 8105657052/ 9480182865.

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809, 9902433500

27.01.2023ರಿಂದ 15ದಿನಗಳ 4 ಜ್ಯೋತಿರ್ಲಿಂಗ ಸಮೇತ ದ್ವಾರಕಾ,ಅಹಮದಾಬಾದ್, ಮಾತ್ರಗಯಾ,ರನ್ ಆಫ್ ಕಚ್, ಪಾವಘಡ,ಭುಜ್ ವಿಮಾನ ಮತ್ತು AC ಬಸ್ಸು 28.12.2022ರಿಂದ ಪಂಚರಾಮಕ್ಷೇತ್ರ ಸಮೇತ ಭದ್ರಾಚಲಂ,ರಾಮಾನುಜ ಪ್ರತಿಮೆ ವಿಶಾಖಪಟ್ಟಣ,ಹೈದರಾಬಾದ್ 13ದಿನಗಳು AC ಬಸ್ಸಿನಲ್ಲಿ ಏಷ್ಯನ್ ಟ್ರಾವೆಲ್ ಲೈನ್ಸ್. 164/3,ಆರ್.ವಿ.ರಸ್ತೆ, ಬೆಂಗಳೂರು~04. ಸಂಪರ್ಕಿಸಿ: ಷಣ್ಮುಗಾನಂದ~ 8105657052/ 9480182865.

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 26.01.2023 ರಿಂದ 8 ದಿನಗಳ ವಿಯಟ್ನಂ ಕಾಂಬೋಡಿಯಾ. 22.01.2023 04.02.2023 ರಿಂದ 6 ದಿನಗಳ ದುಬೈ,ಅಬುಧಾಬಿ. 22.01.2023 09.02.2023 ರಿಂದ 7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 24.12.2022 ರಿಂದ 8 ದಿನಗಳ ಸ್ನೋ ಸ್ಪೆಷಲ್ ಶಿಮ್ಲಾ ಮನಾಲಿ. 25.12.2022 ರಿಂದ 5 ದಿನಗಳ ಕನ್ಯಾಕುಮಾರಿ ರಾಮೇಶ್ವರ. 20.01.2023 08.02.2023 23.02.2023 ರಿಂದ 8 ದಿನಗಳ ಕಾಶಿ,ಗಯಾ,ಚಿತ್ರಕೂಟ ನೈಮಿಶಾರಣ್ಯ. 30.01.2023 04.03.2023 ರಿಂದ 8 ದಿನಗಳ ಪುರಿ,ಕೊಲ್ಕತ್ತ,ಕಾಶಿ. 20.01.2023 06.02.2023 ರಿಂದ 8/17 ದಿನಗಳ ಗುಜರಾತ್ ರಾಜಸ್ಥಾನ್. 23.02.2023 ರಿಂದ 11 ದಿನಗಳ ಮಧ್ಯಪ್ರದೇಶ. ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 8088887677 080-23385837

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಎಂಟರ ಘಟ್ಟಕ್ಕೆ ಅರ್ಜೆಂಟೀನಾ ಲಗ್ಗೆ; ಆಸ್ಟ್ರೇಲಿಯಾ ತಂಡಕ್ಕೆ ನಿರಾಶೆ

ಮೆಸ್ಸಿ ಮಾಂತ್ರಿಕತೆಗೆ ಒಲಿದ ಜಯ

ಅಲ್ ರಯಾನ್(ಎಪಿ): ತಮ್ಮ ಲಕ್ಷಾಂತರ ಅಭಿಮಾನಿಗಳ ನಿರೀಕ್ಷೆಯನ್ನು ಲಯೊನೆಲ್ ಮೆಸ್ಸಿ ಹುಸಿ ಮಾಡಲಿಲ್ಲ.

ಶನಿವಾರ ತಡರಾತ್ರಿ ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ನಡೆದ ಫಿಫಾ ವಿಶ್ವಕಪ್ ಟೂರ್ನಿಯ ಪ್ರೀ-ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕಾಲ್ಚಳಕ ಮೆರೆದ ಮೆಸ್ಸಿಯಿಂದಾಗಿ ಅರ್ಜೆಂಟೀನಾ ತಂಡವು ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟಿತು. ಅರ್ಜೆಂಟೀನಾ ತಂಡವು 2–1ರಿಂದ ಆಸ್ಟ್ರೇಲಿಯಾವನ್ನು ಸೋಲಿಸಿತು.

ಮೆಸ್ಸಿ ಈ ಪಂದ್ಯದಲ್ಲಿ ಎರಡು ದಾಖಲೆಗಳನ್ನೂ ಮಾಡಿದರು. ಅವರಿಗೆ ಇದು ಅವರ ವೃತ್ತಿಜೀವನದ ಒಟ್ಟಾರೆ 1000ನೇ ಪಂದ್ಯ. 2003ರಲ್ಲಿ ಪದಾರ್ಪಣೆ ಮಾಡಿದ ನಂತರ ಇಲ್ಲಿಯವರೆಗೆ ಅವರು ಮಾಡಿರುವ ಪ್ರಮುಖ ದಾಖಲೆಗಳಲ್ಲಿ ಇದೂ ಒಂದು.

ಈ ಹಾದಿಯಲ್ಲಿ ಅವರು ತಮ್ಮ ದೇಶದ ದಿಗ್ಗಜ ಡಿಯಾಗೊ ಮರಡೋನಾ ಅವರು ವಿಶ್ವಕಪ್‌ನಲ್ಲಿ ಗಳಿಸಿದ ಗೋಲುಗಳ ದಾಖಲೆಯನ್ನೂ ಮೀರಿದರು. ಮೆಸ್ಸಿ ನಾಯಕತ್ವದಲ್ಲಿ ಅರ್ಜೆಂಟೀನಾ ತಂಡವು ಆಡಿದ ನೂರನೇ ಪಂದ್ಯ ಇದಾಗಿದೆ.

ಕಿಕ್ಕಿರಿದು ಸೇರಿದ್ದ ಅಭಿಮಾನಿಗಳ ಎದುರು ಪಂದ್ಯದ 35ನೇ ನಿಮಿಷದಲ್ಲಿ ಮೊದಲ ಗೋಲು ಹೊಡೆದ ಮೆಸ್ಸಿ ತಂಡದ ಆತ್ಮವಿಶ್ವಾಸ ಹೆಚ್ಚಿಸಿದರು.

ಪಂದ್ಯ ಗೆದ್ದ ಬಳಿಕ ಸಹ ಆಟಗಾರರೊಂದಿಗೆ ಸಂಭ್ರಮಿಸಿದ ಲಯೊನೆಲ್ ಮೆಸ್ಸಿ– ಎಎಫ್‌ಪಿ ಚಿತ್ರ

ಮೆಸ್ಸಿ ಪಂದ್ಯದ ಮೊದಲ ಅರ್ಧ-ಗಂಟೆಯಲ್ಲಿ ಶಾಂತಚಿತ್ತ ಹಾಗೂ ತಾಳ್ಮೆಯಿಂದ ಆಡಿದರು. 34ನೇ ನಿಮಿಷದಲ್ಲಿ ಅವರು ತಮ್ಮನ್ನು ಸುತ್ತುವರಿದ ಆಸ್ಟ್ರೇಲಿಯಾದ ರಕ್ಷಣಾ ಪಡೆಯನ್ನು ತಪ್ಪಿಸಿ ಇನ್‌ಸೈಡ್ ಭಾಗದತ್ತ ಪಾಸ್ ಕೊಟ್ಟರು. ಅಲ್ಲಿದ್ದ ನಿಕೊಲಾಸ್ ಒಟಾಮೆಂಡಿ ಚೆಂಡನ್ನು ಮತ್ತೆ ಓಡುತ್ತಿದ್ದ ಮೆಸ್ಸಿಗೆ ಪಾಸ್ ಕೊಟ್ಟರು. ತಮ್ಮ ಮುಂದಿದ್ದ ಆಸ್ಟ್ರೇಲಿಯಾದ ಎತ್ತರಕಾಯದ ಹ್ಯಾರಿ ಸೌಟರ್ ಅವರನ್ನು ವಂಚಿಸಿದ ಮೆಸ್ಸಿ ಚೆಂಡನ್ನು ಗುರಿ ಸೇರಿಸಿದರು.

57ನೇ ನಿಮಿಷದಲ್ಲಿ ಜೂಲಿಯನ್ ಅಲ್ವರೇಜ್ ಗೋಲು ಹೊಡೆದು ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಮುಖ್ಯಾಂಶಗಳು
- 35ನೇ ನಿಮಿಷದಲ್ಲಿ ಕಾಲ್ಚಳಕ ತೋರಿದ ಮೆಸ್ಸಿ
- ಎಂಜೊ ಫರ್ನಾಂಡೆಜ್ ಅವರಿಂದ ಆಸ್ಟ್ರೇಲಿಯಾಕ್ಕೆ ಉಡುಗೊರೆ ಗೋಲು
- ಕ್ವಾರ್ಟರ್‌ಫೈನಲ್‌ನಲ್ಲಿ ನೆದರ್ಲೆಂಡ್ಸ್ ಸವಾಲು

ಇದರಿಂದಾಗಿ ಆಸ್ಟ್ರೇಲಿಯಾದ ಮೇಲೆ ಒತ್ತಡ ಹೆಚ್ಚಿತು. ಅರ್ಜೆಂಟೀನಾದ ಎಂಜೊ ಫರ್ನಾಂಡೆಜ್ 77ನೇ ನಿಮಿಷದಲ್ಲಿ ಆಸ್ಟ್ರೇಲಿಯಾಕ್ಕೆ ಉಡುಗೊರೆ ಗೋಲು ಕೊಟ್ಟರು. ಇದರಿಂದಾಗಿ ಕೊನೆಯ ಹಂತದ ನಿಮಿಷಗಳಲ್ಲಿ ಆಟವು ತುಸು ಕಾವೇರಿತು. ಕೊನೆಯ ವಿಷಲ್‌ವರೆಗೂ ಅರ್ಜೆಂಟೀನಾದ ಗೋಲ್‌ಕೀಪರ್ ಮಾರ್ಟಿನೇಜ್ ಆಸ್ಟ್ರೇಲಿಯಾದ ಪ್ರಯ-ತ್ನಗಳನ್ನು ವಿಫಲಗೊಳಿಸಿದರು.

ಅರ್ಜೆಂಟೀನಾ ತಂಡವು ಕ್ವಾ-ರ್ಟರ್‌ಫೈನಲ್‌ನಲ್ಲಿ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ. ಉಭಯ ತಂಡಗಳು 2014ರ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮುಖಾ-ಮುಖಿಯಾಗಿದ್ದವು. ಆಗ ಅರ್ಜೆಂಟೀನಾ ಜಯಿಸಿತ್ತು.

ಕ್ವಾರ್ಟರ್‌ಫೈನಲ್‌ಗೆ ಫ್ರಾನ್ಸ್

ಕೈಲಿಯಾನ್ ಎಂಬಾಪೆ ಮಿಂಚು: ಪೋಲೆಂಡ್‌ಗೆ ಸೋಲು

ದೋಹಾ (ಎಎಫ್‌ಪಿ): ಕೈಲಿಯಾನ್ ಎಂಬಾಪೆ ಗಳಿಸಿದ ಎರಡು ಗೋಲುಗಳು ಮತ್ತು ಒಲಿವಿಯರ್ ಜಿರೋದ್ ಗಳಿಸಿದ ಐತಿಹಾಸಿಕ ಗೋಲಿನ ಬಲದಿಂದ ಫ್ರಾನ್ಸ್ ತಂಡವು ವಿಶ್ವಕಪ್ ಟೂರ್ನಿಯ ಎಂಟರಘಟ್ಟಕ್ಕೆ ತಲುಪಿತು.

ಇಲ್ಲಿಯ ಅಲ್ ತುಮಾಮಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಫ್ರಾನ್ಸ್ 3–1ರಿಂದ ಪೋಲೆಂಡ್ ತಂಡವನ್ನು ಪರಾಭವಗೊಳಿಸಿತು.

44ನೇ ನಿಮಿಷದಲ್ಲಿ ಎಂಬಾಪೆ ನೀಡಿದ ನೆರವಿನಲ್ಲಿ ಒಲಿವಿಯರ್ ಜಿರೋದ್ ತಂಡದ ಮೊದಲ ಗೋಲು ದಾಖಲಿಸಿದರು. ಇದು ಫ್ರಾನ್ಸ್ ತಂಡಕ್ಕಾಗಿ ಅವರು ಗಳಿಸಿದ 52ನೇ ಗೋಲು. ಇದರೊಂದಿಗೆ ಥಿಯರಿ ಹೆನ್ರಿ (51 ಗೋಲು) ಅವರ ಸಾಧನೆಯನ್ನು ಮೀರಿನಿಂತ ಜಿರೋಡ್ ದೇಶದ ಪರ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರ ಎನಿಸಿಕೊಂಡರು.

74ನೇ ನಿಮಿಷದಲ್ಲಿ ಎಂಬಾಪೆ ತೋರಿದ ಕಾಲ್ಚಳಕವು ಫ್ರಾನ್ಸ್ ತಂಡದ ಗೆಲುವನ್ನು ಬಹುತೇಕ ಖಚಿತಪಡಿಸಿತು. 90 + 1ನೇ ನಿಮಿಷದಲ್ಲಿ ಅವರು ಮತ್ತೊಂದು ಬಾರಿ ಚೆಂಡನ್ನು ಗೋಲ್‌ಪೋಸ್ಟ್‌ಗೆ ಸೇರಿಸಿದರು. ಇದರೊಂದಿಗೆ ವಿಶ್ವಕಪ್ ಟೂರ್ನಿಯ ಒಟ್ಟು 11 ಪಂದ್ಯಗಳಿಂದ ಒಂಬತ್ತು ಗೋಲುಗಳನ್ನು ಗಳಿಸಿದ ಸಾಧನೆ ಮಾಡಿದರು.

90 + 9ನೇ ನಿಮಿಷದಲ್ಲಿ ರಾಬರ್ಟ್ ಲೆವಾಂಡೊಸ್ಕಿ ಪೋಲೆಂಡ್ ತಂಡಕ್ಕಾಗಿ ಸಮಾಧಾನಕರ ಗೋಲು ಹೊಡೆದರು. ಪೆನಾಲ್ಟಿ ಅವಕಾಶವನ್ನು ಅವರು ಗೋಲಿನಲ್ಲಿ ಪರಿವರ್ತಿಸಿದರು.

ದಾಖಲೆ ಸರಿಗಟ್ಟಿದ ಲಾರಿಸ್: ಫ್ರಾನ್ಸ್ ಗೋಲ್‌ಕೀಪರ್ ಹ್ಯೂಗೊ ಲಾರಿಸ್ ಅವರ ರಾಷ್ಟ್ರೀಯ ತಂಡದ ಪರ ಅತ್ಯಧಿಕ ಪಂದ್ಯವಾಡಿದ ದಾಖಲೆ ಸರಿಗಟ್ಟಿದರು. ಲಾರಿಸ್ ಮತ್ತು ಮಾಜಿ ಆಟಗಾರ ಲಿಲಿಯನ್ ತುರಾಮ್ ತಲಾ 142 ಪಂದ್ಯಗಳನ್ನು ಆಡಿದ್ದಾರೆ.

ಗೋಲು ಗಳಿಸಿದ ಕೈಲಿಯಾನ್ ಎಂಬಾಪೆ– ಎಎಫ್‌ಪಿ ಚಿತ್ರ

ಜಪಾನ್‌ಗೆ ಕ್ರೊವೇಷ್ಯಾ ಸವಾಲು

ದೋಹಾ (ರಾಯಿಟರ್ಸ್): ಯೂರೋಪ್‌ನ ಫುಟ್‌ಬಾಲ್ ಶಕ್ತಿ ಎನಿಸಿರುವ ಜರ್ಮನಿ ಮತ್ತು ಸ್ಪೇನ್ ತಂಡಗಳಿಗೆ ಸೋಲುಣಿಸಿರುವ ಜಪಾನ್ ತಂಡ, ವಿಶ್ವಕಪ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೋಮವಾರ ಕ್ರೊವೇಷ್ಯಾ ಸವಾಲನ್ನು ಎದುರಿಸಲಿದೆ.

ಆಟದ ಬಹುತೇಕ ಅವಧಿಯಲ್ಲೂ ಎದುರಾಳಿಗಳಿಗೆ ಪಂದ್ಯದ ಮೇಲೆ ನಿಯಂತ್ರಣ ಸಾಧಿಸಲು ಅವಕಾಶ ನೀಡಿ, ಏಕಾಏಕಿ ಚೆಂಡಿನೊಂದಿಗೆ ಮುನ್ನುಗ್ಗಿ ಗೋಲು ಗಳಿಸುವ ತಂತ್ರವನ್ನು ಜಪಾನ್ ಅನುಸರಿಸುತ್ತಿದೆ. ಸ್ಪೇನ್ ಮತ್ತು ಜರ್ಮನಿ ವಿರುದ್ಧ ಇದೇ ತಂತ್ರಗಾರಿಕೆ-ಯಿಂದ ಯಶಸ್ಸು ಗಳಿಸಿದೆ.

ಅಲ್ ಜನೂಬ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಜಪಾನ್ ಕೋಚ್ ಹಜಿಮೆ ಮೊರಿಯಸು ಏನಾದರೂ ಹೊಸ ತಂತ್ರದ ಮೊರೆ ಹೋಗುವರೇ ಎಂಬುದನ್ನು ನೋಡಬೇಕು. ನಾಯಕ ಲುಕಾ ಮಾಡ್ರಿಚ್, ಇವಾನ್ ಪೆರಿಸಿಚ್ ಮತ್ತು ದೆಜಾನ್ ಲೊವ್ರೆ ಅವರನ್ನೊಳ-ಗೊಂಡ ಕ್ರೊವೇಷ್ಯಾ ಬಲಿಷ್ಠವಾಗಿದೆ.

ಸೆಂಟರ್‌ಬ್ಯಾಕ್ ಆಟಗಾರ ಕೊವು ಇತಕುರ ಅವರ ಅನುಪಸ್ಥಿತಿಯಲ್ಲಿ ಜಪಾನ್ ಕಣಕ್ಕಿಳಿಯಲಿದೆ. ಎರಡು ಹಳದಿ ಕಾರ್ಡ್‌ಗಳನ್ನು ಪಡೆದಿರುವ ಅವರು ಒಂದು ಪಂದ್ಯದ ಅಮಾನತಿಗೆ ಒಳಗಾಗಿದ್ದಾರೆ. ಅವರ ಬದಲು ಹಿರೊಕಿ ಸಕಾಯ್ ಅಥವಾ ತಕೆಹಿರೊ ತೊಮಿಯಸು ಆಡುವ ಸಾಧ್ಯತೆಯಿದೆ.

ವಿಶ್ವಕಪ್‌ನಲ್ಲಿ ಇದೇ ಮೊದಲ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿ ಐತಿಹಾಸಿಕ ಸಾಧನೆ ಮಾಡುವ ಅವಕಾಶ ಜಪಾನ್‌ಗೆ ದೊರೆತಿದೆ. ಜಪಾನ್ ತಂಡ 2002, 2010 ಮತ್ತು 2018ರ ಟೂರ್ನಿಗಳಲ್ಲಿ 16ರ ಘಟ್ಟದ ತಡೆ ದಾಟುವಲ್ಲಿ ವಿಫಲವಾಗಿತ್ತು. ಕ್ರೊವೇಷ್ಯಾ ತಂಡ ವಿಶ್ವಕಪ್‌ನ 16ರ ಘಟ್ಟದಲ್ಲಿ ಒಮ್ಮೆಯೂ ಸೋತಿಲ್ಲ. 1998ರ ಟೂರ್ನಿಯಲ್ಲಿ ರೊಮೇನಿಯಾ ವಿರುದ್ಧ 1–0 ಗೋಲುಗಳಿಂದ ಗೆದ್ದಿದ್ದರೆ, ಕಳೆದ ಟೂರ್ನಿಯಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ಡೆನ್ಮಾರ್ಕ್ ತಂಡವನ್ನು ಮಣಿಸಿತ್ತು.

ಇಂದಿನ ಪಂದ್ಯ

Vs	ಜಪಾನ್ – ಕ್ರೊವೇಷ್ಯಾ	ರಾತ್ರಿ 8.30
Vs	ದ. ಕೊರಿಯಾ – ಬ್ರೆಜಿಲ್	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

ಪ್ರೀಕ್ವಾರ್ಟರ್ ಇಂದು: ದಕ್ಷಿಣ ಕೊರಿಯಾಗೆ ಸಾಧನೆ ತವಕ

ಬ್ರೆಜಿಲ್ ಆಟಗಾರರಿಗೆ ಗಾಯದ ಸಮಸ್ಯೆ

ದೋಹಾ (ರಾಯಿಟರ್ಸ್): ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದೆನಿಸಿರುವ ಬ್ರೆಜಿಲ್, ಟೂರ್ನಿಯ ಪ್ರೀಕ್ವಾ-ರ್ಟರ್‌ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ತಂಡಕ್ಕೆ ಮುಖಾಮುಖಿಯಾಗಲಿದೆ.

ಸ್ಟೇಡಿಯಂ 974 ಅಂಗಣದಲ್ಲಿ ಸೋಮವಾರ ನಡೆಯುವ ಈ ಹಣಾಹಣಿಗೂ ಮುನ್ನ ಬ್ರೆಜಿಲ್ ತಂಡಕ್ಕೆ ಆಟಗಾರರ ಗಾಯದ ಸಮಸ್ಯೆಯೇ ಪ್ರಮುಖ ಸವಾಲಾಗಿದೆ.

‘ಸರ್ಬಿಯಾ ಎದುರಿನ ಪಂದ್ಯದ ವೇಳೆ ಗಾಯಗೊಂಡಿದ್ದ ದಿಗ್ಗಜ ಆಟಗಾರ ನೇಮರ್ ಅವರು ಚೇತರಿಸಿಕೊಳ್ಳು-ತ್ತಿದ್ದು, ದಕ್ಷಿಣ ಕೊರಿಯಾ ವಿರುದ್ಧದ ಪಂದ್ಯದಲ್ಲಿ ಆಡುವ ಸಾಧ್ಯತೆಯಿದೆ. ಭಾನುವಾರ ಅವರು ತಾಲೀಮಿನಲ್ಲಿ ಪಾಲ್ಗೊಂಡಿದ್ದು, ಸಂಪೂರ್ಣ ಫಿಟ್ ಎನಿಸಿದರೆ ಕಣಕ್ಕಿಳಿಯುವರು‘ ಎಂದು ಬ್ರೆಜಿಲ್ ಕೋಚ್ ಟಿಟೆ ತಿಳಿಸಿದ್ದಾರೆ.

ಕ್ಯಾಮರೂನ್ ವಿರುದ್ಧದ ಸೆಣಸಾಟದಲ್ಲಿ ಅಲೆಕ್ಸ್ ಟೆಲ್ಲೆಸ್ ಮತ್ತು ಗ್ಯಾಬ್ರಿಯಲ್ ಜೇಸಸ್ ಮೊಣಕಾಲು ಗಾಯಕ್ಕೆ ತುತ್ತಾಗಿದ್ದಾರೆ. ಟೂರ್ನಿಯ ಉಳಿದ ಪಂದ್ಯಗಳಿಗೆ ಅವರು ಲಭ್ಯರಿಲ್ಲ.

ಟೂರ್ನಿಯ ಆರಂಭದಲ್ಲಿ ಗಾಯಗೊಂಡಿದ್ದ ಡ್ಯಾನಿಲೊ ಆಡಲು ಸಜ್ಜಾಗಿದ್ದಾರೆ. ಆದರೆ ಅಲೆಕ್ಸ್ ಸ್ಯಾಂಡ್ರೊ ಕಣಕ್ಕಿ-ಳಿಯುವುದು ಅನುಮಾನ.

ಮಾರ್ಕಿನೋಸ್, ಡ್ಯಾನಿ ಅಲ್ವೇಸ್, ಎಡರ್ ಮಿಲಿಟಾವೊ, ರೊಡ್ರಿಗೊ, ಕ್ಯಾಸೆಮಿರೊ, ಲೂಕಾಸ್ ಪಕೆಟಾ, ರಿಚಾರ್ಲಿಸನ್ ಮೇಲೆ ಬ್ರೆಜಿಲ್ ಕೋಚ್ ಟಿಟೆ ನಿರೀಕ್ಷೆ ಇಟ್ಟುಕೊಂಡಿದ್ದಾರೆ.

2002ರಲ್ಲಿ ದಕ್ಷಿಣ ಕೊರಿಯಾ ಸೆಮಿಫೈನಲ್ ತಲುಪಿತ್ತು. ಆ ಮೂಲಕ ಈ ಸಾಧನೆ ಮಾಡಿದ ಏಷ್ಯಾದ ಏಕೈಕ ತಂಡ ಎನಿಸಿಕೊಂಡಿತ್ತು. ಅದೇ ರೀತಿಯ ಸಾಧನೆಯನ್ನು ಪುನರಾವ-ರ್ತಿಸುವ ತವಕದಲ್ಲಿದೆ. ಸನ್ ಹೆಂಗ್ ಮಿನ್ ಅವರ ಮೇಲೆ ತಂಡ ಭರವಸೆ ಇಟ್ಟುಕೊಂಡಿದೆ.

ಬ್ರೆಜಿಲ್‌ನ ರಿಚಾರ್ಲಿಸನ್ ಮತ್ತು ದಕ್ಷಿಣ ಕೊರಿಯಾದ ಸನ್ ಹೆಂಗ್ ಮಿನ್

ಕುತೂಹಲ ಘಟ್ಟದಲ್ಲಿ ಟೆಸ್ಟ್

ರಾವಲ್ಪಿಂಡಿ (ಪಿಟಿಐ): ರನ್‌ಗಳ ಹೊಳೆಯಲ್ಲಿ ತೇಲುತ್ತಿರುವ ಇಂಗ್ಲೆಂಡ್ ಹಾಗೂ ಪಾಕಿಸ್ತಾನ ನಡುವಣ ಟೆಸ್ಟ್ ಪಂದ್ಯ ರೋಚಕ ಫಲಿತಾಂಶದ ನಿರೀಕ್ಷೆ ಮೂಡಿಸಿದೆ.

ರಾವಲ್ಪಿಂಡಿ ಕ್ರಿಕೆಟ್ ಕ್ರೀಡಾಂ-ಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ನಾಲ್ಕನೇ ದಿನದ ಆಟದಲ್ಲಿ 343 ರನ್‌ಗಳ ಮುನ್ನಡೆ ಸಾಧಿಸಿದ್ದ ಸಂದರ್ಭದಲ್ಲಿ ಎರಡನೇ ಇನಿಂಗ್ಸ್ ಡಿಕ್ಲೇರ್ ಮಾಡಿದ ಇಂಗ್ಲೆಂಡ್ ಅಚ್ಚರಿ ಮೂಡಿಸಿತು. ಗುರಿ ಬೆನ್ನಟ್ಟಿದ ಪಾಕಿಸ್ತಾನ ತಂಡವು ದಿನದ ಮುಕ್ತಾಯಕ್ಕೆ 20 ಓವರ್ ಗಳಲ್ಲಿ 2 ವಿಕೆಟ್‌ಗಳಿಗೆ 80 ರನ್ ಗಳಿಸಿದೆ. ಕೊನೆಯ ದಿನವಾದ ಸೋಮವಾರ 263 ರನ್‌ಗಳನ್ನು ಗಳಿಸುವ ಸವಾಲು ತಂಡಕ್ಕೆ ಇದೆ. ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಇಮಾಮ್ ಉಲ್ ಹಕ್ (ಬ್ಯಾಟಿಂಗ್ 43) ಹಾಗೂ ಸೌದ್ ಶಕೀಲ್ (ಬ್ಯಾಟಿಂಗ್ 24) ಕ್ರೀಸ್‌ನಲ್ಲಿದ್ದಾರೆ.

ಭಾನುವಾರ ಎರಡನೇ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡವು 35.5 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 264 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಪಾಕ್ ತಂಡದ ಆರಂಭಿಕ ಬ್ಯಾಟರ್ ಅಬ್ದುಲ್ ಶಫೀಕ್ ಅವರ ವಿಕೆಟ್ ಅನ್ನು ರಾಬಿನ್ಸನ್ ಹಾಗೂ ಬಾಬರ್ ಆಜಂ ವಿಕೆಟ್ ಅನ್ನು ಬೆನ್ ಸ್ಟೋಕ್ಸ್ ಗಳಿಸಿದರು. ಅಜರ್ ಅಲಿ ಗಾಯಗೊಂಡು ನಿವೃತ್ತಿಯಾದರು.

ಶನಿವಾರ ಪಾಕ್ ತಂಡವು 7 ವಿಕೆಟ್‌ಗಳಿಗೆ 499 ರನ್ ಗಳಿಸಿತ್ತು. ಬೆಳಿಗ್ಗೆ ಇಂಗ್ಲೆಂಡ್‌ನ ವಿಲ್ ಜ್ಯಾಕ್ಸ್. ಪಾಕ್ ತಂಡದ ಉಳಿದ ಮೂರು ವಿಕೆಟ್‌ಗಳನ್ನೂ ಕಬಳಿಸಿದರು. ಆತಿಥೇಯ ತಂಡವು 579 ರನ್‌ಗಳಿಗೆ ಆಲೌಟ್ ಆಯಿತು. ಈ ಇನಿಂಗ್ಸ್‌ನಲ್ಲಿ ವಿಲ್ ಒಟ್ಟು ಆರು ವಿಕೆಟ್‌ಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ 657, ಪಾಕಿಸ್ತಾನ: 579. ಎರಡನೇ ಇನಿಂಗ್ಸ್: ಇಂಗ್ಲೆಂಡ್: 35.5 ಓವರ್‌ಗಳಲ್ಲಿ 7ಕ್ಕೆ264 ಡಿಕ್ಲೇರ್ಡ್ (ಜ್ಯಾಕ್ ಕ್ರಾಲಿ 50, ಜೋ ರೂಟ್ 73, ಹ್ಯಾರಿ ಬ್ರೂಕ್ 87, ವಿಲ್ ಜ್ಯಾಕ್ಸ್ 24, ನಸೀಂ ಶಾ 66ಕ್ಕೆ2, ಮೊಹಮ್ಮದ್ ಅಲಿ 64ಕ್ಕೆ2, ಜಹೀದ್ ಮೆಹಮೂದ್ 84ಕ್ಕೆ2) ಪಾಕಿಸ್ತಾನ: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 80 (ಇಮಾಮ್ ಉಲ್ ಹಕ್ ಬ್ಯಾಟಿಂಗ್ 43, ಸೌದ್ ಶಕೀಲ್ ಬ್ಯಾಟಿಂಗ್ 24, ಒಲೀ ರಾಬಿನ್ಸನ್ 22ಕ್ಕೆ1, ಬೆನ್ ಸ್ಟೋಕ್ಸ್ 20ಕ್ಕೆ1).

ಬ್ಯಾಡ್ಮಿಂಟನ್: ಉನ್ನತಿ, ಅನೀಶ್‌ಗೆ ಬೆಳ್ಳಿ

ನವದೆಹಲಿ: ಭಾರತದ ಉನ್ನತಿ ಹೂಡಾ ಅವರು ಏಷ್ಯನ್ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.

ಥಾಯ್ಲೆಂಡ್‌ನ ನೋಥಬುರಿಯಲ್ಲಿ ಭಾನುವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಉನ್ನತಿ 18-21, 21-9, 14-21ರಿಂದ ಥಾಯ್ಲೆಂಡ್‌ನ ಸರುನ್ರಕ್ ವಿತಿದ್ಸನ್ ಎದುರು ಸೋತರು.

ಉನ್ನತಿ ಹೂಡಾ

15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಅನೀಶ್ ತೊಪ್ಪಾನಿ ಮತ್ತು 17 ವರ್ಷದೊಳಗಿನ ಡಬಲ್ಸ್ ಜೋಡಿ ಅರ್ಶ್ ಮೊಹಮ್ಮದ್- ಸಂಸ್ಕಾರ್ ಸಾರಸ್ವತ್ ಕೂಡ ಬೆಳ್ಳಿ ಜಯಿಸಿದರು. ಫೈನಲ್‌ನಲ್ಲಿ ಅನೀಶ್ 8-21, 24-22, 19-21ರಿಂದ ಚೀನಾ ತೈಪೆಯ ಚುವಾಂಗ್ ಸಿಯಾಂಗ್ ಯಿಹ್ ಎದುರು ಸೋತರು. ಅರ್ಶ್ ಮತ್ತು ಸಂಸ್ಕಾರ್ ಪ್ರಶಸ್ತಿ ಸುತ್ತಿನಲ್ಲಿ 13-21 21-19 22-24ರಿಂದ ಚೀನಾ ತೈಪೆಯ ಲಾಯಿ ಪೊ ಯು- ಯಿ ಹಾವೊ ಲಿನ್ ವಿರುದ್ಧ ಸೋತರು.

ಇಂದಿನಿಂದ 3 ದಿನ ಹಣಕಾಸು ನೀತಿ ಸಮಿತಿ ಸಭೆ

ರೆಪೊ ಶೇ 0.35ರಷ್ಟು ಹೆಚ್ಚಳ ಸಂಭವ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ಬಾರಿ ರೆಪೊ ದರವನ್ನು ಕಡಿಮೆ ಪ್ರಮಾಣದಲ್ಲಿ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಸೋಮವಾರದಿಂದ ಬುಧವಾರದ-ವರೆಗೆ ಸಭೆ ಸೇರಲಿದ್ದು, ಬುಧವಾರ ತನ್ನ ನಿರ್ಧಾರ ಪ್ರಕಟಿಸಲಿದೆ. ಆರ್‌ಬಿಐ ಈಗಾಗಲೇ ರೆಪೊ ದರವನ್ನು ಮೂರು ಬಾರಿ ಶೇ 0.50ರಂತೆ ಹೆಚ್ಚಿಸಿದೆ.

ಚಿಲ್ಲರೆ ಹಣದುಬ್ಬರ ಕಡಿಮೆ ಆಗುತ್ತಿದೆ. ಹೀಗಾಗಿ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ಮುಂಬರುವ ಸಭೆಯಲ್ಲಿ ರೆಪೊ ದರವನ್ನು ಶೇ 0.25 ರಿಂದ ಶೇ 0.35ರವರೆಗೆ ಮಾತ್ರವೇ ಹೆಚ್ಚಿಸಬಹುದು ಎಂದು ತಜ್ಞರು ಅಂದಾಜು ಮಾಡಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್ ಸಹ ಬಡ್ಡಿದರವನ್ನು ಶೇ 0.50ರಷ್ಟು ಹೆಚ್ಚಿಸುವ ಸುಳಿವು ನೀಡಿದೆ. ಆರ್‌ಬಿಐ ಇದನ್ನು ಗಮನದಲ್ಲಿ ಇಟ್ಟುಕೊಂಡು ನಿರ್ಧಾರಕ್ಕೆ ಬರುವ ಸಾಧ್ಯತೆ ಇದೆ.



ಫೆಡರಲ್ ರಿಸರ್ವ್ ಹಣದುಬ್ಬರವನ್ನು ನಿಯಂತ್ರಿಸಲು ಈ ಹಿಂದೆ ಬಡ್ಡಿದರವನ್ನು ಶೇ 0.75ರಂತೆ ನಾಲ್ಕು ಬಾರಿ ಹೆಚ್ಚಳ ಮಾಡಿದೆ ಎಂದು ತಜ್ಞರು ತಿಳಿಸಿದ್ದಾರೆ.

ಚಿಲ್ಲರೆ ಹಣದುಬ್ಬರವು ಜನವರಿಯಿಂದಲೂ ಶೇ 6ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇದ್ದಿದ್ದರಿಂದ ಆರ್‌ಬಿಐ ಮೇ ತಿಂಗಳಿನಿಂದ ಈವರೆಗೆ ರೆಪೊ ದರವನ್ನು ಶೇ 1.90ರಷ್ಟು ಏರಿಕೆ ಮಾಡಿದೆ.

‘ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಪ್ರಮಾಣ ತಗ್ಗಿರುವುದು ಹಾಗೂ ಹಣದುಬ್ಬರವು ಶೇ 6ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇರುವುದನ್ನು ಗಮನದಲ್ಲಿ ಇಟ್ಟುಕೊಂಡು ಆರ್‌ಬಿಐ ತನ್ನ ಹಣಕಾಸು ನೀತಿಯನ್ನು ಪ್ರಕಟಿಸಲಿದೆ. ಈ ಬಾರಿಯೂ ಎಂಪಿಸಿಯು ಬಡ್ಡಿದರ ಹೆಚ್ಚಿಸಲಿದೆ. ಆದರೆ, ಹೆಚ್ಚಳದ ಪ್ರಮಾಣವು ಶೇ 0.25–0.35ರ ಮಟ್ಟದಲ್ಲಿ ಇರುವ ಸಾಧ್ಯತೆ ಇದೆ’ ಎಂದು ಬ್ಯಾಂಕ್ ಆಫ್ ಬರೋಡದ ಮುಖ್ಯ ಆರ್ಥಿಕ ತಜ್ಞ ಮದನ್ ಸಬ್ನವೀಸ್ ಹೇಳಿದ್ದಾರೆ

ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಶೇ 6.3ಕ್ಕೆ ಇಳಿಕೆ ಆಗಿದೆ. ಆದರೆ, ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬೆಳವಣಿಗೆ ದರವು ಶೇ 13.5ರಷ್ಟು ಇತ್ತು. ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 6.77ಕ್ಕೆ ಇಳಿಕೆ ಕಂಡಿದೆ.

ಮುಖ್ಯಾಂಶಗಳು
- 10ನೇ ತಿಂಗಳಿನಲ್ಲಿಯೂ ಗರಿಷ್ಠ ಮಟ್ಟದಲ್ಲಿ ಚಿಲ್ಲರೆ ಹಣದುಬ್ಬರ
- ಎರಡನೇ ತ್ರೈಮಾಸಿಕದಲ್ಲಿ ತಗ್ಗಿದ ಜಿಡಿಪಿ ಬೆಳವಣಿಗೆ ಪ್ರಮಾಣ

20 ಲಕ್ಷ ತಯಾರಿಕೆ ಗುರಿ ಕಷ್ಟ: ಮಾರುತಿ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು 20 ಲಕ್ಷ ವಾಹನಗಳನ್ನು ತಯಾರಿಸುವ ಗುರಿಯನ್ನು ತಲುಪಲು ಕಷ್ಟವಾಗ-ಬಹುದು ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

2021–22ನೇ ಹಣಕಾಸು ವರ್ಷದಲ್ಲಿ 20 ಲಕ್ಷ ವಾಹನಗಳನ್ನು ತಯಾರಿಸಲಾಗುವುದು ಎಂದು ಕಂಪನಿಯ ಅಧ್ಯಕ್ಷ ಆರ್.ಸಿ. ಭಾರ್ಗವ ಆಗಸ್ಟ್‌ನಲ್ಲಿ ಷೇರುದಾರರ ಸಭೆಯಲ್ಲಿ ಹೇಳಿದ್ದರು.

‘ತಯಾರಿಕೆಯು 20 ಲಕ್ಷಕ್ಕಿಂತ ತುಸು ಕಡಿಮೆ ಆಗಲಿದೆ. ಈಗಾಗಲೇ ಬುಕಿಂಗ್ ಆಗಿರುವ 3.75 ಲಕ್ಷ ವಾಹನಗಳಲ್ಲಿ ಎಷ್ಟನ್ನು ತಯಾರಿಸಲು ಸಾಧ್ಯವಾಗಲಿದೆ ಎನ್ನುವುದರ ಮೇಲೆ ಎಲ್ಲವೂ ನಿರ್ಧಾರ ಆಗಲಿದೆ’ ಎಂದು ಶಶಾಂಕ್ ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಕಚ್ಚಾ ತೈಲ ಉತ್ಪಾದನೆಯಲ್ಲಿ ಯಥಾಸ್ಥಿತಿ: ಒಪೆಕ್+

ವಿಯೆನ್ನಾ (ಎಎಫ್‌ಪಿ): ಕಚ್ಚಾ ತೈಲ ಉತ್ಪಾದನೆಯನ್ನು ಈಗಿರುವ ಮಟ್ಟದಲ್ಲಿಯೇ ಉಳಿಸಿಕೊಳ್ಳಲು ಭಾನುವಾರ ನಡೆದ ಸಭೆಯಲ್ಲಿ ಪೆಟ್ರೋಲಿಯಂ ರಫ್ತುದಾರ ರಾಷ್ಟ್ರಗಳ ಒಕ್ಕೂಟ (ಒಪೆಕ್) ಮತ್ತು ಆ ಒಕ್ಕೂಟದ ಮಿತ್ರರಾಷ್ಟ್ರಗಳ (ಒಪೆಕ್ +) ಪ್ರತಿನಿಧಿಗಳು ನಿರ್ಧರಿಸಿದ್ದಾರೆ.

13 ದೇಶಗಳನ್ನು ಒಳಗೊಂಡ ಸೌದಿ ಅರೇಬಿಯಾ ನೇತೃತ್ವದ ಒಪೆಕ್ ಮತ್ತು ರಷ್ಯಾ ನೇತೃತ್ವದ 10 ದೇಶಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿ-ದ್ದರು. 2023ರ ಅಂತ್ಯದವರೆಗೂ ದಿನಕ್ಕೆ 20 ಲಕ್ಷ ಬ್ಯಾರಲ್ ಉತ್ಪಾದನೆ ಕಡಿತ ಮಾಡುವ ಅಕ್ಟೋಬರ್‌ನ ನಿರ್ಧಾರಕ್ಕೆ ಬದ್ಧವಿರಲು ಸಭೆಯಲ್ಲಿ ತೀರ್ಮಾನಿಸ-ಲಾಯಿತು.

ಹವಾಮಾನದಲ್ಲಿ ಎದುರಾಗಿರುವ ಅನಿಶ್ಚಿತ ಸ್ಥಿತಿ ಮತ್ತು ರಷ್ಯಾ ತೈಲದ ಮೇಲೆ ಹೇರಿರುವ ದರ ಮಿತಿಯು ಮುಂದಿನ ವಾರದಿಂದ ಜಾರಿಗೆ ಬರಲಿದೆ. ಹೀಗಿದ್ದರೂ ‘ಒಪೆಕ್ + ’ ಉತ್ಪಾದನೆ ಪ್ರಮಾಣದಲ್ಲಿ ತನ್ನ ಈ ಹಿಂದಿನ ನಿರ್ಧಾರವನ್ನು ಬದಲಾಯಿಸದೇ ಇರಲು ನಿರ್ಧರಿಸಿದೆ.

ರಷ್ಯಾದಿಂದ ಖರೀದಿಸುವ ಪ್ರತಿ ಬ್ಯಾರಲ್ ತೈಲಕ್ಕೆ 60 ಡಾಲರ್ ದರ ಮಿತಿಯನ್ನು ವಿಧಿಸಲು ಐರೋಪ್ಯ ಒಕ್ಕೂಟ, ಜಿ7 ಮತ್ತು ಆಸ್ಟ್ರೇಲಿಯಾ ಶುಕ್ರವಾರ ಒಪ್ಪಿಗೆ ಸೂಚಿಸಿವೆ. ಇದು ಸೋಮವಾರದಿಂದ ಜಾರಿಗೆ ಬರಲಿದೆ. ಆದರೆ, ದರ ಮಿತಿ ಹೇರಿರುವ ದೇಶಗಳಿಗೆ ತೈಲ ಪೂರೈಕೆ ನಿಲ್ಲಿಸುವುದಾಗಿ ರಷ್ಯಾ ಎಚ್ಚರಿಕೆ ನೀಡಿದೆ.

ಮಾರುಕಟ್ಟೆ ಸ್ಥಿತಿಗತಿಯನ್ನು ಆಧರಿಸಿ ಅಕ್ಟೋಬರ್‌ನಲ್ಲಿ ಉತ್ಪಾದನೆ ಕಡಿತದ ನಿರ್ಧಾರಕ್ಕೆ ಬರಲಾಗಿತ್ತು. ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಸ್ಥಿರತೆ ಮೂಡಿಸಲು ಅಗತ್ಯ ಮತ್ತು ಸರಿಯಾದ ಕ್ರಮ ತೆಗೆ-ದುಕೊಳ್ಳಲಾಗಿದೆ ಎಂದು ‘ಒಪೆಕ್ + ’ ಪ್ರಕಟಣೆಯಲ್ಲಿ ತಿಳಿಸಿದೆ.

ಅಗತ್ಯ ಬಿದ್ದರೆ ತೈಲ ಮಾರುಕಟ್ಟೆಯನ್ನು ಬೆಂಬಲಿಸಲು ತಕ್ಷಣದ ಎಲ್ಲಾ ಕ್ರಮ ತೆಗೆದುಕೊಳ್ಳಲು ಸಿದ್ಧ ಇರುವುದಾಗಿ ಅದು ಹೇಳಿದೆ.

ಯಾವುದಕ್ಕೆ ಎಷ್ಟು ಸಾಲ ತಗೋಬೇಕು?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಆದಾಯಕ್ಕೆ ತಕ್ಕಂತೆ ಎಷ್ಟು ಮೊತ್ತದ ಮನೆ ಖರೀದಿಸಬೇಕು, ಗಳಿಕೆಗೆ ಅನುಗುಣವಾಗಿ ಎಷ್ಟು ಮೌಲ್ಯದ ಕಾರು ಕೊಳ್ಳೋದು ಸೂಕ್ತ, ಹೀಗೆ ಅನೇಕ ಪ್ರಶ್ನೆಗಳು ನಿಮಗೂ ಇರಬಹುದು. ಜೊತೆಗೆ ಯಾವುದಕ್ಕೆ ಎಷ್ಟು ಸಾಲ ಮಾಡಬೇಕು ಎನ್ನುವ ಗೊಂದಲವೂ ಇರಬಹುದು. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಮಾಡೋಣ.

ಎಷ್ಟು ಮೊತ್ತದ ಮನೆ ಖರೀದಿಸಬೇಕು?: ನೀವು ಎಷ್ಟು ಮೊತ್ತದ ಮನೆ ಖರೀದಿ ಮಾಡಬೇಕು ಎನ್ನುವುದು ನಿಮ್ಮ ವಾರ್ಷಿಕ ಆದಾಯವನ್ನು ಅವಲಂಬಿಸಿದೆ. ವಾರ್ಷಿಕ ಸಂಪಾದನೆಯ 3 ರಿಂದ 4 ಪಟ್ಟು ಮೌಲ್ಯದ ಮನೆ ಖರೀದಿ ಮಾಡುವ ನಿರ್ಧಾರಕ್ಕೆ ಬರುವುದು ಉತ್ತಮ. ಬಹುತೇಕರು ತಾವು ಎಷ್ಟು ಮಾಸಿಕ ಕಂತು (ಇಎಂಐ) ಪಾವತಿಸಬಹುದು ಎನ್ನುವ ಲೆಕ್ಕಾಚಾರ ಆಧರಿಸಿ ಅಷ್ಟು ಮೊತ್ತದ ಮನೆ ಖರೀದಿಗೆ ಮುಂದಾಗುತ್ತಾರೆ. ಆದರೆ ಈ ರೀತಿಯ ನಿರ್ಧಾರ ಖಂಡಿತ ನಿಮ್ಮ ಆರ್ಥಿಕ ಸ್ಥಿತಿಗತಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಉದಾಹರಣೆಗೆ ನಿಮ್ಮ ವಾರ್ಷಿಕ ಆದಾಯ ₹ 25 ಲಕ್ಷ ಎಂದಾದಲ್ಲಿ ₹ 75 ಲಕ್ಷದಿಂದ ₹ 1 ಕೋಟಿ ವರೆಗಿನ ಮೌಲ್ಯವಿರುವ ಮನೆ ಖರೀದಿಗೆ ಮುಂದಾಗಬಹುದು. ಇನ್ನು ನಿಮ್ಮ ಗೃಹ ಸಾಲದ ಮಾಸಿಕ ಕಂತು ತಿಂಗಳ ಆದಾಯದ ಶೇ 25 ರಿಂದ ಶೇ 35 ರ ವರಗೆ ಮಾತ್ರ ಇರಬೇಕು.

ಎಷ್ಟು ದುಬಾರಿ ಕಾರನ್ನು ನೀವು ಖರೀದಿಸಬಹುದು?: ಕಾರು ಅಪಮೌಲ್ಯಕ್ಕೆ ಒಳಗಾಗುತ್ತದೆ. ಷೋರೂಂನಿಂದ ಹೊರಬಂದರೆ ಆಯ್ತು, ಕಾರು ಮೌಲ್ಯ ಕಳೆದುಕೊಳ್ಳುವ ಪ್ರಕ್ರಿಯೆ ಆರಂಭಗೊಳ್ಳುತ್ತದೆ. ಉದಾಹರಣೆಗೆ ನೀವು ₹ 10 ಲಕ್ಷ ಕೊಟ್ಟು ಕಾರು ಖರೀದಿಸಿದ್ದೀರಿ ಎಂದಾದರೆ ನಾಲ್ಕೈದು ವರ್ಷಗಳ ಬಳಿಕ ಆ ಕಾರಿನ ಬೆಲೆ ಶೇ 50 ರಷ್ಟು ಕಡಿಮೆಯಾಗಿರುತ್ತೆ. ಕಾರನ್ನು ಚೆನ್ನಾಗಿಯೇ ಇಟ್ಟುಕೊಂಡಿದ್ದೀರಿ ಎಂದಾದರೂ ಅದಕ್ಕೆ ಹೆಚ್ಚಿನ ಬೆಲೆ ಕೊಡಲು ಖರೀದಿದಾರರು ಮುಂದೆ ಬರುವುದಿಲ್ಲ. ನಿಮ್ಮ ವಾರ್ಷಿಕ ಆದಾಯದ ಶೇ 40 ರಿಂದ ಶೇ 50 ರಷ್ಟು ಮೌಲ್ಯದ ಕಾರನ್ನು ನೀವು ಖರೀದಿಸಬಹುದು. ವಾರ್ಷಿಕವಾಗಿ ₹ 20 ಲಕ್ಷ ಆದಾಯ ಗಳಿಸುತ್ತೀರಿ ಎಂದಾದಲ್ಲಿ ನೀವು ಕೊಳ್ಳುವ ಕಾರಿನ ಬೆಲೆ ₹ 10 ಲಕ್ಷ ಮೀರಬಾರದು. ಇಷ್ಟೇ ಅಲ್ಲ, ಕಾರು ಖರೀದಿ ಮಾಡುವಾಗ ಶೇ 20 ರಿಂದ ಶೇ 25 ರಷ್ಟು ಹಣವನ್ನು ಡೌನ್ ಪೇಮೆಂಟ್ ಮಾಡುವುದು ಒಳಿತು. ಇನ್ನು ಕಾರು ಕೊಳ್ಳಲು ಸಾಲ ಪಡೆದಲ್ಲಿ ನಿಮ್ಮ ಮಾಸಿಕ ಆದಾಯದ ಶೇ 10 ರಿಂದ ಶೇ 15 ರಷ್ಟು ಮಾತ್ರ ಕಾರು ಸಾಲದ ಕಂತಿನ (ಇಎಂಐ) ಮೊತ್ತವಾಗಿರಬೇಕು.

ಆದಾಯಕ್ಕೆ ತಕ್ಕಂತೆ ಎಷ್ಟು ಸಾಲ ಮಾಡಬೇಕು?: ಎಷ್ಟು ಸಾಲ ಮಾಡಬೇಕು ಎನ್ನುವುದನ್ನು ತಿಳಿದುಕೊಳ್ಳೋದು ಬಹಳ ಮುಖ್ಯ. ಇಲ್ಲದಿದ್ದರೆ ಸಾಲದ ಶೂಲಕ್ಕೆ ಸಿಲುಕಬೇಕಾಗುತ್ತದೆ. ಮಾಸಿಕ ಆದಾಯದ ಶೇ 30 ರಿಂದ ಶೇ 35 ರಷ್ಟು ಹಣವನ್ನು ಮಾತ್ರ ನೀವು ಸಾಲದ ಕಂತಿಗೆ ಮೀಸಲಿಡಬೇಕು. ಗೃಹ ಸಾಲ, ವಾಹನ ಸಾಲ, ವೈಯಕ್ತಿಕ ಸಾಲ ಈ ಎಲ್ಲಾ ಸಾಲಗಳನ್ನು ಒಳಗೊಂಡಾಗಲೂ ಒಟ್ಟು ಸಾಲದ ಮಾಸಿಕ ಕಂತು ನಿಮ್ಮ ಮಾಸಿಕ ಆದಾಯದ ಶೇ 35ಕ್ಕಿಂತ ಹೆಚ್ಚಿಗೆ ಇರಬಾರದು. ಒಂದೊಮ್ಮೆ ಇದಕ್ಕಿಂತ ಹೆಚ್ಚಿಗೆ ಸಾಲ ಮಾಡಿಕೊಂಡರೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ.

ಇನ್ನೊಂದು ಪ್ರಮುಖ ವಿಷಯ ಏನೆಂದರೆ ನಿವೃತ್ತಿ ಹೊಂದಲು ಇನ್ನು 5 ವರ್ಷ ಬಾಕಿ ಇರುವಂತೆಯೇ ಎಲ್ಲಾ ಸಾಲಗಳಿಂದ ಮುಕ್ತವಾಗಬೇಕು. ಏಕೆಂದರೆ ನಿವೃತ್ತಿಯ ನಂತರ ಆದಾಯ ಕಡಿತಗೊಳ್ಳುವುದರಿಂದ ಸಾಲಗಳನ್ನು ತೀರಿಸಲು ಕಷ್ಟವಾಗುತ್ತದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಸಾರ್ವಕಾಲಿಕ ದಾಖಲೆ ಬರೆದ ಸೂಚ್ಯಂಕಗಳು

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಗಳಿಕೆ ದಾಖಲಿಸಿವೆ. ಡಿಸೆಂಬರ್ 2 ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ಕಂಡಿವೆ. 62,868 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.92 ರಷ್ಟು ಹೆಚ್ಚಳ ಕಂಡಿದೆ. 18,887 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ, ಶೇ 0.99 ರಷ್ಟು ಜಿಗಿದಿದೆ. ಜಾಗತಿಕ ಮಟ್ಟದಲ್ಲಿ ಹಣದುಬ್ಬರ ಇಳಿಕೆ, ಡಾಲರ್ ಬೆಲೆ ಇಳಿಕೆ, ತೈಲ ಬೆಲೆ ಇಳಿಕೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಖರೀದಿ ಉತ್ಸಾಹ ಸೇರಿ ಹಲವು ಅಂಶಗಳು ಮಾರುಕಟ್ಟೆ ಸೂಚ್ಯಂಕಗಳ ಹೆಚ್ಚಳಕ್ಕೆ ಕಾರಣವಾಗಿವೆ. ಮತ್ತೊಂದೆಡೆ ಡಿಸೆಂಬರ್ 1 ರಂದು ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕ್ರಮವಾಗಿ 63,583 ಮತ್ತು 18,887 ಅಂಶಗಳನ್ನು ತಲುಪಿ ಸಾರ್ವಕಾಲಿಕ ಗರಿಷ್ಠಮಟ್ಟ ತಲುಪಿ ದಾಖಲೆ ಬರೆದಿವೆ.

ವಲಯವಾರು, ಎಲ್ಲಾ ವಲಯಗಳು ಸಕಾರಾತ್ಮಕ ಗಳಿಕೆ ಕಂಡಿವೆ. ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 4, ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4, ಲೋಹ ಸೂಚ್ಯಂಕ ಶೇ 3.7 ಮತ್ತು ನಿಫ್ಟಿ ಎಫ್ ಎಂಸಿಜಿ ಸೂಚ್ಯಂಕ ಶೇ 2.4 ರಷ್ಟು ಗಳಿಕೆ ದಾಖಲಿಸಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 15,067.55 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 1,335.57 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಪೇಟಿಎಂ, ಬಂಧನ್ ಬ್ಯಾಂಕ್, ಜೊಮಾಟೊ, ಐಸಿಐಸಿಐ ಲೋಬಾರ್ಡ್ ಗಳಿಕೆ ದಾಖಲಿಸಿವೆ. ಮಿಡ್ ಕ್ಯಾಪ್‌ನಲ್ಲಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ, ಟ್ಯೂಬ್ ಇನ್ವೆಸ್ಟ್ ಮೆಂಟ್ಸ್ ಆಫ್ ಇಂಡಿಯಾ, ಆದಿತ್ಯ ಬಿರ್ಲಾ ಕ್ಯಾಪಿಟಲ್, ದಾಲ್ಮಿಯಾ ಭಾರತ್, ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಮತ್ತು ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ಉತ್ತಮ ಗಳಿಕೆ ಕಂಡಿವೆ. ಬಿಎಸ್‌ಇ ಸ್ಮಾಲ್ ಕ್ಯಾಪ್‌ನಲ್ಲಿ ಎಚ್‌ಎಲ್‌ವಿ, ಸದ್ಭಾವ್ ಎಂಜಿನಿಯರಿಂಗ್, ಲಿಖಿತಾ ಇನ್ಫ್ರಾಸ್ಟ್ರ-ಕ್ಚರ್, ರಿಕೋ ಆಟೋ, ಕೆಬಿಸಿ ಗ್ಲೋಬಲ್, ಜಯಪ್ರಕಾಶ್ ಅಸೋಸಿಯೇಟ್ಸ್, ರೇಮೆಂಡ್, ಕಾಸ್ಮೊ ಫಸ್ಟ್ ಮತ್ತು ಬಜಾಜ್ ಹಿಂದುಸ್ತಾನ್ ಶುಗರ್ ಶೇ 20 ರಿಂದ ಶೇ 31 ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಡಿಸೆಂಬರ್ 7 ರಂದು ಆರ್‌ಬಿಐನ ಹಣಕಾಸು ಸಮಿತಿ ಸಭೆಯ ನಿರ್ಧಾರ ಹೊರಬೀಳಲಿದೆ. ಸಭೆಯಲ್ಲಿ ರೆಪೊ ಬಡ್ಡಿ ದರವನ್ನು ಮತ್ತಷ್ಟು ಹೆಚ್ಚಳ ಮಾಡುವ ತೀರ್ಮಾನವನ್ನು ಆರ್‌ಬಿಐ ಕೈಗೊಳ್ಳುವುದೇ ಎನ್ನುವ ಕುತೂಹಲವಿದೆ. ಒಂದೊಮ್ಮೆ ರೆಪೊ ದರ ಹೆಚ್ಚಳವಾದರೆ ಅದರ ನೇರ ಹೊರೆ ಸಾಲ ಪಡೆದವರ ಮೇಲೆ ಬೀಳಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಷೇರು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿವೆ.

ಇಟಿಎಫ್ ಮೂಲಕ ಹೆಚ್ಚುವರಿ ನಿಧಿ ಹೂಡಿಕೆ: ಇಎಸ್‌ಐಸಿ

ನವದೆಹಲಿ (ಪಿಟಿಐ): ಕಾರ್ಮಿಕರ ರಾಜ್ಯ ವಿಮಾ ನಿಗಮವು (ಇಎಸ್‌ಐಸಿ) ತನ್ನ ಹೆಚ್ಚುವರಿ ನಿಧಿಯನ್ನು ವಿನಿಮಯ ವಹಿವಾಟು ನಿಧಿಗಳ (ಇಟಿಎಫ್) ಮೂಲಕ ಷೇರುಪೇಟೆಯಲ್ಲಿ ಹೂಡಿಕೆ ಮಾಡುವ ಪ್ರಸ್ತಾವಕ್ಕೆ ಭಾನುವಾರ ಒಪ್ಪಿಗೆ ನೀಡಿದೆ.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ಅವರ ನೇತೃತ್ವದಲ್ಲಿ ನಡೆದ ಇಎಸ್‌ಐಸಿ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಕಾರ್ಮಿಕ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಸಾಲಪತ್ರಗಳಲ್ಲಿ ಮಾಡುವ ಹೂಡಿಕೆಗಳಿಗೆ ಬರುವ ಗಳಿಕೆಯು ಕಡಿಮೆ ಇರುವುದರಿಂದ ಹೆಚ್ಚುವರಿ ನಿಧಿಗಳನ್ನು ಇಟಿಎಫ್‌ಗಳಲ್ಲಿ ತೊಡಗಿಸಲು ಒಪ್ಪಿಗೆ ನೀಡಿದೆ. ಮೊದಲಿಗೆ ಶೇ 5ರಷ್ಟನ್ನು ಹೂಡಿಕೆ ಮಾಡಲಾಗುವುದು. ಎರಡು ತ್ರೈಮಾ-ಸಿಕಗಳಲ್ಲಿ ಹೂಡಿಕೆಯ ಪರಿಶೀಲನೆ ನಡೆಸಿದ ಬಳಿಕ ಹೂಡಿಕೆ ಪ್ರಮಾಣವನ್ನು ಶೇ 15ರವರೆಗೆ ಹೆಚ್ಚಿಸಲಾಗುವುದು ಎಂದು ತಿಳಿಸಿದೆ.

8 ಕಂಪನಿಗಳ ಗಳಿಕೆ ₹1.15 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳಲ್ಲಿ 8 ಕಂಪನಿಗಳ ಮಾರುಕಟ್ಟೆ ಮೌಲ್ಯವು ಡಿಸೆಂಬರ್ 2ಕ್ಕೆ ಕೊನೆಗೊಂಡ ವಾರದ ವಹಿವಾಟಿನಲ್ಲಿ ₹1.15 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ.

ಷೇರುಪೇಟೆಯಲ್ಲಿ ನಡೆದ ಸಕಾರಾತ್ಮಕ ವಹಿವಾಟಿನಿಂದ ಕಂಪನಿಗಳ ಮೌಲ್ಯದಲ್ಲಿ ಏರಿಕೆ ಕಂಡುಬಂದಿದೆ. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಮಾರುಕಟ್ಟೆ ಬಂಡವಾಳ ಮೌಲ್ಯವು ₹ 71,462 ಕೋಟಿಯಷ್ಟು ಗರಿಷ್ಠ ಏರಿಕೆ ಕಂಡು ಒಟ್ಟು ಮೌಲ್ಯವು ₹18.41 ಲಕ್ಷ ಕೋಟಿಗೆ ತಲುಪಿದೆ. ಹಿಂದುಸ್ತಾನ್ ಯೂನಿಲಿವರ್‌ನ ಮಾರುಕಟ್ಟೆ ಮೌಲ್ಯವು ₹18,491ರಷ್ಟು ಹೆಚ್ಚಾಗಿ ₹6.14 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಟಾಟಾ ಕನ್ಸಲ್ಟನ್ಸಿ ಸರ್ವೀಸಸ್‌ನ (ಟಿಸಿಎಸ್) ಮಾರುಕಟ್ಟೆ ಮೌಲ್ಯ ₹18,442 ಕೋಟಿಯಷ್ಟು ಹೆಚ್ಚಾಗಿದೆ. ಇನ್ಫೊಸಿಸ್, ಅದಾನಿ ಎಂಟರ್‌ಪ್ರೈಸಸ್, ಭಾರ್ತಿ ಏರ್‌ಟೆಲ್, ಐಸಿಐಸಿಐ ಬ್ಯಾಂಕ್ ಮತ್ತು ಎಸ್‌ಬಿಐ ಮಾರುಕಟ್ಟೆ ಮೌಲ್ಯದಲ್ಲಿಯೂ ಏರಿಕೆ ಕಂಡುಬಂದಿದೆ.

ಆದರೆ, ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯದಲ್ಲಿ ₹5,418 ಕೋಟಿ ಕಡಿಮೆ ಆಗಿದ್ದು, ಒಟ್ಟಾರೆ ಮೌಲ್ಯವು ₹8.96 ಲಕ್ಷ ಕೋಟಿಗೆ ಇಳಿಕೆ ಕಂಡಿದೆ. ಎಚ್‌ಡಿಎಫ್‌ಸಿ ಮಾರುಕಟ್ಟೆ ಮೌಲ್ಯ ₹2,282 ಕೋಟಿ ಕಡಿಮೆ ಆಗಿದ್ದು, ಒಟ್ಟು ಮೌಲ್ಯ ₹4.85 ಲಕ್ಷ ಕೋಟಿಗೆ ತಲುಪಿದೆ.

ಮೌಲ್ಯಯುತ ಪ್ರಮುಖ 10 ಕಂಪನಿಗಳ ಪಟ್ಟಿಯಲ್ಲಿ ರಿಲಯನ್ಸ್ ಮೊದಲ ಸ್ಥಾನದಲ್ಲಿದೆ. ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಎರಡು ಮತ್ತು ಮೂರನೇ ಸ್ಥಾನ ಪಡೆದುಕೊಂಡಿದೆ. ಮುಂಬೈ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹289.57 ಲಕ್ಷ ಕೋಟಿಗೆ ತಲುಪಿದೆ.

ಜಯ 'ಕೈಚೆಲ್ಲಿದ' ರೋಹಿತ್ ಬಳಗ!

ಕ್ರಿಕೆಟ್: 'ಜೀವದಾನ'ದ ಲಾಭ ಪಡೆದ ಮಿರಾಜ್–ಬಾಂಗ್ಲಾಗೆ ರೋಚಕ ಜಯ

ಮೆಹದಿ ಹಸನ್ ಮಿರಾಜ್ ಸಂಭ್ರಮ –ಎಎಫ್‌ಪಿ ಚಿತ್ರ

ಢಾಕಾ (ಪಿಟಿಐ): ಶೇರ್ ಎ ಬಾಂಗ್ಲಾ ಕ್ರೀಡಾಂಗಣದಲ್ಲಿ ಮೆಹದಿ ಹಸನ್ ಮಿರಾಜ್ ಕ್ಯಾಚ್‌ಅನ್ನು ಭಾರತದ ವಿಕೆಟ್‌ಕೀಪರ್ ಕೆ.ಎಲ್. ರಾಹುಲ್ ಕೈಚೆಲ್ಲಿದರು. ಅದರೊಂದಿಗೆ ತಂಡದ ಜಯದ ಅವಕಾಶವೂ ಕೈತಪ್ಪಿತು.

ಭಾನುವಾರ ಇಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ತಮಗೆ ಲಭಿಸಿದ 'ಜೀವದಾನ'ವನ್ನು ಸಮರ್ಥವಾಗಿ ಬಳಸಿಕೊಂಡ ಮಿರಾಜ್, ಬಾಂಗ್ಲಾ ತಂಡಕ್ಕೆ 1 ವಿಕೆಟ್ ಅಂತರದ ರೋಚಕ ಜಯದ ಕಾಣಿಕೆ ನೀಡಿದರು. ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಬಾಂಗ್ಲಾ ತಂಡವು ಭಾರತವನ್ನು 186 ರನ್‌ಗಳಿಗೆ ಕಟ್ಟಿಹಾಕಿತು. ಶಕೀಬ್ ಅಲ್ ಹಸನ್ 5 ವಿಕೆಟ್ ಗಳಿಸಿದರು.

ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಆದರೆ, ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಕೆ.ಎಲ್. ರಾಹುಲ್ (73; 70ಎ, 4X5, 6X4) ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಡೆದರು. ಆದರೆ ವಿಕೆಟ್‌ಕೀಪಿಂಗ್‌ನಲ್ಲಿ ಎಡವಿದರು.

ಸಾಧಾರಣ ಮೊತ್ತ ಬೆನ್ನಟ್ಟಿದ ಬಾಂಗ್ಲಾ ತಂಡಕ್ಕೆ ಭಾರತದ ಮೊಹಮ್ಮದ್ ಸಿರಾಜ್ (32ಕ್ಕೆ3), ಸ್ಪಿನ್ನರ್ ವಾಷಿಂಗ್ಟನ್ ಸುಂದರ್ (17ಕ್ಕೆ2) ಹಾಗೂ ಪದಾರ್ಪಣೆ ಮಾಡಿದ ಕುಲದೀಪ್ ಸೇನ್ (37ಕ್ಕೆ2) ಬೌಲಿಂಗ್ ಬಲದಿಂದ ಬಾಂಗ್ಲಾ ತಂಡವು 39.3 ಓವರ್‌ಗಳಲ್ಲಿ 136 ರನ್ ಗಳಿಸಿ 9 ವಿಕೆಟ್‌ಗಳನ್ನು ಕಳೆದುಕೊಂಡಿತ್ತು.

ಇನ್ನೊಂದು ವಿಕೆಟ್ ಗಳಿಸಿದರೆ ಜಯದ ಸಂಭ್ರಮ ಆಚರಿಸುವ ಅವಕಾಶ ಭಾರತ ತಂಡಕ್ಕಿತ್ತು. ಆದರೆ, ಶಾರ್ದೂಲ್ ಠಾಕೂರ್ ಹಾಕಿದ 43ನೇ ಓವರ್‌ನಲ್ಲಿ ಮಿರಾಜ್ ಬ್ಯಾಟಿನ ಮೇಲಿನ ಅಂಚಿಗೆ ಬಡಿದ ಚೆಂಡು ಎತ್ತರಕ್ಕೆ ಚಿಮ್ಮಿತು. ಚೆಂಡಿನ ಬೆನ್ನತ್ತಿದ ಕೀಪರ್ ರಾಹುಲ್ ಕ್ಯಾಚ್ ಪಡೆಯುವ ಪ್ರಯತ್ನ ಮಾಡಿದರು. ಕೈಗವಸುಗಳಲ್ಲಿ ಸೇರಿದ ಚೆಂಡನ್ನು ಗಟ್ಟಿಯಾಗಿ ಹಿಡಿಯುವಲ್ಲಿ ರಾಹುಲ್ ವಿಫಲರಾದರು.

ಇದರ ಲಾಭ ಪಡೆದ ಮಿರಾಜ್ (ಅಜೇಯ 38) ಹಾಗೂ ಅವರಿಗೆ ಉತ್ತಮ ಜೊತೆ ನೀಡಿದ ಮುಸ್ತಫಿಜುರ್ ರೆಹಮಾನ್ (ಅಜೇಯ 10) ತಂಡವನ್ನು ಗೆಲುವಿನ ದಡ ಸೇರಿಸಿದರು. ಆರಂಭಿಕ ಸ್ಪೆಲ್‌ನಲ್ಲಿ ಉತ್ತಮ ಬೌಲಿಂಗ್ ಮಾಡಿದ್ದ ದೀಪಕ್ ಚಾಹರ್ ಕೊನೆಯ ಹಂತದ ಓವರ್‌ಗಳಲ್ಲಿ ತುಟ್ಟಿಯಾದರು. ಬಾಂಗ್ಲಾ 46 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 187 ರನ್ ಗಳಿಸಿ ಗೆದ್ದಿತು.

ಶಿಖರ್ ಧವನ್ ಮತ್ತು ರೋಹಿತ್ ಇನಿಂಗ್ಸ್ ಆರಂಭಿಸಿದ್ದರಿಂದ ರಿಷಭ್ ಪಂತ್ ಹಾಗೂ ಇಶಾನ್ ಕಿಶನ್ ಅವರಿಗೆ ಅಂತಿಮ 11ರಲ್ಲಿ ಅವಕಾಶ ಸಿಗಲಿಲ್ಲ. ಆದ್ದರಿಂದ ರಾಹುಲ್ ಅವರಿಗೆ ಕೀಪಿಂಗ್ ಹೊಣೆ ನೀಡಲಾಗಿತ್ತು.

ಭಾರತ ತಂಡದ ಫೀಲ್ಡಿಂಗ್ ಕೂಡ ಹಲವು ಲೋಪಗಳಿಂದ ಕೂಡಿತ್ತು.

ಸಂಕ್ಷಿಪ್ತ ಸ್ಕೋರ್: ಭಾರತ 41.2 ಓವರ್‌ಗಳಲ್ಲಿ 186 (ರೋಹಿತ್ ಶರ್ಮ 27, ಶ್ರೇಯಸ್ ಅಯ್ಯರ್ 24, ಕೆ.ಎಲ್. ರಾಹುಲ್ 73, ವಾಷಿಂಗ್ಟನ್ ಸುಂದರ್ 19, ಶಕೀಬ್ ಅಲ್ ಹಸನ್ 36ಕ್ಕೆ 5, ಇಬಾದತ್ ಹೊಸೇನ್ 47ಕ್ಕೆ 4). ಬಾಂಗ್ಲಾದೇಶ 46 ಓವರ್‌ಗಳಲ್ಲಿ 9 ವಿಕೆಟ್‌ಗೆ 187 (ಲಿಟನ್ ದಾಸ್ 41, ಶಕೀಬ್ ಅಲ್ ಹಸನ್ 29, ಮುಷ್ಫಿಕುರ್ ರಹೀಂ 18, ಮೆಹದಿ ಹಸನ್ ಮಿರಾಜ್ ಔಟಾಗದೆ 38, ಮುಸ್ತಫಿಜುರ್ ರಹ್ಮಾನ್ ಔಟಾಗದೆ 10, ಮೊಹಮ್ಮದ್ ಸಿರಾಜ್ 32ಕ್ಕೆ3, ವಾಷಿಂಗ್ಟನ್ ಸುಂದರ್ 17ಕ್ಕೆ2, ಕುಲದೀಪ್ ಸೇನ್ 37ಕ್ಕೆ2) ಫಲಿತಾಂಶ: ಬಾಂಗ್ಲಾದೇಶಕ್ಕೆ 1 ವಿಕೆಟ್ ಗೆಲುವು

ವಿಸೆನ್ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು. (ನಿಂತವರು, ಎಡದಿಂದ) ಯದು ಮೋಹನ್, ರಿಕಿನ್ ಕಾಲ್ವಿನ್, ಜಗದೀಶ್ವರ ನೇರ್ಲಪಲ್ಲೆ, ಆಕಾಶ್ ಮಳಿ, ಅಜ್ಮಲ್ ಮುಹಮ್ಮದ್, ಶುಭಂ ಪವಾರ್ (ಕುಳಿತವರು) ಶೈಲೇಶ್ ತಿಲಗರ್, ರೋಹಿತ್ ಆನಂದ್ ಮತ್ತು ಸಿದ್ಧಾರ್ಥ್ ಮಾವಿಲ ಇದ್ದಾರೆ –ಪ್ರಜಾವಾಣಿ ಚಿತ್ರ

ವಿಸೆನ್‌ಗೆ ನೈಸ್ ಡಿಎಚ್ ಕಪ್

ಬೆಂಗಳೂರು: ಸೊಗಸಾದ ಆಟವಾಡಿದ ವಿಸೆನ್ ತಂಡದವರು ಇಲ್ಲಿ ಕೊನೆಗೊಂಡ 'ನೈಸ್ ಡಿಎಚ್ ಕಪ್ ಕಾರ್ಪೊರೇಟ್ ಫುಟ್‌ಬಾಲ್ ಟೂರ್ನಿ'ಯಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಫೈನಲ್‌ನಲ್ಲಿ ವಿಸೆನ್ 4-0 ಗೋಲುಗಳಿಂದ ಐಕ್ವಿಯಾ ವಿರುದ್ಧ ಗೆದ್ದಿತು. ಶೈಲೇಶ್ ತಿಲಗರ್ ಎರಡು ಗೋಲು ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಕಾಶ್ ಮಳಿ ಮತ್ತು ಸಿದ್ಧಾರ್ಥ್ ಮಾವಿಲ ತಲಾ ಒಂದು ಗೋಲು ತಂದಿತ್ತರು.

ಇದಕ್ಕೂ ಮುನ್ನ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ವಿಸೆನ್ 11-0 ರಲ್ಲಿ ಟೈಟನ್ ತಂಡವನ್ನು ಮಣಿಸಿದ್ದರೆ, ಐಕ್ವಿಯಾ 3-1 ರಲ್ಲಿ ಸ್ವಿಸ್ ರೇ ವಿರುದ್ಧ ಗೆದ್ದಿತ್ತು.

ವೈಯಕ್ತಿಕ ಪ್ರಶಸ್ತಿ: ಟೂರ್ನಿಯಲ್ಲಿ ಒಟ್ಟು 18 ಗೋಲುಗಳನ್ನು ಗಳಿಸಿದ ವಿಸೆನ್ ತಂಡದ ಆಕಾಶ್ ಮಳಿ 'ಗರಿಷ್ಠ ಗೋಲ್ ಸ್ಕೋರರ್' ಪ್ರಶಸ್ತಿ ಪಡೆದರು. ಐಕ್ವಿಯಾ ತಂಡದ ಕೆ.ಶರತ್, 'ಅತ್ಯುತ್ತಮ ಗೋಲ್‌ಕೀಪರ್', ಸ್ವಿಸ್ ರೇ ತಂಡದ ಶರಣ್ ದೀಪಕ್ 'ಜಂಟ್ಲ್‌ಮನ್ ಆಫ್ ದಿ ಟೂರ್ನಮೆಂಟ್' ಗೌರವ ತಮ್ಮದಾಗಿಸಿಕೊಂಡರು.

ಕಬಡ್ಡಿ: ಬುಲ್ಸ್ ಜಯಭೇರಿ

ಹೈದರಾಬಾದ್: ಬೆಂಗಳೂರು ಬುಲ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಗೆಲುವು ಪಡೆದರು.

ಗಚಿಬೌಳಿ ಕ್ರೀಡಾಂಗಣದಲ್ಲಿ ಭಾನುವಾರ ಬುಲ್ಸ್ 38-35 ರಲ್ಲಿ ಯು.ಪಿ.ಯೋಧಾಸ್ ತಂಡವನ್ನು ಮಣಿಸಿತು. ಇದರೊಂದಿಗೆ ಪ್ಲೇ ಆಫ್ ತಲುಪಿತು.

ಪ್ರಥಮಾರ್ಧದಲ್ಲಿ 19-14 ರಲ್ಲಿ ಮುನ್ನಡೆಯಲ್ಲಿದ್ದ ಬುಲ್ಸ್ ತಂಡದ ಪರ ಭರತ್ 8 ಹಾಗೂ ವಿಕಾಸ್ ಖಂಡೋಲ 6 ಪಾಯಿಂಟ್ಸ್ ತಂದಿತ್ತರು. ದಿನದ ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 38-36 ರಲ್ಲಿ ಯು ಮುಂಬಾ ತಂಡವನ್ನು ಮಣಿಸಿತು. 13 ಪಾಯಿಂಟ್ಸ್ ಗಳಿಸಿದ ಪ್ರತೀಕ್ ದಹಿಯಾ ಜೈಂಟ್ಸ್ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಂದಿನ ಪಂದ್ಯಗಳು
ಪುಣೇರಿ ಪಲ್ಟನ್– ಪಟ್ನಾ ಪೈರೇಟ್ಸ್.
ಜೈಪುರ ಪಿಂಕ್ ಪ್ಯಾಂಥರ್ಸ್–ಹರಿಯಾಣ ಸ್ಟೀಲರ್ಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಜೈಪುರ	20	14	6	0	74
ಪುಣೇರಿ	20	13	5	2	74
ಬೆಂಗಳೂರು	20	12	7	1	68
ಯುಪಿ	20	11	7	2	66
ತಲೈವಾಸ್	20	9	7	4	61
ಡೆಲ್ಲಿ	20	9	10	1	55

ಲೈಂಗಿಕ ಸಮಸ್ಯೆ
"ನಿಮ್ಮ ಲೈಂಗಿಕ ಸಮಸ್ಯೆಗೆ ನಮ್ಮ ಧನ್ವಂತರಿ ಆಯುರ್ವೇದ"
ಅಡ್ಡಪರಿಣಾಮಗಳಿಲ್ಲ
ಬಳಸಿದ ತಕ್ಷಣವೇ ಕೆಲಸ ಆರಂಭ.
ನಮ್ಮ ನೂತನ ಚಿಕಿತ್ಸೆಯಿಂದ ಇಂದ್ರಿಯವನ್ನು 7-8 ಇಂಚು ಉದ್ದ, 3-4 ಇಂಚು ದಪ್ಪ, ನೇರ ಮತ್ತು ಸದೃಢಗೊಳಿಸಿ ಲೈಂಗಿಕ ಸಮಯವನ್ನು 30-40 ನಿಮಿಷ ಹೆಚ್ಚಿಸಿಕೊಳ್ಳಲು ತಕ್ಷಣ ಕರೆ ಮಾಡಿ.
21 ರಿಂದ 75 ವರ್ಷದವರಿಗೆ ರಾಮಬಾಣದಂತ ಔಷಧ.
ನಿಮ್ಮ ಚಿಕ್ಕದಾದ ಸ್ತನಗಳನ್ನು ದೊಡ್ಡದಾಗಿ ಆಕರ್ಷಕವಾಗಿ ಸುಂದರವಾಗಿ ಮತ್ತು ಜಿಗಿಯಾಗಿರುವಂತೆ ಮಾರ್ಪಡಿಸಿಕೊಳ್ಳಿ. (18 ರಿಂದ 50 ವರ್ಷದ ಮಹಿಳೆಯರಿಗಾಗಿ)
100% ಗ್ಯಾರಂಟಿ, ಕಾಮಸೂತ್ರ ಪುಸ್ತಕಗಳು ದೊರೆಯುತ್ತವೆ
ಈಗ ಕರ್ನಾಟಕದಲ್ಲಿ ಲಭ್ಯವಿದೆ.
ಬೆಲೆ 1575, 2100, 3150, 5250
9980890487

ಪ್ರಖರ್ ಶತಕ: ಕರ್ನಾಟಕ ತಂಡಕ್ಕೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಪ್ರಖರ್ ಚತುರ್ವೇದಿ ಸಿಡಿಸಿದ ಅಮೋಘ ಶತಕದ (149 ರನ್) ಬಲದಿಂದ ಕರ್ನಾಟಕ ತಂಡವು ಜಮ್ಮು ಮತ್ತು ಕಾಶ್ಮೀರದ ವಿರುದ್ಧ ಬೃಹತ್ ಮೊತ್ತ ಕಲೆಹಾಕಿತು.

ಇಲ್ಲಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಚ್ ಬಿಹಾರ್ ಟ್ರೋಫಿ 19 ವರ್ಷ-ದೊಳಗಿನವರ ಕ್ರಿಕೆಟ್ ಟೂರ್ನಿಯ ಎರಡನೇ ದಿನದಾಟದಲ್ಲಿ ರಾಜ್ಯ ತಂಡವು 105 ಓವರ್‌ಗಳಲ್ಲಿ 380 ರನ್ ಗಳಿಸಿ, ಮೊದಲ ಇನಿಂಗ್ಸ್‌ನಲ್ಲಿ 294 ರನ್ ಮುನ್ನಡೆ ಸಾಧಿಸಿತು.

ಅರ್ಧಶತಕ ಬಾರಿಸಿದ್ದ ಸ್ವರೂಪ್ ಎಸ್.ಹಿಪ್ಪರಗಿ (71 ರನ್) ಭಾನುವಾರ ಬೇಗನೆ ಔಟಾದರು. ನಂತರ ಪ್ರಖರ್ ಅವರಿಗೆ ಯಶೋವರ್ಧನ್ ಪ್ರತಾಪ್ (41 ರನ್) ಹಾಗೂ ಹಾರ್ದಿಕ್ ರಾಜ್ (27ರನ್) ಉತ್ತಮ ಜೊತೆ ನೀಡಿದರು. ಉತ್ತಮ ಬೌಲಿಂಗ್ ದಾಳಿ ನಡೆಸಿದ ಮೌಸುಬ್ ಮೌದ್ ಭಟ್ (73ಕ್ಕೆ 6) ಮಿಂಚಿದರು. 2ನೇ ಇನ್ನಿಂಗ್ಸ್‌ನಲ್ಲಿ ಜಮ್ಮು ಕಾಶ್ಮೀರ 39 ರನ್‌ಗೆ 2 ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ಆಗ ತಂಡಕ್ಕೆ ಆರ್ಯ ಠಾಕೂರ್ (43), ಅರ್ಣವ್ ಗುಪ್ತಾ (29 ಬ್ಯಾಟಿಂಗ್) ಆಸರೆಯಾದರು. ದಿನದಾಟದ ಅಂತ್ಯಕ್ಕೆ ಜಮ್ಮು ಮತ್ತು ಕಾಶ್ಮೀರ 23 ಓವರ್‌ಗಳಲ್ಲಿ 3 ವಿಕೆಟ್‌ಗೆ 84 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಜಮ್ಮು ಮತ್ತು ಕಾಶ್ಮೀರ ಮೊದಲ ಇನಿಂಗ್ಸ್: 86 (ಮೊಹಸಿನ್ ಖಾನ್ 41ಕ್ಕೆ 4, ಆದಿತ್ಯ ನಾಯರ್ 7ಕ್ಕೆ 2), ಕೆಎಸ್‌ಸಿಎ: 105 ಓವರ್‌ಗಳಲ್ಲಿ 380 (ಪ್ರಖರ್ ಚತುರ್ವೇದಿ 149, ಸ್ವರೂಪ್ ಎಸ್. ಹಿಪ್ಪರಗಿ 71, ಮೌಸುಬ್ ಮೌದ್ ಭಟ್ 73ಕ್ಕೆ 6) ಜಮ್ಮು ಮತ್ತು ಕಾಶ್ಮೀರ 2ನೇ ಇನಿಂಗ್ಸ್: 3ಕ್ಕೆ 84 (ಆರ್ಯ ಠಾಕೂರ್ 42, ಹಾರ್ದಿಕ್ ರಾಜ್ 5ಕ್ಕೆ 1).

ಪ್ರಖರ್ ಚತುರ್ವೇದಿ

ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ ಜಯ

ಪರ್ತ್(ಎಎಫ್‌ಪಿ): ನೇಥನ್ ಲಯನ್ ಸ್ಪಿನ್ ಮೋಡಿಯ ಮುಂದೆ ವೆಸ್ಟ್ ಇಂಡೀಸ್ ಬ್ಯಾಟರ್‌ಗಳ ಆಟ ನಡೆಯಲಿಲ್ಲ.

ಆರು ವಿಕೆಟ್ ಗಳಿಸಿದ ನೇಥನ್ ಬೌಲಿಂಗ್‌ನಿಂದಾಗಿ ಆಸ್ಟ್ರೇಲಿಯಾ ತಂಡವು 164 ರನ್‌ಗಳಿಂದ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್‌ನಲ್ಲಿ ಜಯಿಸಿತು. ಎರಡು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ವಿಂಡೀಸ್ ಆರಂಭಿಕ ಬ್ಯಾಟರ್, ನಾಯಕ ಕ್ರೇಗ್ ಬ್ರಾಥ್‌ವೇಟ್ (ಔಟಾಗದೆ 110;188ಎ) ಶತಕ ವ್ಯರ್ಥವಾಯಿತು.

ಗೆಲುವಿಗಾಗಿ 497 ರನ್‌ಗಳ ಗುರಿ ಬೆನ್ನಟ್ಟಿದ್ದ ವಿಂಡೀಸ್ ತಂಡಕ್ಕೆ 110.5 ಓವರ್‌ಗಳಲ್ಲಿ 333 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಶನಿವಾರ ದಿನದಾಟದ ಮುಕ್ತಾಯಕ್ಕೆ ವಿಂಡೀಸ್ ತಂಡವು 3 ವಿಕೆಟ್‌ಗಳಿಗೆ 192 ರನ್ ಗಳಿಸಿತ್ತು. ಶತಕ ಗಳಿಸಿ ಕ್ರೀಸ್‌ನಲ್ಲಿದ್ದ ಬ್ರಾಥ್‌ವೇಟ್ ಹಾಗೂ ಕೈಲ್ ಮೇಯರ್ಸ್ ಅವರು ವಿಂಡೀಸ್ ಸೋಲು ತಪ್ಪಿಸುವ ನಿರೀಕ್ಷೆ ಮೂಡಿಸಿದ್ದರು.

ಆದರೆ ನೇಥನ್ ಲಯನ್ ಅವರಿಬ್ಬರ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು. ಕೊನೆಯ ಹಂತದಲ್ಲಿ ರಾಸ್ಟನ್ ಚೇಸ್ (55; 85ಎ) ಮತ್ತು ಅಲ್ಜರಿ ಜೋಸೆಫ್ (43; 72) ಪಂದ್ಯವನ್ನು ಡ್ರಾದತ್ತ ಮುನ್ನಡೆಸುವ ನಿರೀಕ್ಷೆ ಮೂಡಿಸಿದ್ದರು. ಟ್ರಾವಿಸ್ ಹೆಡ್ ಎಸೆತದಲ್ಲಿ ಜೋಸೆಫ್ ಔಟಾಗುವುದ-ರೊಂದಿಗೆ ಜೊತೆಯಾಟ ಮುರಿಯಿತು. ಆರು ಓವರ್‌ಗಳ ನಂತರ ನೇಥನ್ ತಮ್ಮ ಒಂದೇ ಓವರ್‌ನಲ್ಲಿ ರಾಸ್ಟನ್ ಹಾಗೂ ರೋಚ್ ಅವರ ವಿಕೆಟ್‌ಗಳನ್ನು ಕಬಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 152.4 ಓವರ್‌ಗಳಲ್ಲಿ 4ಕ್ಕೆ598 ಡಿ., ವೆಸ್ಟ್ ಇಂಡೀಸ್: 98.2 ಓವರ್‌ಗಳಲ್ಲಿ 283, ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 37 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 182 ಡಿಕ್ಲೇರ್ಡ್. ವೆಸ್ಟ್ ಇಂಡೀಸ್: 110.5 ಓವರ್‌ಗಳಲ್ಲಿ 333 (ಕ್ರೇಗ್ ಬ್ರಾಥ್‌ವೇಟ್ 110, ಕೈಲ್ ಮೇಯರ್ಸ್ 10, ರಾಸ್ಟನ್ ಚೇಸ್ 55, ಅಲ್ಜರಿ ಜೋಸೆಫ್ 43, ನೇಥನ್ ಲಯನ್ 128ಕ್ಕೆ6, ಟ್ರಾವಿಸ್ ಹೆಡ್ 25ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 164 ರನ್‌ಗಳ ಗೆಲುವು.

ಟೆನ್‌ಪಿನ್ ಬೌಲಿಂಗ್: ಆಕಾಶ್‌ಗೆ ಪ್ರಶಸ್ತಿ

ಆಕಾಶ್

ಬೆಂಗಳೂರು: ಕರ್ನಾಟಕದ ಆಕಾಶ್ ಅಶೋಕ್ ಕುಮಾರ್ ಅವರು ಚೆನ್ನೈನಲ್ಲಿ ನಡೆದ ಚೆನ್ನೈ ಓಪನ್ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್‌ನ ಓಪನ್ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಫೈನಲ್‌ನಲ್ಲಿ ಆಕಾಶ್ 289–222ರಿಂದ ದೆಹಲಿಯ ಧ್ರುವ ಸರ್ದಾ ಎದುರು ಗೆದ್ದರು.

ಡಬಲ್ಸ್‌ನಲ್ಲಿ ಆಕಾಶ್–ಕೃಷ್ಣನ್ ಆರ್. ಪ್ರಶಸ್ತಿ ಜಯಿಸಿದರು. ಈ ವಿಭಾಗದಲ್ಲಿ ಪರ್ವೇಜ್ ಅಹಮದ್–ಸಲ್ಮಾನ್ ಖಾನ್ ರನ್ನರ್ಸ್ ಅಪ್ ಆದರೆ, ಪುರುಷರ ಗ್ರೇಡೆಡ್ ವಿಭಾಗದಲ್ಲಿ ಸಲ್ಮಾನ್ ಖಾನ್ ಮೂರನೇ ಸ್ಥಾನ ಗಳಿಸಿದರು.

ನಾನು ಚೆನ್ನಾಗಿದ್ದೇನೆ: ಪೆಲೆ

ಸಾವೊಪೌಲೊ (ಎಎಫ್‌ಪಿ): 'ನಾನು ಚೆನ್ನಾಗಿದ್ದೇನೆ. ಬಹಳಷ್ಟು ನಿರೀಕ್ಷೆ-ಗಳೊಂದಿಗಿರುವೆ' ಎಂದು ಆಸ್ಪತ್ರೆ-ಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿರುವ ಫುಟ್‌ಬಾಲ್ ದಿಗ್ಗಜ ಪೆಲೆ ಹೇಳಿದ್ದಾರೆ.

ಬ್ರೆಜಿಲ್ ದೇಶದ ಫುಟ್‌ಬಾಲ್ ದಂತಕಥೆ ಪೆಲೆ ಅವರು ಕರುಳಿನ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ಈಚೆಗೆ ಇಲ್ಲಿಯ ಆಸ್ಪತ್ರೆಗೆ ದಾಖಲಾಗಿದ್ದಾರೆ. 82 ವರ್ಷದ ಪೆಲೆ ಅವರು ಕಿಮೊಥೆರಪಿಗೆ ಸ್ಪಂದಿಸುತ್ತಿಲ್ಲ ಎಂದು ವರದಿಯಾಗಿತ್ತು.

'ನನ್ನ ಮಿತ್ರರೇ, ಎಲ್ಲರೂ ಶಾಂತಚಿತ್ತರಾಗಿ ಇರಿ. ನಾನು ಚೆನ್ನಾಗಿದ್ದು ನನ್ನ ಚಿಕಿತ್ಸೆಯನ್ನು ಪಡೆಯುತ್ತಿದ್ದೇನೆ' ಎಂದಿದ್ದಾರೆ.

ಮೊದಲು ನನಗೆ ನಡೆದಾಡಲಿಕ್ಕೂ ಕಷ್ಟವಾಗುತ್ತಿತ್ತು ಆದರೀಗ ಓಡಾಡಬಲ್ಲವನಾಗಿದ್ದೇನೆ.

ಕೌಶಲ್ ಕಿಶೋರ್ ಆನಂದ್ (ವ್ಯಾಪಾರಿ)

ಹಿಂದೆ 15 ವರ್ಷಗಳಿಂದ ನಾನು ಮಂಡಿಗಳ ನೋವಿನಿಂದ ಬಳಲುತ್ತಿದ್ದೆ. ನಾನಾ ರೀತಿಯ ಚಿಕಿತ್ಸೆ ಪಡೆದರೂ, ವಿವಿಧ ತೈಲಗಳನ್ನು ಲೇಪಿಸಿದರೂ, ನಡೆದಾಡುವಾಗ ಮತ್ತು ಮೆಟ್ಟಿಲುಗಳನ್ನು ಏರುವಾಗ ನೋವಿನಿಂದ ನರಳುತ್ತಿದ್ದೆ. ಎಲ್ಲಿಗೂ ಹೋಗಿ ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಂತರ ಒಂದು ದಿನ ಚತುರ್ಭುಜ ತೈಲ ಮತ್ತು ಟ್ಯಾಬ್ಲೆಟ್ ಕುರಿತು ಮಾಹಿತಿ ಸಿಕ್ಕ ಬಳಿಕ, ಪ್ರತಿದಿನ ಬೆಳಗ್ಗೆ 1 ಮತ್ತು ರಾತ್ರಿ 1 ಚತುರ್ಭುಜ ಟ್ಯಾಬ್ಲೆಟ್ ಸೇವಿಸತೊಡಗಿದೆ ಮತ್ತು ಈ ನೋವು ಚರ್ಮದ ಮೇಲೆ ಇರುವುದಿಲ್ಲ, ಕೀಲುಗಳಲ್ಲಿ ಹಾಗೂ ಮಾಂಸಖಂಡಗಳಲ್ಲಿ ಇರುತ್ತದೆ ಎಂದು ನನಗೆ ತಿಳಿದಿದ್ದರಿಂದ ಯಾವುದೇ ಮುಲಾಜಿಲ್ಲದೆ ದಿನಕ್ಕೆ 3 ಬಾರಿ 8 ರಿಂದ 10 ಎಂ.ಎಲ್. ತೈಲದಿಂದ 15 ರಿಂದ 20 ನಿಮಿಷ ಚೆನ್ನಾಗಿ ಮಂಡಿಗಳನ್ನು ಮಾಲಿಷ್ ಮಾಡಿಕೊಂಡೆ. ಹೆಚ್ಚಿನ ಪ್ರಮಾಣದ ತೈಲದಿಂದ ಮಸಾಜ್ ಮಾಡಿಕೊಂಡಿದ್ದರಿಂದ, ತೈಲವು ಆಳದವರೆಗೆ ಇಳಿದು ಪ್ರಭಾವ ಬೀರಿತ್ತು ಮತ್ತು ನನಗೆ ಬಹುಬೇಗ ನಿವಾರಣೆ ಲಭಿಸಿತು. ಇದೀಗ ನಾನು ಎಲ್ಲಿಗೆ ಬೇಕಾದರೂ ಕಾಲ್ನಡಿಗೆಯಲ್ಲೇ ಹೋಗಿ ಬರುಬಂತಾಗಿದ್ದೇನೆ ಮತ್ತು ಮನೆಯ ಮೆಟ್ಟಿಲುಗಳನ್ನು ಓಡುತ್ತ ಏರಬಲ್ಲವನಾಗಿದ್ದೇನೆ. ನನ್ನ ಕುಟುಂಬ ಸದಸ್ಯರು ಚತುರ್ಭುಜ ತೈಲ ಮತ್ತು ಚತುರ್ಭುಜ ಟ್ಯಾಬ್ಲೆಟ್‌ಗಳನ್ನು ಹಲವಾರು ನೋವಿಗಾಗಿ ಬಳಸುತ್ತಿದ್ದಾರೆ ಮತ್ತು ನೋವುಗಳಿಂದ ಮುಕ್ತರಾಗುತ್ತಿದ್ದಾರೆ. ನನಗೆ ಇದರ ಫಲಿತಾಂಶ ಅತ್ಯಂತ ತೃಪ್ತಿ ನೀಡಿದೆ. ಎಲ್ಲಾ ಜನರು ನೋವುಗಳಿಂದ ಮುಕ್ತರಾಗಲಿ ಎಂಬ ಏಕೈಕ ಸಾರ್ವಜನಿಕ ಹಿತಾಸಕ್ತಿಯಿಂದ ಇಲ್ಲಿ ನನ್ನ ವೈಯಕ್ತಿಕ ಅನುಭವವನ್ನು ಹಂಚಿಕೊಳ್ಳುತ್ತಿದ್ದೇನೆ.

ಆಯುರ್ವೇದಿಕ ಔಷಧಿ
ಚತುರ್ಭುಜ®
ತೈಲ ಮತ್ತು ಟ್ಯಾಬ್ಲೆಟ್
ಎಲ್ಲಾ ಮೆಡಿಕಲ್ ಮತ್ತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ UID No. UK AD/35/2021

72198 21111 | BAJAJ FINANCE LTD - AF | BAJAJ SECURE • AMC • ROAD SIDE ASSISTANCE

#ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ. ಆಫರ್ ಆಯ್ದ ಮಾಡೆಲ್‌ಗಳ ಮೇಲೆ ಆಯ್ದ ಕ್ಷೇತ್ರಗಳಲ್ಲಿ ಲಭ್ಯ. *ಡೌನ್ ಪೇಮೆಂಟ್ ಪಲ್ಸರ್ 150 SD ವೇರಿಯಂಟ್‌ಗಾಗಿ ಇದೆ. ಡೌನ್ ಪೇಮೆಂಟ್‌ನಲ್ಲಿ ಪ್ರೋಸೆಸಿಂಗ್ ಫೀಸ್ ಹಾಗೂ ಇತರ ಚಾರ್ಜ್‌ಗಳು ಸೇರಿಲ್ಲ ಮತ್ತು ಕ್ರೆಡಿಟ್ ಪ್ಯಾರಾಮೀಟರ್‌ಗಳನ್ನು ಪೂರೈಸುವುದನ್ನು ಆಧರಿಸುತ್ತದೆ. ಸಾಲ ನೀಡಿಕೆಯು ಫೈನಾನ್ಸರ್‌ರ ಏಕೈಕ ನಿಷ್ಕರ್ಷೆಯ ಮೇರೆಗೆ ಇರುತ್ತದೆ. ಮುಂದಾಗಿ ಸೂಚನೆ ನೀಡದೆ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಹಿಂತೆಗೆಯುವ ಅಧಿಕಾರವನ್ನು ಬಜಾಜ್ ಆಟೋ ಕಾದಿರಿಸಿಕೊಂಡಿದೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli Mysore Rd** RV BAJAJ: 6360308373 • **Chandra Layout Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Mekhri Circle** KALYANI BAJAJ: 8884413595 • **Yelahanka** KALYANI BAJAJ: 9449849618 • **Mathikere** KALYANI BAJAJ: 8884430126 • **Chickbellapur** KALYANI BAJAJ: 8884413594 • **Devenhalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur** : KHIVRAJ BAJAJ: - 94494 04098 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 9620747153 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGAJAMPI BAJAJ: 988690116, JAGASHREE BAJAJ: 7349773962. • **Chikodi** JAGAJAMPI BAJAJ: 9449736406 • **Gokak** JAGAJAMPI BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8722182492 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** SHREE KAMAKSHI BAJAJ: 9845784351 • **Malur** SHREE KAMAKSHI BAJAJ: 9665524409 • **KGF** SHREE KAMAKSHI BAJAJ: 9900235758 • **Mulbagalu** SHREE KAMAKSHI BAJAJ: 8892616586 • **BANGARAPET** SHREE KAMAKSHI BAJAJ: 8970688361 • **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.